"ಗೀತಾ ನಾಗಭೂಷಣ ಅವರ ಧುಮ್ಮಸು ಕಾದಂಬರಿ ಒಂದು ಅಧ್ಯಯನ"

(ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ ಸಂಶೋಧನ ಕೇಂದ್ರ ಬೀದರ ಇವರಿಗೆ ಎಂ.ಫಿಲ್ ಅಂಶಿಕ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕರು
ಸುನೀತಾ ಸುಭಾಷ ಪಾಟೀಲ
ಎಂ.ಎ., ಬಿ.ಈಡಿ.

ಮಾರ್ಗದರ್ಶಕರು
ಡಾ. ಜಗನ್ನಾಥ ಹೆಬ್ಬಾಳೆ
ಎಂ.ಎ.,ಎಂ.ಫಿಲ್., ಪಿ.ಎಚ್‌ಡಿ.
ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ ಸಂಶೋಧನ ಕೇಂದ್ರ ಬೀದರ

ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬
೨೦೧೩-೧೪

1112

ನೊಂದಣಿ ಸಂಖ್ಯೆ: KRSBKS00657

"ಗೀತಾ ನಾಗಭೂಷಣ ಅವರ ಧುಮ್ಮಸು ಕಾದಂಬರಿ ಒಂದು ಅಧ್ಯಯನ"

(ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ ಸಂಶೋಧನ ಕೇಂದ್ರ ಬೀದರ ಇವರಿಗೆ ಎಂ.ಫಿಲ್. ಅಂಶಿಕ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕರು

ಸುನೀತಾ ಸುಭಾಷ ಪಾಟೀಲ

ಎಂ.ಎ., ಬಿ.ಈಡಿ.

ಮಾರ್ಗದರ್ಶಕರು

ಡಾ. ಜಗನ್ನಾಥ ಹೆಬ್ಬಾಳೆ

ಎಂ.ಎ.,ಎಂ.ಫಿಲ್., ಪಿ.ಎಚ್‌ಡಿ.

ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ ಸಂಶೋಧನ ಕೇಂದ್ರ ಬೀದರ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩೨೭೬

೨೦೧೩-೧೪

ಪ್ರಮಾಣ ಪತ್ರ

ಕು. ಸುನೀತಾ ಸುಭಾಷ ಪಾಟೀಲ ಇವರು ಕನ್ನಡ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದ ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ ಸಂಶೋಧನಾ ಕೇಂದ್ರ ಬೀದರನಲ್ಲಿ ಅಧ್ಯಯನ ಕೈಗೊಂಡು **"ಗೀತಾ ನಾಗಭೂಷಣ ಅವರ ಧುಮ್ಮಸು ಕಾದಂಬರಿ ಒಂದು ಅಧ್ಯಯನ"** ಎಂಬ ನಿಬಂಧವನ್ನು ಎಂ.ಫಿಲ್. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಇದು ಇವರ ಮೂಲ ನಿಬಂಧವಾಗಿದ್ದು. ಈ ಮೊದಲು ಇದು ಇಡಿಯಾಗಿ ಇಲ್ಲವೇ ಬಿಡಿಯಾಗಿ, ಎಲ್ಲಿಯೂ ಪ್ರಕಟವಾಗಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ.

ಸ್ಥಳ : ಬೀದರ
ದಿನಾಂಕ : 15/6/14

ಡಾ. ಜಗನ್ನಾಥ ಹೆಬ್ಬಾಳೆ
ಎಂ.ಎ.,ಎಂ.ಫಿಲ್., ಪಿ.ಎಚ್‌ಡಿ.
ಮಾರ್ಗದರ್ಶಕರು
ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ
ಸಂಶೋಧನ ಕೇಂದ್ರ ಬೀದರ.

ಘೋಷಣಾ ಪತ್ರ

"ಗೀತಾ ನಾಗಭೂಷಣ ಅವರ ಧುಮ್ಮಸು ಕಾದಂಬರಿ ಒಂದು ಅಧ್ಯಯನ" ಎಂಬ ನಿಬಂಧವನ್ನು ನಾನು **ಡಾ. ಜಗನ್ನಾಥ ಹೆಬ್ಬಾಳೆ** ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದು, ಇದನ್ನು ಇಡಿಯಾಗಿ ಇಲ್ಲವೇ ಬಿಡಿಯಾಗಿ ಎಲ್ಲಿಯೂ ಪ್ರಕಟಿಸಿಲ್ಲವೆಂದು ಪ್ರಮಾಣೀಕರಿಸುತ್ತಾ, ಕನ್ನಡ ವಿಶ್ವವಿದ್ಯಾಲಯಕ್ಕೆ **ಎಂ.ಫಿಲ್**. ಪದವಿಗಾಗಿ ಈ ನಿಬಂಧವನ್ನು ಸಾದರ ಪಡಿಸುತ್ತಿದ್ದೇನೆ.

ಸುನೀತಾ

ಸ್ಥಳ : ಬೀದರ

ದಿನಾಂಕ : 15-06-2014.

ಕು. ಸುನೀತಾ ಸುಭಾಷ ಪಾಟೀಲ

ಸಂಶೋಧನಾ ವಿದ್ಯಾರ್ಥಿನಿ

ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ

ಸಂಶೋಧನ ಕೇಂದ್ರ ಬೀದರ.



ಗೀತಾ ನಾಗಭೂಷಣ



ಪರಿವಿಡಿ

ಅಧ್ಯಾಯ-೧

ಪ್ರಸ್ತಾವನೆ :

೧) ಸಮಷ್ಟೀಕರಣ
೨) ಅಧ್ಯಯನದ ಫಲಿತಗಳು
೩) ಅಧ್ಯಯನದ ಉದ್ದೇಶ
೪) ಅಧ್ಯಯನದ ವಿಧಾನಗಳು
೫) ಅಧ್ಯಯನದ ಊಹೆಗಳು

ಅಧ್ಯಾಯ -೧

ಪ್ರಸ್ತಾವನೆ :

ಆಧುನಿಕ ಎಂಬ ಪರಿಕಲ್ಪನೆ ಮನುಷ್ಯನ ನಾಗರಿಕತೆಯ ಬೆಳವಣಿಗೆಯನ್ನು ಸೂಚಿಸುತ್ತದೆ. ಪ್ರತಿ ಹಂತದಲ್ಲೂ ಮನುಷ್ಯ ಬೆಳವಣಿಗೆ ಹೊಂದುತ್ತಾ ಅನೇಕ ಅನುಭವಗಳನ್ನು ಪಡೆದು ಹೊಸ ಹೊಸ ಅನ್ವೇಷಣೆ ಮಾಡಲು ತುಡಿಯುತ್ತಾನೆ. ಇದರ ಪರಿಣಾಮವಾಗಿ ಹೊಸದನ್ನು ಹುಟ್ಟು ಹಾಕಲು ಪ್ರಯತ್ನಿಸುತ್ತಾನೆ. ಆಧುನಿಕತೆ ಎಂಬ ಪ್ರಕ್ರಿಯೆ ಸ್ಥಳದಿಂದ ಸ್ಥಳಕ್ಕೆ ಕಾಲದಿಂದ ಕಾಲಕ್ಕೆ ಬದಲಾವಣೆ ಹೊಂದುತ್ತದೆ. ಆದಿ ಮಾನವನ ಕಾಲದಿಂದ ಇಂದಿನವರೆಗೆ ಮನುಷ್ಯ ಅವಶ್ಯಕತೆ, ಅನುಕೂಲತೆ, ಬೌದ್ಧಿಕ ಜ್ಞಾನ, ತಾಂತ್ರಿಕ ಜ್ಞಾನ ಮುಂತಾದವುಗಳು ಪೂರಕವೂ ಪೋಷಕವೂ ಆಗಿ ನಿಲ್ಲುತ್ತವೆ.

ಆದಿ ಮಾನವನ ಜೀವನ ಶೈಲಿಗೆ ಇಂದಿನ ಜೀವನವನ್ನು ತುಲನೆ ಮಾಡಿದಾಗ ಬದಲಾವಣೆಯ ಮಹಾಪೂರವನ್ನು ಕಾಣುತ್ತೇವೆ. ಜೀವನ ಹರಿಯುವ ನೀರಿನಂತೆ ನಿರಂತರವಾಗಿ ಹರಿಯುವುದೇ ಅದರ ನಿಯಮ. ಹತ್ತು ವರ್ಷದ ಹಿಂದೆ ಇದ್ದಂತಹ ಜೀವನ ಶೈಲಿ ಈಗ ಇಲ್ಲ. ಇನ್ನು ಮುಂದೆ ಇಪ್ಪತ್ತೈದು ವರ್ಷದಲ್ಲಿ ನಮ್ಮ ಜೀವನಗತಿ ಬಹುಕಾಲ ಬದಲಾವಣೆ ಹೊಂದುವುದರಲ್ಲಿ ಯಾವ ಸಂಶಯವೂ ಇಲ್ಲ. ನಿನ್ನೆಗೆ ಇಂದು ಹೊಸದು. ಇಂದಿಗೆ ನಾಳೆ ಹೊಸದು ಅಂತೆಯೇ ಆಧುನಿಕತೆ ಕೂಡ ಒಂದೊಮ್ಮೆ ಮನುಷ್ಯ ಸಂಪರ್ಕವೇ ಇಲ್ಲದಿದ್ದ ಅದೆಷ್ಟೊ ಕಾಡುಮೇಡುಗಳಲ್ಲಿ ಕ್ರಮೇಣ ಮನುಷ್ಯ ವಾಸ ಪ್ರಾರಂಭವಾಗಿ ಕಾಲಕ್ರಮದಲ್ಲಿ ಕಾಡು ಕಡಿದು, ನಾಡುಕಟ್ಟಿ ನಾಗರಿಕತೆಯನ್ನು ಬೆಳೆಸಿದ್ದು ಈಗ ಇತಿಹಾಸ.

ಮಾನವ ಜೀವ ಸಂಕುಲದಲ್ಲೆ ವಿಶಿಷ್ಟ ಛಾಪು ಮೂಡಿಸಿದೆ ಬುದ್ಧಿವಂತ ಜೀವಿ. ಮಾನವನ ಕುತೂಹಲ ಮತ್ತು ಆಸಕ್ತಿ ಪ್ರತಿನಿತ್ಯ ಹೊಸ ಹೊಸದನ್ನು ಕಾಣುವ ಮತ್ತು ಕಂಡುಹಿಡಿಯುವ ಪ್ರಯತ್ನಕ್ಕೆ ಅವನನ್ನು ದೂಡಿದೆ. ಹಸಿ-ಹಸಿಯಾದ ಆಹಾರ, ಗೆಡ್ಡೆ-ಗೆಣಸು ತಿನ್ನುತ್ತಿದ್ದ ಮಾನವ ಆಕಸ್ಮಿಕವಾಗಿ ಬೆಂದ ಆಹಾರ ತಿಂದು ಅದರಲ್ಲಿ ರುಚಿಯನ್ನು ಗುರುತಿಸಿ ಆಹಾರ ಪದಾರ್ಥಗಳನ್ನು ಬೇಯಿಸಿ ತಿನ್ನುವುದನ್ನು ಕಲಿತುಕೊಂಡ ಪ್ರಾಚೀನ ಮಾನವ. ಇಂದು ಹಕ್ಕಿಯಂತೆ ಮುಗಿಲೆತ್ತರಕ್ಕೆ ಹಾರಬಲ್ಲ. ಸಾಗರದ ತಳದಲ್ಲಿ ವಿಹರಿಸಿಬರಲಿಲ್ಲ. ಕೇವಲ ಕಂಪ್ಯೂಟರ್ ಗುಂಡಿಯನ್ನು ಒತ್ತುವುದರ ಮೂಲಕ ತನ್ನ ಅವಶ್ಯಕತೆಗಳನ್ನು ಕ್ಷಣ ಮಾತ್ರದಲ್ಲಿ ಪೂರೈಸಿಕೊಳ್ಳಬಲ್ಲ. ಮನುಷ್ಯನ ಇಷ್ಟೆಲ್ಲಾ ಸಾಧನೆಗೆ ಕಾರಣ. ಅವನಿಗೆ ಉಂಟಾದ ಕುತೂಹಲ, ಆಸಕ್ತಿ, ಹೊಸದನ್ನು ಕಾಣುವ, ಕಟ್ಟುವ, ಸೃಷ್ಟಿಸುವ ಮನಸ್ಥಿತಿ ಇದು ಕೇವಲ ವಿಜ್ಞಾನದ ಯಂತ್ರಗಳಿಗೆ ಮಾತ್ರ ಸಂಬಂಧಿಸಿದ್ದಲ್ಲ. ಅಂತಹ ಹೊಸತನ ಸಾಹಿತ್ಯ ಕೃಷಿಯಲ್ಲೂ ಸಾಧ್ಯವೆನ್ನುವುದಕ್ಕೆ ನಮ್ಮ ಸಾಹಿತ್ಯ ಸಾಗಿ ಬಂದಿರುವುದೇ ಸಾಕ್ಷಿ.

ಭಾರತೀಯ ಸಾಹಿತ್ಯ ಪರಂಪರೆಯಲ್ಲಿ ಕನ್ನಡ ಸಾಹಿತ್ಯವು ತುಂಬಾ ವಿಶಿಷ್ಟವಾದ ಸ್ಥಾನವನ್ನು ಹೊಂದಿದೆ. ಕನ್ನಡ ಸಾಹಿತ್ಯವು ಪ್ರಾಚೀನ ಕಾಲದಿಂದ ಇಂದಿನ ಆಧುನಿಕ ಯುಗದವರೆಗೂ ಹಲವಾರು ಪ್ರಕಾರ ಹಾಗೂ ವೈವಿಧ್ಯಗಳಲ್ಲಿ ಹೊರ ಹೊಮ್ಮಿರುವುದು ಕಂಡು ಬರುತ್ತದೆ. ಅಂದಿನಿಂದ, ಇಂದಿನವರೆಗೂ ಕನ್ನಡವನ್ನು ಉಳಿಸುವಲ್ಲಿ ಕನ್ನಡಕ್ಕೆ ನೀರೆರೆದು ಬೆಳಸಿದ ಮಹನೀಯರ ಸಂಖ್ಯೆ ಗಣನೀಯವಾದದ್ದು. ಹೊಸಗನ್ನಡ ಸಾಹಿತ್ಯವು ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ವಿನೂತನ ಅಧ್ಯಾಯವನ್ನೆ ತೆರೆಯಿತು. ಈ ಹೊಸಗನ್ನಡ ಸಾಹಿತ್ಯವು ಆಂಗ್ಲ ಸಾಹಿತ್ಯದ ಸ್ಫೂರ್ತಿಯಿಂದ ತನ್ನದೇ ಆದ ಮಾರ್ಗದಲ್ಲಿ ಭೋರ್ಗರೆಯುತ್ತಾ, ಒಂದು ಸ್ವತಂತ್ರ ಪ್ರವಾಹವಾಗಿ ಮುಂದುವರೆಯಿತು. ಈ ಸಂದರ್ಭದಲ್ಲಿ ಕನ್ನಡ ಸಾಹಿತ್ಯದ ರೆಂಬೆಕೊಂಬೆಗಳಿಗೆ ಹೊಸ ಚಿಗುರು ಅಂಕುರಿಸಲು ಆರಂಭವಾಯಿತು.

ಆಧುನಿಕ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಕಂಡು ಬಂದಿರುವ ಇತ್ತೀಚಿನ ಪ್ರಮುಖ ಮಜಲು ಮಹಿಳಾ ಸಾಹಿತ್ಯ. ಮಹಿಳಾ ಸಾಹಿತ್ಯ ಕ್ಷೇತ್ರದಲ್ಲಿ ಸ್ಮರಿಸಲೇಬೇಕಾದ ಮೇರು ಲೇಖಕಿ ಗೀತಾನಾಗಭೂಷಣ. ತಮ್ಮ ನೆಲದ ಆಡು ಭಾಷೆಯನ್ನು ಬರಹದಲ್ಲಿ ಮೈಗೂಡಿಸಿಕೊಂಡು ಕಥೆ ಕಾದಂಬರಿಗಳಲ್ಲಿ ವಿಶಿಷ್ಟ ಪ್ರಯೋಗಗಳನ್ನು ಮಾಡಿ ತಮ್ಮದೇ ಆದ ವಿಶಿಷ್ಟ ಛಾಪು ಮೂಡಿಸಿದ್ದಾರೆ. ಅನೇಕ ಪ್ರಥಮಗಳನ್ನು ಮುಡಿಗೇರಿಸಿಕೊಂಡ ಪ್ರಸಿದ್ಧ ಲೇಖಕಿ ಗೀತಾನಾಗಭೂಷಣ. ಕೇಂದ್ರ ಸಾಹಿತ್ಯ ಅಕಾಡೇಮಿಯ ಪ್ರಶಸ್ತಿಯನ್ನು ಪಡೆದ ಕನ್ನಡದ ಪ್ರಪ್ರಥಮ ಲೇಖಕಿ. ಕನ್ನಡ ವಿಶ್ವವಿದ್ಯಾನಿಲಯ ಹಂಪಿಯಿಂದ 'ನಾಡೋಜ' ಪದವಿಯನ್ನು ತಮ್ಮದಾಗಿಸಿಕೊಂಡ ಪ್ರಥಮ ಮಹಿಳೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಇತಿಹಾಸದಲ್ಲೇ ಅದರ ಅಧ್ಯಕ್ಷಸ್ಥಾನ ಪಡೆದಿದ್ದ ಪ್ರಥಮ ಮಹಿಳೆ ಇವರು ಹೀಗೆ ಅನೇಕ ಪ್ರಥಮಗಳ ಜೊತೆಗೆ ಇವರು ಹಲವಾರು ಪ್ರತಿಷ್ಠಿತ ಪ್ರಶಸ್ತಿ ಮತ್ತು ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ.

ಸ್ವಾತಂತ್ರ್ಯ ಪೂರ್ವದಲ್ಲಿ ಗೀತಾನಾಗಭೂಷಣ ಅನಕ್ಷರಸ್ಥ ಕಡುಬಡ ಕುಟುಂಬದಲ್ಲಿ ಜನಿಸಿದರು. ಮೇಲ್ವರ್ಗದವರ ಹೀಗಳಿಕೆ, ಅವಮಾನಗಳನ್ನು ಸಹಿಸಿಕೊಂಡೇ ಅಕ್ಷರಾಭ್ಯಾಸ ಮಾಡಿ ಛಲದಿಂದ ವಿದ್ಯೆಯ ಸಾಕಾರ ಪಡೆದವರು. ಅನೇಕ ಕಷ್ಟ ನಷ್ಟಗಳ ಪ್ರತಿಕೂಲ ಪರಿಸ್ಥಿತಿಗಳು ಮನುಷ್ಯನನ್ನು ಬಲಿ ತೆಗೆದುಕೊಳ್ಳುತ್ತವೆ. ಆದರೆ ಆ ಪರಿಸ್ಥಿತಿಯಿಂದ ಸಿಡಿದು ಹೊರಬಂದು ತಮ್ಮತನವನ್ನು ಕಂಡುಕೊಂಡು ಸಮಾಜಕ್ಕೆ ಉತ್ತಮ ಕೊಡುಗೆ ನೀಡುವವರು ತುಂಬಾ ಅಪರೂಪ. ಈ ರೀತಿಯ ಅಪರೂಪದ ವ್ಯಕ್ತಿತ್ವ ಹೊಂದಿರುವ ಅಪರೂಪದ ಲೇಖಕಿ ಗೀತಾನಾಗಭೂಷಣ, ಲೇಖಕಿ ತಮ್ಮನ್ನು ಯಾವುದೇ ಗುಂಪಿನಲ್ಲಿ ಗುರುತಿಸಿಕೊಂಡು ಚೌಕಟ್ಟು ನಿರ್ಮಿಸಿಕೊಳ್ಳಲು ಪ್ರಯತ್ನಿಸಿಲ್ಲ. ಆದರೆ ಅವರ ಕೃತಿಗಳು ಆಯಾ ಸಂದರ್ಭದ ಸಾಮಾಜಿಕ ಸ್ಥಿತಿಗತಿ, ರಾಜಕೀಯ, ಧಾರ್ಮಿಕ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಪ್ರೇರಣೆಯನ್ನು ಪಡೆದಿವೆ ಎಂಬುದು ಅವರ ಕೃತಿಗಳನ್ನು ಅವಲೋಕಿಸಿದವರಿಗೆ ತಿಳಿಯುತ್ತದೆ.

ಗೀತಾನಾಗಭೂಷಣ ತಮ್ಮ ಕಥೆ-ಕಾದಂಬರಿಗಳಲ್ಲಿ ಶೋಷಣೆಯ ವಿರುದ್ಧ ಬಂಡಾಯ ಧೋರಣೆ ವ್ಯಕ್ತಪಡಿಸಿರುವುದಲ್ಲದೇ ಸಹಜವಾಗಿ ಸ್ತ್ರೀಯರ ನೋವಿಗೆ ಮಿಡಿಯುತ್ತಾರೆ. ಸ್ತ್ರೀವಾದಿ ನೆಲೆಯಲ್ಲಿ ನಿಂತು ತಮ್ಮ ಸಾಹಿತ್ಯಕೃಷಿ ಮಾಡುವ ಇವರನ್ನು ಸ್ತ್ರೀವಾದಿ ಲೇಖಕಿಯರ ಸಾಲಿನಲ್ಲಿ ಗುರುತಿಸಬಹುದು.

ಸಮಷ್ಟೀಕರಣ :

ಹೊಸಗನ್ನಡ ಸಾಹಿತ್ಯದ ಸಂದರ್ಭದಲ್ಲಿ ಪಾಶ್ಚಾತ್ಯ ಪ್ರಭಾವದಿಂದ ಸಣ್ಣಕಥೆ, ಕಾದಂಬರಿ, ನಾಟಕ, ಕಾವ್ಯ, ಪ್ರಬಂಧ, ವಿಮರ್ಶೆ, ಮಕ್ಕಳ ಸಾಹಿತ್ಯ, ಅನುವಾದ ಮುಂತಾದ ಪ್ರಕಾರಗಳು ಭರದಿಂದ ಸಾಗಲು ಆರಂಭವಾಯಿತು. ಈ ಸಂದರ್ಭದಲ್ಲಿ ಕಾದಂಬರಿ ಪ್ರಕಾರವು ತುಂಬಾ ಪ್ರಭಾವ ಪೂರ್ಣವಾಗಿ ಹೊರಹೊಮ್ಮಿ ಬಹುಜನರನ್ನು ಆಕರ್ಷಿಸಿತು. ಈ ನಿಟ್ಟಿನಲ್ಲಿ ಸಮಾಜದಲ್ಲಿ ತುಳಿತಕ್ಕೆ ಒಳಪಟ್ಟವರೆಂದು ಪರಿಗಣಿಸಿರುವ ವರ್ಗದಲ್ಲಿ ಹುಟ್ಟಿ ಅನೇಕ ಕಷ್ಟಕಾರ್ಪಣ್ಯಗಳ ನಡುವೆ ಬೆಳೆದ ಲೇಖಕಿ ಭಿನ್ನ ನೆಲೆಗಳಲ್ಲಿ ನಿಂತು ಸಮಾಜದ ಎಲ್ಲ ಮುಖಗಳನ್ನು ದರ್ಶಿಸುವ ಕಾದಂಬರಿಗಳನ್ನು ಬರೆದಿದ್ದಾರೆ.

ಗೀತಾರವರ 'ಧುಮ್ಮಸು' ಕಾದಂಬರಿ ಸಂಪ್ರಬಂಧಕ್ಕೆ ಆಯ್ಕೆ ಮಾಡಿಕೊಳ್ಳಲು ಕಾರಣ? ಅವರ ಅನುಭವಗಳ ಪರಿಪಕ್ವ ಪಾಕದಂತಿರುವ ಕಾದಂಬರಿಯನ್ನು ಅಧ್ಯಯನಕ್ಕೆ ಒಳಪಡಿಸಿ, ವಿಶ್ಲೇಷಣೆಯ ಮೂಲಕ ಕಾದಂಬರಿಯಲ್ಲಿ ನೈಜತೆ ಮತ್ತು ಸಾಮಾಜಿಕ ಕಳಕಳಿಯನ್ನು ಹೊರಗೆಳೆದು ತೋರುವ ಅಗತ್ಯವಿದೆ ಎನ್ನುವುದರ ಕಾರಣ ~~ನಾನು~~ ಈ 'ಧುಮ್ಮಸು' ಕಾದಂಬರಿಯನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿದ್ದೇನೆ.

ಶೋಷಣೆ ಎಂದರೇನು? ಎಂಬ ಪ್ರಶ್ನೆಗೆ ನಿಜವಾದ ಉತ್ತರ ಇವರ 'ಧುಮ್ಮಸು' ಕಾದಂಬರಿಯಲ್ಲಿ ತಿಳಿಯಬೇಕು. ಶೋಷಣೆಯನ್ನು ಚಿತ್ರಿಸುವುದರ ಜೊತೆಗೆ ಅದರ ವಿರುದ್ಧ ಪ್ರತಿಭಟನೆಯ ಧ್ವನಿಗಳನ್ನು ಹಾಗೂ ಬಂಡಾಯವನ್ನು ಚಿತ್ರಿಸಿ ಸಮಾಜದ ಪ್ರತಿಯೊಬ್ಬ ವ್ಯಕ್ತಿಯನ್ನು ಎಚ್ಚರಿಸಿ ಪ್ರಜ್ಞಾಸ್ಥಿತಿಗೆ ತಂದು ಯೋಚನೆಯ ಆಳಕ್ಕೆ ನೂಕುವ ವಿಶಿಷ್ಟ ಕಾದಂಬರಿಗಳನ್ನು ಗೀತಾ ನಾಗಭೂಷಣ ಅವರು ರಚಿಸಿದ್ದಾರೆ.

ಸಾಮಾಜಿಕ ದೃಷ್ಟಿಯಲ್ಲಿ ಈ ಕಾದಂಬರಿಯ ಚಿತ್ರಣವೇನು? ಭಾಷಾ ಸೊಗಡು ತುಂಬಿರುವ ಅವರ ಈ 'ಧುಮಸ್ಸು' ಕಾದಂಬರಿಯಲ್ಲಿ ಕೆಳವರ್ಗದ ಜನರ ಮತ್ತು ದಲಿತರ ನೋವಿನ ಚೀತ್ಕಾರ ಅಡಗಿದರೂ, ಆ ಜನರು ನೋವಿನಿಂದಲೇ ಸಿಡಿದೆದ್ದು ತಮ್ಮ ಹಕ್ಕುಗಳಿಗಾಗಿ ದೃಢವಾದ ಹೋರಾಟವನ್ನು ನಡೆಸಿ ಬಹುಕಾಲ ಯಶಸ್ವಿಯಾಗಿದ್ದಾರೆಂಬಂತೆ ಲೇಖಕಿ ಚಿತ್ರಿಸಿದ್ದಾರೆ. ಸಮಾಜದಲ್ಲಿರುವ ಎಲ್ಲಾ ಸ್ತ್ರೀಯರು ಒಂದಲ್ಲಾ ಒಂದು ರೀತಿಯಲ್ಲಿ ಶೋಷಣೆಗೆ ಒಳಪಟ್ಟವರೇ ಎಂಬುದನ್ನು ಲೇಖಕಿ ತಮ್ಮ ಕಾದಂಬರಿಯಲ್ಲಿ ಬಿಂಬಿಸಿದ್ದಾರೆ.

ಗೀತಾರವರು ತಮ್ಮ ಕಾದಂಬರಿಯಲ್ಲಿ ಸ್ತ್ರೀ ಪಾತ್ರವನ್ನು ಕೇಂದ್ರ ಬಿಂದುವಾಗಿ ಮಾಡಲು ಕಾರಣವೇನು? ಹೆಣ್ಣು ಮಾನಸಿಕವಾಗಿ ಹಾಗೂ ದೈಹಿಕವಾಗಿ ಶೋಷಣೆಗೆ ಒಳಪಡುವ ವಿವಿಧ ರೀತಿಗಳನ್ನು ಕೃತಿಗಳಲ್ಲಿ ಕಟ್ಟಿಕೊಡುವ ಲೇಖಕಿಯ ಸ್ತ್ರೀಪರವಾದ ನಿಲುವುಗಳು ಶ್ಲಾಘನೀಯವಾದವುಗಳಾಗಿವೆ. ಪಟ್ಟಣದ ಕೊಳಗೇರಿಗಳ ಮತ್ತು ಹಳ್ಳಿಯ ಝೋಪಡಿಪಟ್ಟಿಗಳ ಸ್ತ್ರೀಯರ ಬದುಕು, ದುಡಿಮೆಗಾರರ, ಕೂಲಿಕಾರರ ದುರವಸ್ಥೆಯನ್ನು ಸಮಗ್ರವಾಗಿ ಕೃತಿಗಳಲ್ಲಿ ಚಿತ್ರಿಸಿದ್ದಾರೆ. ಮೇಲ್ವರ್ಗ, ಕೆಳವರ್ಗ ಎಂಬ ಭೇದವಿಲ್ಲದೇ ಎಲ್ಲ ಸ್ತ್ರೀಯರು ಶೋಷಣೆಗೆ ತುತ್ತಾಗುವ ಬಗೆ ಹಾಗೂ ಶೋಷಣೆಯನ್ನು ಮೆಟ್ಟಿ ನಿಂತು ಪ್ರತಿಭಟಿಸುವ ಎದೆಗಾರಿಕೆಯ ಸ್ತ್ರೀ ಪಾತ್ರಗಳು ಇವರ ಕಾದಂಬರಿಗಳ ಕೇಂದ್ರ ಬಿಂದುಗಳಾಗಿ ಗೋಚರಿಸುತ್ತವೆ.

ಗೀತಾರವರಿಗೆ ಕಾದಂಬರಿ ಬರೆಯಲು ಪ್ರಮುಖ ಪ್ರೇರಣೆಗಳಾವವು? ಹಿಂದುಳಿದ ಉತ್ತರ ಕರ್ನಾಟಕದ ಜನರ ಜೀವನ ಇವರ ಕೃತಿಗಳಲ್ಲಿ ಚಿತ್ರಣಗೊಂಡಿದೆ. ಆ ಭಾಗದ ಜನರ ಸಂಸ್ಕೃತಿ, ಜೀವನ ರೀತಿ ನೀತಿಗಳೇ ಲೇಖಕಿಯ ಬರಹಕ್ಕೆ ಸ್ಫೂರ್ತಿ ನೀಡಿರುವ ಪ್ರಮುಖ ಪ್ರೇರಣೆಗಳಾಗಿವೆ. ಬಡದುಡಿಮೆಗಾರರ, ಒಕ್ಕಲು ಮಕ್ಕಳ ಮತ್ತು ದಲಿತರ ಸಾವಿರಾರು ವರ್ಷಗಳ ಸಾವು ನೋವುಗಳ ಚರಿತ್ರೆಯೇ ಇವರ ಕಾದಂಬರಿಯಲ್ಲಿ ಅಡಗಿಕೊಂಡಿವೆ.

ಲೇಖಕಿ ಗೀತಾರವರು ಕಾದಂಬರಿ ಬರೆಯಲು ಮುಖ್ಯ ಕಾರಣವೇನು? ಇವರ ಕಾದಂಬರಿಯಲ್ಲಿ ತೀವ್ರ ಪ್ರತಿಭಟನಾ ಧ್ವನಿಗಳು ಬಂಡಾಯ ಧೋರಣೆ, ದಲಿತ ಮತ್ತು ಸ್ತ್ರೀ ಸಂವೇದನೆಗಳು ದಟ್ಟವಾಗಿ ಶಕ್ತಿಯುತವಾಗಿ ಮೂಡಿಬಂದು ಅವರು ಕಂಡುಂಡಂತಹ ಜೀವನಾನುಭವವೇ ಕಾರಣ.

ಗೀತಾರವರ ಕಾದಂಬರಿಯಲ್ಲಿ ಹಿಂದುಳಿದವರ, ಶೋಷಿತ ಜನತೆಯ ದಮನಕ್ಕೊಳಪಟ್ಟವರ ಜೀವನ ಚಿತ್ರಣ ಹೆಚ್ಚಾಗಿ ಏಕೆ ಕಂಡು ಬರುತ್ತವೆ? ತಲತಲಾಂತರಗಳಿಂದ ದಮನಕ್ಕೆ ಒಳಗಾದವನು, ಆರ್ಥಿಕವಾಗಿ ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಸಂಸ್ಕೃತಿಕವಾಗಿ ಶೋಷಣೆಗೆ ಒಳಪಟ್ಟವನನ್ನು, ದಲಿತ ಎಂದು ಕರೆಯುತ್ತಾರೆ. ಗೀತಾ ನಾಗಭೂಷಣರವರ ಕಾದಂಬರಿಯಲ್ಲಿ ಹಿಂದುಳಿದವರ, ಶೋಷಿತ ಜನತೆಯ, ದಮನಕ್ಕೊಳಪಟ್ಟವರ ಜೀವನ ಚಿತ್ರಣವಿದೆ. ಝೋಪಡಿಗಳಲ್ಲಿ ವಾಸಿಸುವ ದಲಿತ ಜನರು ಸಿರಿವಂತರ ತುಳಿತಕ್ಕೆ ಒಳಗಾಗುವ ಎಲ್ಲ ಪರಿಸ್ಥಿತಿಗಳನ್ನು ಕಾದಂಬರಿಯಲ್ಲಿ ಲೇಖಕಿ ಕಟ್ಟಿಕೊಟ್ಟಿದ್ದಾರೆ.

ಗೀತಾ ನಾಗಭೂಷಣ ಅವರು ತಮ್ಮ 'ಧುಮ್ಮಸು' ಕಾದಂಬರಿ ಮೂಲಕ ಸಮಾಜಕ್ಕೆ ಏನು ಹೇಳಲು ಪ್ರಯತ್ನ ಪಟ್ಟಿದ್ದಾರೆ? ಲೇಖಕಿ ಗುಟ್ಟು ಗುಲ್ಲಾಗಿಸೋದು ಬೇಡ ಗೆಳಯಾ ಎನ್ನುತ್ತಲೇ

ಸಮಾಜದಲ್ಲಿ ನಡೆಯುವ ಶೋಷಣೆ, ಅನ್ಯಾಯ ದೌರ್ಜನ್ಯಗಳು ಹಾಗೂ ದೊಡ್ಡವರ ಗುಟ್ಟುಗಳನ್ನು ತಮ್ಮ ಕಾದಂಬರಿಯಲ್ಲಿ ರಟ್ಟಾಗಿಸುತ್ತಾರೆ. ಅನೇಕ ಸತ್ಯಗಳು ಮನುಷ್ಯನ ಅಂತರಂಗದಲ್ಲಿಯೇ ಉಳಿದು ಹೊರಬರಲಾಗದೇ ಆತನ ಸಾವಿನೊಂದಿಗೆ ಅವೂ ಅಂತ್ಯವಾಗುತ್ತವೆ. ಅಂತಹ ಕಹಿ ಸತ್ಯಗಳನ್ನು ಲೇಖಕಿ ತಮ್ಮ ಕಾದಂಬರಿಯಲ್ಲಿ ಸಂಕೇತ ಪ್ರತಿಮೆಗಳ ಮೂಲಕ ಹೊರಗೆಳೆಯುವ ಪ್ರಯತ್ನ ಮಾಡಿದ್ದಾರೆ. ಲೇಖಕಿ ತಮ್ಮ ಕಾದಂಬರಿಯಲ್ಲಿ ವಸ್ತುವನ್ನು ಗುಲಬರ್ಗಾ ಜಿಲ್ಲೆಯ ಸುತ್ತಮುತ್ತಲ ಜನರ ಜೀವನದಿಂದಲೇ ಆಯ್ದುಕೊಂಡಿದ್ದಾರೆ. ಕತ್ತಲ ಲೋಕದಲ್ಲಿ ನರಳಿ ಮರೆಯಾಗುತ್ತಿರುವ ಮಂದಿಯನ್ನು ಚಿತ್ರಿಸುವ ಲೇಖಕಿ ಎಲ್ಲರಂತೆ ಈ ಜನರೂ ಸರ್ಕಾರದ ಸವಲತ್ತು ಪಡೆದು ನೆಮ್ಮದಿಯ ಜೀವನವನ್ನು ಸಾಗಿಸಬೇಕು ಎಂಬ ಹೆಬ್ಬಯಕೆಯೊಂದಿಗೆ ಬರಹಕ್ಕೆ ತೊಡಗಿದ್ದಾರೆ. ಲೇಖಕಿ ಬರಹದ ಮೂಲಕ ಸಮಾಜದ ಜನರ ಮತ್ತು ಸರ್ಕಾರದ ಕಣ್ಣು ತೆರೆಸುವ ಪ್ರಯತ್ನ ಮಾಡಿದ್ದಾರೆಂದೇ ಹೇಳಬಹುದು.

ಒಟ್ಟಾರೆಯಾಗಿ ಈ 'ಧುಮ್ಮಸು' ಪದದ ಅರ್ಥವೇನು? 'ಧುಮ್ಮಸು' ಎಂದರೆ ನೆಲವನ್ನು ಇಲ್ಲವೇ ತಾರಸಿಯನ್ನು ಬಡಿದು ಗಟ್ಟಿಗೊಳಿಸಲು ಬಳಸುವ ಕಬ್ಬಿಣದ ಅಥವಾ ಮರದ ಉಪಕರಣ.

ಅಧ್ಯಯನದ ವಿಧಾನಗಳು :

ಗೀತಾ ನಾಗಭೂಷಣ ಅವರು ತಮ್ಮ ಬಹುಪಾಲು ಕಾದಂಬರಿಯಲ್ಲಿ ಹೈದರಾಬಾದ್ ಕರ್ನಾಟಕದ ಆಡು ಭಾಷೆಯನ್ನು ಹೇರಳವಾಗಿ ಬಳಸಿದ್ದಾರೆ. ಗೀತಾ ಅವರು ತಮ್ಮ ಕಾದಂಬರಿಯಲ್ಲಿ ವಸ್ತುವನ್ನು ಅಲ್ಲಿನ ಪರಿಸರದಿಂದಲೇ ಆಯ್ದುಕೊಂಡಿರುವುದರಿಂದ ಅವರ ಪ್ರಾದೇಶಿಕ ಭಾಷಾ ಬಳಕೆಯು ಬರಹಕ್ಕೆ ಗಟ್ಟಿತನ ಮತ್ತು ಒಂದು ಬಗೆಯ ವೈಶಿಷ್ಟವನ್ನು ತಂದುಕೊಟ್ಟಿದೆ. ಚಂದ್ರಶೇಖರ ಕಂಬಾರರು ಬರೆದ ಸಿಂಗಾರವ್ವ ಮತ್ತು ಅರಮನೆ ಓದಿದ ಅನಂತರ ಅದನ್ನು ಬಹುವಾಗಿ ಮೆಚ್ಚಿಕೊಂಡರು. ಈ ಕಾದಂಬರಿಯ ಭಾಷೆಯನ್ನು ಓದಿದ ಮೇಲೆ ಅವರಿಗೆ ಧೈರ್ಯ ಬಂದಿತ್ತು. ಅಲ್ಲಿಂದ ಅವರು ಹಿಂದೆ ನೋಡಲೇ ಇಲ್ಲ. ಅನಂತರ ಅವರು ತಮ್ಮದೇ ಆಡುಭಾಷೆಯಲ್ಲಿ ಕಾದಂಬರಿ ರಚನೆಗೆ ತೊಡಗಿದರು.

ಇಷ್ಟೆಲ್ಲ ದೃಷ್ಟಿಕೋನದ ಮೂಲಕ ನಾನು ನನ್ನ ಅಧ್ಯಯನಕ್ಕೆ ಗೀತಾ ನಾಗಭೂಷಣ ಅವರ ಕಾದಂಬರಿ ಆಯ್ಕೆ ಮಾಡಿಕೊಳ್ಳಲು ಕಾರಣವಾಯಿತು. ಗೀತಾರವರಿಗೆ ನೇರವಾಗಿ ಸಂದರ್ಶಿಸಿ ಅವರಿಂದ ನನ್ನ ಅಧ್ಯಯನಕ್ಕೆ ಸಂಬಂಧಪಟ್ಟಂತೆ ಕಾದಂಬರಿಯನ್ನು ಪಡೆಯಲಾಯಿತು. ಅದೇ ರೀತಿ 'ಗೀತಾನಾಗಭೂಷಣ ಅವರ ಕಥಾನಕಗಳ ವಿಮರ್ಶಾತ್ಮಕ ಅಧ್ಯಯನ ಎಂಬ ಮೈಸೂರು ವಿಶ್ವವಿದ್ಯಾಲಯದ ಡಾ|| ಎಸ್. ಶಶಿರೇಖಾ ಅವರ ಮಹಾ ಪ್ರಬಂಧವನ್ನು ಪಡೆಯಲಾಯಿತು. ಗುಲಬರ್ಗಾ ವಿಶ್ವವಿದ್ಯಾಲಯ ಗ್ರಂಥಾಲಯಕ್ಕೆ ಭೇಟಿಕೊಟ್ಟು ಮಹಾಪ್ರಬಂಧ ಹಾಗೂ ಸಂಪ್ರಬಂಧಗಳನ್ನು ನನ್ನ

ಅಧ್ಯಯನಕ್ಕೆ ಬಳಸಿಕೊಳ್ಳಲಾಯಿತು. ಗೀತಾನಾಗಭೂಷಣ ಕುರಿತು ಲೇಖಕನವನ್ನು ಡಾ॥ ಪ್ರಧಾನ್ ಗುರುದತ್ತ ಅವರ ಸಂಪಾದನೆಯ ಮೂಲಕ ಕೂಡ ಅಧ್ಯಯನಕ್ಕೆ ಹೆಚ್ಚಿನ ಮಾಹಿತಿಗಾಗಿ ಉಪಯೋಗಿಸಲಾಯಿತು.

ಅಧ್ಯಯನದ ಫಲಿತಗಳು :

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ವಿಭಿನ್ನವಾದ ಕಾದಂಬರಿಗಳನ್ನು ಕೊಟ್ಟ ಕೀರ್ತಿ ಗೀತಾ ನಾಗಭೂಷಣ ಅವರದು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ 'ಹಂಪಿ ಕನ್ನಡ ವಿಶ್ವವಿದ್ಯಾನಿಲಯದ 'ನಾಡೋಜ' ಪ್ರಶಸ್ತಿಯಾದಿಯಾಗಿ ಅನೇಕ ಪುರಸ್ಕಾರಗಳನ್ನು ಪಡೆದಿರುವ ಇವರ ಕಾದಂಬರಿಗಳು ವಿಶಿಷ್ಟವಾದ ನೆಲೆಯಲ್ಲಿ ನಿಲ್ಲುತ್ತವೆ. ಗೀತಾ ನಾಗಭೂಷಣ ಅವರು ಕಾದಂಬರಿಗೆ ಆಯ್ದುಕೊಳ್ಳುವ ವಿಶಿಷ್ಟ ಕಥಾವಸ್ತು, ನಿರೂಪಣಾ ಶೈಲಿಗಳಿಂದಲೇ ಸಾಹಿತ್ಯ ಲೋಕದ ಸಹೃದಯರ ಮೆಚ್ಚುಗೆಗಳಿಸುತ್ತಾರೆ. ಹೈದ್ರಾಬಾದ್ ಕರ್ನಾಟಕದ ಜನ ಜೀವನವನ್ನು ಕಣ್ಣಾರೆ ಕಂಡು ಅನುಭವಿಸಿರುವ ಲೇಖಕಿಯು ಅದನ್ನು ಸೂಕ್ಷ್ಮ ನೆಲೆಯಲ್ಲಿ ಅವಲೋಕಿಸಿ ತಮ್ಮ ಬರಹದಲ್ಲಿ ಹಿಡಿದಿಡುವಲ್ಲಿ ಯಶಸ್ವಿಯಾಗಿದ್ದಾರೆ.

ಈ ಹಿನ್ನೆಲೆಯಲ್ಲಿ ನನ್ನ ಸಂಪ್ರಬಂಧಕ್ಕೆ ಅವಶ್ಯಕವಿರುವ ಕೆಲವು ಪ್ರಶ್ನೆಗಳನ್ನು ಈ ಕೆಳಗಿನ ರೀತಿ ತಿಳಿಯಪಡಿಸುತ್ತೇನೆ.

೧. ಗೀತಾ ನಾಗಭೂಷಣ ಅವರ 'ಧುಮ್ಮಸು' ಕಾದಂಬರಿ ನನ್ನ ಸಂಪ್ರಬಂಧಕ್ಕೆ ಆಯ್ಕೆ ಮಾಡಿಕೊಳ್ಳಲು ಕಾರಣ?
೨. 'ಶೋಷಣೆ' ಎಂದರೇನು?
೩. ಸಾಮಾಜಿಕ ದೃಷ್ಟಿಯಲ್ಲಿ ಈ ಕಾದಂಬರಿಯ ಚಿತ್ರಣವೇನು?
೪. ಗೀತಾರವರು ತಮ್ಮ ಕಾದಂಬರಿಯಲ್ಲಿ ಸ್ತ್ರೀ ಪಾತ್ರವನ್ನು ಕೇಂದ್ರ ಬಿಂದುವಾಗಿ ಮಾಡಲು ಕಾರಣವೇನು?
೫. ಗೀತಾರವರಿಗೆ ಕಾದಂಬರಿ ಬರೆಯಲು ಪ್ರಮುಖ ಪ್ರೇರಣೆಗಳಾವವು?
೬. ಲೇಖಕಿ ಗೀತಾರವರು ಕಾದಂಬರಿ ಬರೆಯಲು ಮುಖ್ಯ ಕಾರಣವೇನು?

೭. ಗೀತಾರವರ ಕಾದಂಬರಿಯಲ್ಲಿ ಹಿಂದುಳಿದವರ, ಶೋಷಿತ ಜನತೆಯ ದಮನಕೊಳಪಟ್ಟವರ ಜೀವನ ಚಿತ್ರಣ ಹೆಚ್ಚಾಗಿ ಏಕೆ, ಕಂಡು ಬರುತ್ತವೆ.?

೮. ಲೇಖಕಿ ಗೀತಾರವರು ತಮ್ಮ 'ಧುಮ್ಮಸು' ಕಾದಂಬರಿ ಮೂಲಕ ಸಮಾಜಕ್ಕೆ ಏನು ಹೇಳಲು ಪ್ರಯತ್ನ ಪಟ್ಟಿದ್ದಾರೆ.?

೯. ಒಟ್ಟಾರೆಯಾಗಿ ಈ 'ಧುಮ್ಮಸು' ಎಂದರೇನು?

ಕನ್ನಡ ಕಾದಂಬರಿ ಸಾಹಿತ್ಯಕ್ಕೆ ಗೀತಾ ನಾಗಭೂಷಣ ಅವರ ಕೊಡುಗೆ ಅನನ್ಯಯವಾದುದು. ಅವರ ಬರವಣಿಗೆಗಳು ಕನ್ನಡ ಸಾಹಿತ್ಯದ ವಿಸ್ತಾರವನ್ನು ಹೆಚ್ಚಿಸಿದೆ. ಸಾಹಿತ್ಯದಲ್ಲಿ ಇದುವರೆಗೆ ದಾಖಲಾಗದೇ ಹೋಗಿರುವ, ಸಮಾಜದ ಅಂಚಿನಲ್ಲಿರುವ, ದಮನಕ್ಕೆ ಒಳಗಾದವರ ಬದುಕನ್ನು ಅವರು ತಮ್ಮ ಕೃತಿಗಳಲ್ಲಿ ತೆರೆದಿಟ್ಟಿದ್ದಾರೆ. ಶೋಷಣೆಗೊಳಪಟ್ಟ ಜನರ ಬದುಕಿನ ಸಂಕೀರ್ಣ ಅನುಭವಗಳು ಗೀತಾ ಅವರ ಲೇಖನಿಯಲ್ಲಿ ಸೃಜನಶೀಲ ಅಭಿವ್ಯಕ್ತಿಯಾಗಿ ಪ್ರಕಟಗೊಂಡಿವೆ. ಈ ಸಾಹಿತ್ಯದ ಅನುಭವ ಕಟ್ಟಿಕೊಡುವ ಸೈದ್ಧಾಂತಿಕ ತಾತ್ವಿಕತೆ ದಲಿತ ಚಳವಳಿಗೆ ಮಾರ್ಗದರ್ಶಕವಾಗಬಲ್ಲುದೇ ಎಂಬುದು ಇನ್ನೂ ಹೆಚ್ಚಿನ ಚರ್ಚೆಗೊಳಗಾಗಬೇಕಾದ ವಿಷಯವಾಗಿದೆ.

ಅಧ್ಯಯನದ ಉದ್ದೇಶ :

ಕನ್ನಡ ಸಾಹಿತ್ಯ ಚರಿತ್ರೆಯು ಒಂದು ಸಾವಿರವರ್ಷಕ್ಕಿಂತ ಹೆಚ್ಚಿನ ಇತಿಹಾಸವನ್ನು ಹೊಂದಿದೆ. ಆಯಾ ಕಾಲಕ್ಕೆ ತಕ್ಕಂತೆ ವಸ್ತು, ಆಶಯ, ಧೋರಣೆ, ಭಾಷೆ, ದೃಷ್ಟಿಕೋನ ಮತ್ತು ಅಭಿವ್ಯಕ್ತಿ ಎಲ್ಲವೂ ಬದಲಾಗುತ್ತಾ ಸಾಗಿರುವುದನ್ನು ಸಾಹಿತ್ಯ ಪರಂಪರೆಯಲ್ಲಿ ಕಾಣಬಹುದಾಗಿದೆ. ಕನ್ನಡ ಸಾಹಿತ್ಯ ಚರಿತ್ರೆಯನ್ನು ಅವಲೋಕಿಸಿದಾಗ ಅದು ಬೆಳೆದು ಬಂದಿರುವ ಅನೇಕ ಘಟ್ಟಗಳನ್ನು ನಾವು ನೋಡಬಹುದಾಗಿದೆ. ಆಧುನಿಕ ಕನ್ನಡ ಸಾಹಿತ್ಯ ಸಂದರ್ಭವಂತೂ ಸಾಹಿತ್ಯ ಕ್ಷೇತ್ರದ ಸುಗ್ಗಿಯ ಕಾಲ ನವೋದಯ, ಪ್ರಗತಿಶೀಲ, ನವ್ಯ, ದಲಿತ ಬಂಡಾಯ ಎಂಬ ವೈವಿಧ್ಯಮಯವಾದ ಸಾಹಿತ್ಯ ಪಂಥಗಳಲ್ಲಿ ಸಾಗಿರುವ ಆಧುನಿಕ ಕನ್ನಡ ಸಾಹಿತ್ಯ ತನ್ನ ಎಲ್ಲೆಯನ್ನು ವಿಸ್ತರಿಸಿಕೊಂಡು ಬೃಹದಾಕಾರವಾಗಿ ಬೆಳೆದು ನಿಂತಿದೆ. ಹೊಸಗನ್ನಡ ಸಾಹಿತ್ಯಕ್ಕೆ ಮಹಿಳೆಯರ ಕೊಡುಗೆ ಅಪಾರವಾದದ್ದು. ದಲಿತ-ಬಂಡಾಯ ಸಾಹಿತ್ಯ ಸಂದರ್ಭದಲ್ಲಿ ಬಂದಂತಹ ಲೇಖಕಿಯರು ಸಾಹಿತ್ಯ ಕ್ಷೇತ್ರಕ್ಕೆ ನೀಡಿರುವ ಕೊಡುಗೆ ಅಮೂಲ್ಯವಾದದ್ದು. ಸ್ತ್ರೀಪರ ಧೋರಣೆಯುಳ್ಳ ಅನೇಕ ಲೇಖಕಿಯರು ವಿಭಿನ್ನ ಕೃತಿರಚನೆಯಲ್ಲಿ ತೊಡಗಿದ್ದಾರೆ. ಅವರಲ್ಲಿ ಪ್ರಮುಖರಾಗಿ ಕಂಡು ಬರುವ 'ಗೀತಾ ನಾಗಭೂಷಣ' ಅವರ 'ಧುಮ್ಮಸು' ಕಾದಂಬರಿ ಅಧ್ಯಯನವೇ ನನ್ನ ಸಂಶೋಧನೆಯ ಮುಖ್ಯ ಉದ್ದೇಶವಾಗಿದೆ.

ಶ್ರೀಮತಿ ಗೀತಾ ನಾಗಭೂಷಣ ಅವರು ಸ್ವಾತಂತ್ರ್ಯ ಪೂರ್ವದಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಹುಟ್ಟಿದವರು. ಸ್ತ್ರೀಯರಿಗೆ ವಿದ್ಯೆ ಎಂಬುದೇ ಕನಸಾಗಿದ್ದ ಸಂದರ್ಭದಲ್ಲಿ ಇವರು ಕಷ್ಟಪಟ್ಟು ಅಧ್ಯಯನಕ್ಕೆ ತೊಡಗಿ ವಿದ್ಯೆಯ ಸಾಕಾರ ಪಡೆದು ತನ್ನ ಜನತೆಯ ನೋವಿಗೆ ಮಿಡಿದು, ಅವರ ಮೌನರೋದನವನ್ನು ಕೃತಿಯಲ್ಲಿ ಸಾಕಾರಗೊಳಿಸಿ ಬರಹದ ಮೂಲಕ ಬಂಡಾಯದಲ್ಲಿ ತೊಡಗಿದ್ದಾರೆ. ಪುರುಷ ಪ್ರಧಾನ ವ್ಯವಸ್ಥೆಯ ವಿಕೃತವನ್ನು ಸ್ತ್ರೀಯರ ಹೀನಾಯ ಸ್ಥಿತಿಯನ್ನು ಮೇಲ್ವರ್ಗ ಕೆಳವರ್ಗದ ಜನತೆಯಾದಿಯಾಗಿ ಸಮಾಜದ ಆಗುಹೋಗುಗಳನ್ನು ಜಮೀನ್ದಾರಿ ವ್ಯವಸ್ಥೆಯ ಅಮಾನವೀಯ ವರ್ತನೆಗಳನ್ನು ತಮ್ಮ ಕಾದಂಬರಿಯ ಕೇಂದ್ರವಾಗಿಟ್ಟುಕೊಂಡು ಕೆಳಗೇರಿ ಮತ್ತು ಕೊಳಗೇರಿಯ ಜನರ ಚರಿತ್ರೆಯನ್ನೇ ತಮ್ಮ ಕಾದಂಬರಿಯಲ್ಲಿ ದಾಖಲಿಸಿದ್ದಾರೆ. ಇವರ ಕೃತಿಗಳ ಅಧ್ಯಯನ ತೀರಾ ವಿರಳವಾಗಿ ನಡೆದಿದೆ. ಇವರ ಕಾದಂಬರಿಗಳ ಬಗ್ಗೆ ಸಮಗ್ರವಾದ ಅಧ್ಯಯನ ತೀರಾ ವಿರಳವಾಗಿ ನಡೆದಿದೆ. ಇವರ ಕಾದಂಬರಿಗಳ ಬಗ್ಗೆ ಸಮಗ್ರವಾದ ಅಧ್ಯಯನ ಹೊರಬಂದಿಲ್ಲ. ಅಲ್ಲಲ್ಲಿ ಕೆಲವು ವಿಚಾರಗೋಷ್ಠಿಗಳು ನಡೆದಿವೆಯೇ ಹೊರತು ಇವರ ಕಾದಂಬರಿಗಳನ್ನು ವಿಮರ್ಶಿಸುವ, ಒರೆಗೆ ಹಚ್ಚುವ ಕಾರ್ಯವು ಸಮಗ್ರವಾಗಿ ನಡೆದಿಲ್ಲ. ಇವರ ಎಲ್ಲ ಕಾದಂಬರಿಗಳನ್ನು ವೀಕ್ಷಿಸಿದಾಗ 'ಧುಮ್ಮಸು' ಕಾದಂಬರಿ ಅಧ್ಯಯನ ಎಂಬ ಶೀರ್ಷಿಕೆಯಡಿ ಸಂಶೋಧನೆಗೆ ಒಳಪಡಿಸಿ ಸಮಗ್ರವಾಗಿ ವಿಶ್ಲೇಷಣೆಗೆ ಒಳಪಡಿಸುವುದು ಈ ಸಂಪ್ರಬಂಧದ ಮುಖ್ಯ ಉದ್ದೇಶವೂ ಆಗಿದೆ.

ಗೀತಾ ನಾಗಭೂಷಣ ಅವರ ಈ 'ಧುಮ್ಮಸು' ಕಾದಂಬರಿ ಆಧರಿಸಿ ಈ ಸಂಪ್ರಬಂಧ ರಚನೆಗೊಳ್ಳುತ್ತಿರುವುದರಿಂದ ಲೇಖಕಿಯ ಜೀವನ, ಅವರು ನಡೆದುಬಂದ ಹಾದಿ ಮತ್ತು ಅವರ ಜೀವನಾನುಭವಗಳ ಬಗ್ಗೆ ಚರ್ಚಿಸುವುದು ಸೂಕ್ತವೆನಿಸಿದೆ. ಇವರ ಕಾದಂಬರಿಯಲ್ಲಿ ತೀವ್ರ ಪ್ರತಿಭಟನಾ ಧ್ವನಿಗಳು, ಬಂಡಾಯ ಧೋರಣೆ, ದಲಿತ ಮತ್ತು ಸ್ತ್ರೀ ಸಂವೇದನೆಗಳು ದಟ್ಟವಾಗಿ ಶಕ್ತಿಯುತವಾಗಿ ಮೂಡಿಬರಲು ಅವರು ಕಂಡುಂಡಂತಹ ಜೀವನಾನುಭವವೇ ಕಾರಣ. ಅವುಗಳ ಬಗ್ಗೆ ಚರ್ಚಿಸುವುದು ಕೂಡ ಈ ಅಧ್ಯಯನದ ಉದ್ದೇಶವಾಗಿದೆ.

ಗೀತಾ ನಾಗಭೂಷಣ ಅವರು ತಮ್ಮ ಬಹುಪಾಲು ಕಾದಂಬರಿಯಲ್ಲಿ ಹೈದರಾಬಾದ ಕರ್ನಾಟಕದ ಆಡುಭಾಷೆಯನ್ನು ಹೇರಳವಾಗಿ ಬಳಸಿದ್ದಾರೆ. ಗೀತಾ ಅವರು ತಮ್ಮ ಕಾದಂಬರಿಯಲ್ಲಿ ವಸ್ತುವನ್ನು ಅಲ್ಲಿನ ಪರಿಸರದಿಂದಲೇ ಆಯ್ದುಕೊಂಡಿರುವುದರಿಂದ ಅವರ ಪ್ರಾದೇಶಿಕ ಭಾಷಾ ಬಳಕೆಯು ಬರಹಕ್ಕೆ ಗಟ್ಟಿತನ ಮತ್ತು ಒಂದು ಬಗೆಯ ವೈಶಿಷ್ಟವನ್ನು ತಂದುಕೊಟ್ಟಿದೆ. ಪರಿಸರ, ವಸ್ತು, ಪಾತ್ರಗಳು, ಉಡುಗೆ-ತೊಡುಗೆ, ಸಂಸ್ಕೃತಿ ಎಲ್ಲವೂ ಆ ಪ್ರದೇಶದ ಪ್ರಭಾವ ಪ್ರೇರಣೆಗಳಿಂದಲೇ ಸ್ವೀಕೃತವಾದಾಗ ಸಹಜವಾಗಿಯೇ ಆ ಪ್ರದೇಶದ ಭಾಷೆ ಕೃತಿಗಳಲ್ಲಿ ಸಾಕಾರಗೊಂಡಿದೆ. ಹೈದರಾಬಾದ್ ಕರ್ನಾಟಕದ ಆಡು ಭಾಷೆಯಲ್ಲಿ

ಉರ್ದು, ಮರಾಠಿ, ಹಿಂದಿ ಪದಗಳ ಮಿಶ್ರಣವನ್ನು ಕಾಣಬಹುದು. ಇವರ ಕಾದಂಬರಿಯಲ್ಲಿ ಶಿಷ್ಟ ಭಾಷೆಯ ಬಳಕೆ ತುಂಬಾ ವಿರಳ; ಇವರ ಬಹುಪಾಲು ಸಾಹಿತ್ಯ ಕಲ್ಬುರ್ಗಿಯ ಆಡು ಭಾಷೆಯಲ್ಲಿ ರಚನೆಯಾಗಿದೆ. ಲೇಖಕಿ ತಮ್ಮ ಕೃತಿಗಳಲ್ಲಿ ವರ್ಣನೆಗೆ ಬಳಸುರವ ಭಾಷೆ, ಪ್ರೌಢ ಗದ್ಯದ ರಚನೆ, ಹೆಸರಿನ ಪ್ರಯೋಗಗಳು, ಅನ್ಯಭಾಷಾ ಪದಗಳು ಬೈಗುಳಗಳನ್ನು ತಂದಿರುವ ರೀತಿ, ಭಾಷೆಯಲ್ಲಿ ಸಂಸ್ಕೃತಿಯನ್ನು ಕಟ್ಟಿಕೊಡುವ ರೀತಿ ಮುಂತಾದವುಗಳನ್ನು ವಿವಿಧ ನೆಲೆಗಳಲ್ಲಿ ಸಮಗ್ರವಾಗಿ ವಿಶ್ಲೇಷಿಸಲಾಗಿದೆ.

ಅಧ್ಯಯನದ ಊಹೆಗಳು :

ಗೀತಾರವರು ಆರಂಭದಲ್ಲಿ ಜನಪ್ರೀಯ ಮಾದರಿಯ ಶಿಷ್ಟ ಭಾಷೆಯಲ್ಲಿಯೇ ಕಾದಂಬರಿಗಳನ್ನು ರಚಿಸುತ್ತಾ ಇದ್ದರು. ಒಮ್ಮೆ ಚಂದ್ರಶೇಖರ ಕಂಬಾರರು ಬರೆದ ಸಿಂಗಾರವ್ವ ಮತ್ತು ಅರಮನೆ ಓದಿದ ಅನಂತರ ಅದನ್ನು ಬಹುವಾಗಿ ಮೆಚ್ಚಿಕೊಂಡರು ಈ ಕಾದಂಬರಿಯ ಭಾಷೆಯನ್ನು ಓದಿದ ಮೇಲೆ ಅವರಿಗೆ ಧೈರ್ಯ ಬಂದಿತ್ತು. ಅಲ್ಲಿಂದ ಅವರು ಹಿಂದೆ ನೋಡಲೇ ಇಲ್ಲ. ಅನಂತರ ಅವರು ತಮ್ಮದೇ ಆಡುಭಾಷೆಯಲ್ಲಿ ಕಾದಂಬರಿ ರಚನೆಗೆ ತೊಡಗಿದರು. ಅವರ ಸಮಾಜದ ಹೆಣ್ಣು ಮಕ್ಕಳ ಬಗ್ಗೆ ಕಥೆ ಬರೆಯಲು ಆರಂಭಿಸಿದರು. ಸುಧಾ ವಾರಪತ್ರಿಕೆಯ ಎಂ.ಬಿ. ಸಿಂಗ್ ಅವರಿಂದ ಅವರಿಗೆ ತುಂಬ ಪ್ರೋತ್ಸಾಹ ಸಿಕ್ಕಿತು. ಅವರ ಪತ್ರಿಕೆಯಲ್ಲಿ ಗೀತಾ ಅವರ ಕಥೆಗಳು ಪ್ರಕಟವಾಗಲು ಆರಂಭಿಸಿದವು. ಇದರಿಂದ ಅವರಿಗೆ ಸ್ವಲ್ಪ ಧೈರ್ಯ ಬಂತು. ಚಿಕ್ಕಂದಿನಿಂದಲೂ ಮನಸ್ಸಿನಲ್ಲಿ ಕಾಡುತ್ತಿದ್ದ ನೂರಾರು ಪ್ರಶ್ನೆಗಳಿಗೆ ಮೂರ್ತರೂಪ ಕೊಡಲು ಆರಂಭಿಸಿದರು. ಜೋಗಣಿಯ ಹರಕೆ ಹೊತ್ತು ಸೂಳೆಗಾರಿಕೆಗೆ ಇಳಿಯುತ್ತಿದ್ದವರು ತೀರ ಕೆಳಜಾತಿಯ ಹೊಲೆ ಮಾದಿಗರು. ಮೇಲು ಜಾತಿಯ ಹೆಂಗಸರ್ಯಾರೂ ಇಂಥ ಹರಕೆ ಹೊರುತ್ತಿರಲಿಲ್ಲ. ಆ 'ಹರಕೆ' ಒಂದು ಸಂಪ್ರದಾಯವಾಗಿ ಬೆಳೆದು ಬಂದದ್ದು ಬರೀ ದಲಿತರಲ್ಲಿ ಮಾತ್ರವೆಂಬ ಸಂಗತಿ ಅವರಿಗೆ ಇನ್ನಷ್ಟು ನೋವು ತಂದಿತು. ಮೇಲ್ಜಾತಿ, ವರ್ಗಗಳ ಹೆಣ್ಣುಗಳಿಗೆ ಬೆತ್ತಲೆ ಸೇವೆ, ಜೋಗಿಣಿಯ ಹರಕೆಗಳ ಹಂಗಿಲ್ಲ. ಬದಲಿಗೆ ಅವರು ದೇವಿಗೆ ಪೂಜೆ ನೈವೇದ್ಯ ಮಾಡುತ್ತಿದ್ದರು. ಇಂತಹ ರೂಢಿ ರಿವಾಜುಗಳನ್ನು ಮಾಡಿದ ಮೇಲ್ಜಾತಿಯವರ ಚಾಲಾಕುತನದ ಸಂಚುಗಳನ್ನೆಲ್ಲ ಬರೆಹದ ಮೂಲಕ ಬದಲಿಗಿಡುವ ಸಂಕಲ್ಪದಿಂದ ಬರವಣಿಗೆಯಲ್ಲಿ ತೊಡಗಿಸಿಕೊಂಡರು. ಇಲ್ಲಿಂದ ಅವರಿಗೆ ತಮ್ಮ ಬರವಣಿಗೆಯ ದಿಕ್ಕು ಸ್ಪಷ್ಟವಾಯಿತು.

ಗೀತಾ ನಾಗಭೂಷಣ ಅವರು ತಳಸಮುದಾಯಗಳ ವಿವಿಧ ನೆಲೆಯ ಸಂವೇದನೆಯನ್ನು ತಮ್ಮ ಕೃತಿಗಳಲ್ಲಿ ಸಶಕ್ತವಾಗಿ ಅನಾವರಣಗೊಳಿಸುವುದರ ಮೂಲಕ ಕನ್ನಡದ ಶ್ರೇಷ್ಠ ಬರಹಗಾರ್ತಿಯಾಗಿ ಹೆಸರು ಮಾಡಿದವರು. ಅವರ ಬದುಕಿನ ನೋವು ದುಮ್ಮಾನಗಳೇ ಅವರ ಕೃತಿಗಳ ಮೂಲಕ ಮೂಡಿಬಂದಿರುವ ಅನುಭವವೂ ಸಹೃದಯರಿಗೆ ಆದರೆ ಅಚ್ಚರಿ ಪಡಬೇಕಾಗಿಲ್ಲ. ಸ್ವತಃ ತಳಸಮುದಾಯದ ಅನಕ್ಷರಸ್ಥ ಬಡಕುಟುಂಬದಲ್ಲಿ ಜನಿಸಿರುವ ಗೀತಾ ಅವರು ತುಂಬ ಕಷ್ಟದಿಂದ ಬದುಕನ್ನು ರೂಪಿಸಿಕೊಂಡ ದಿಟ್ಟ ಮಹಿಳೆ ಹೈದ್ರಾಬಾದ್ ಕರ್ನಾಟಕದ ಹಳ್ಳಿ ಪಟ್ಟಣಗಳ, ಕೆಳಗೇರಿ ಕೊಳಗೇರಿಗಳ ಮತ್ತು ಝೋಪಡಿ ಪಟ್ಟಿಗಳ ದೀನ ದಲಿತರ, ಬಡವರ ಬದುಕಿನ, ಸಮಸ್ತ, ಅರಿವು ಇರುವ ಗೀತಾ ಅವರು ತಮ್ಮ ಈ 'ಧುಮ್ಮಸು' ಕಾದಂಬರಿಯಲ್ಲಿ ಆ ರಿಕ್ತಬದುಕನ್ನು ಅತ್ಯಂತ ಸಹಜವಾಗಿ ಪ್ರಾದೇಶಿಕ ಭಾಷೆಯಲ್ಲಿ ಕಟ್ಟಿಕೊಟ್ಟಿದ್ದಾರೆ. ಹಾಗಾಗಿಯೇ ಕನ್ನಡದಲ್ಲಿ ಮಿಕ್ಕ ಲೇಖಕಿಯರಿಗಿಂತ ಗೀತಾ ಭಿನ್ನವಾಗಿ ನಿಂತುಕೊಳ್ಳುತ್ತಾರೆ. ತಮ್ಮ ಕೃತಿಗಳ ಸತ್ವ ಮತ್ತು ಮಹತ್ತಿನಿಂದಾಗಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಕನ್ನಡದ ಮೊದಲ ಲೇಖಕಿ ಎಂಬ ಹೆಗ್ಗಳಿಕೆಗೂ ಪಾತ್ರರಾಗಿದ್ದಾರೆ.

ಅಧ್ಯಾಯ-೨

ಗೀತಾ ನಾಗಭೂಷಣ ಅವರ ಜೀವನ ಮತ್ತು ಸಾಹಿತ್ಯಕ ಕೊಡುಗೆ

ಅಧ್ಯಾಯ-೨

ಗೀತಾ ನಾಗಭೂಷಣ ಅವರ ಜೀವನ ಮತ್ತು ಸಾಹಿತ್ಯಿಕ ಕೊಡುಗೆ

ಗೀತಾ ನಾಗಭೂಷಣ ಅವರು ಮಧ್ಯಮ ವರ್ಗದ ಕುಟುಂಬದಲ್ಲಿ ಹುಟ್ಟಿ ಬಾಲ್ಯದಿಂದಲೂ ಕಡುಬಡತನದಲ್ಲಿಯೇ ಬೆಳೆದರು. ಚಿಕ್ಕಂದಿನಲ್ಲಿಯೇ ಅಪಾರ ದುಃಖವನ್ನು ಅನುಭವಿಸಿದವರು. ಹೊಟ್ಟೆ ಬಟ್ಟೆಯ ಜೊತೆಗೆ ವಿದ್ಯಾಭ್ಯಾಸದಕ್ಕಾಗಿ ಸಾಕಷ್ಟು ಶ್ರಮಪಟ್ಟು ಜೀವನದುದಕ್ಕೂ ಜೀವನದ ಅರ್ಥ ಶೋಧನೆಯಲ್ಲಿ ತೊಡಗಿ, ತತ್ವಶಾಸ್ತ್ರ ಅಧ್ಯಯನ ಮಾಡಿಕೊಂಡು ಕಾದಂಬರಿಗಳನ್ನು ರಚಿಸುವ ಹವ್ಯಾಸ ಬೆಳೆಸಿಕೊಂಡರು. ಕಾದಂಬರಿ ಕ್ಷೇತ್ರದಲ್ಲಿ ಅಗ್ರಗಣ್ಯರಾದರು. ಹಂತ ಹಂತವಾಗಿ ನಡೆಸಿದ ಅವರ ಜೀವನದ ಹೋರಾಟವನ್ನು ನೋಡಿದರೆ ಎಂಥವರಿಗೂ ಬದುಕುವ ಮಾರ್ಗ ಮತ್ತು ಛಲವನ್ನು ಸೂಚಿಸುತ್ತದೆ.

ಗೀತಾ ರವರು ಬಂಡಾಯ ಸಾಹಿತ್ಯ ಸಂದರ್ಭದಲ್ಲಿ ಬಂದ ಪ್ರಮುಖ ಲೇಖಕಿ ಯಾವುದೇ ವಾದಗಳಿಗೆ ಒಳಪಡದೆ, ಮಾನವೀಯತೆಯ ಚೌಕಟ್ಟಿನಲ್ಲಿ ನಿಂತು ವಾಸ್ತವದ ಘಟನೆಗಳ ಬೆನ್ಹತ್ತಿ ಕಂಡದ್ದನ್ನು, ಅನುಭವಿಸಿದ್ದನ್ನು ಹಾಗೂ ಸ್ತ್ರೀ ಶೋಷಣೆಯ ಆಳ-ಅಗಲಗಳನ್ನು ಕೃತಿಗಳಲ್ಲಿ ಚಿತ್ರಿಸಿದ್ದಾರೆ. ದಲಿತ ಹಾಗೂ ಕೆಳವರ್ಗಗಳ ಜನರ ಶೋಚನೀಯ ಬದುಕನ್ನು, ಎಲ್ಲ ವರ್ಗದ ಸ್ತ್ರೀಯರ ನೋವನ್ನು ಕಟ್ಟಿಕೊಡುವ ಈ ಲೇಖಕಿ ಬೆಳೆದು ಬಂದ ಪರಿಸರವನ್ನು ಮುಖ್ಯವಾಗಿ ಗಮನಿಸಬೇಕಾಗುತ್ತದೆ.

ಬದುಕು ಕಲಿಸಿರುವ ಪಾಠ, ಕೊಟ್ಟ ಅನುಭವ, ಅನುಭವಿಸಿದ ಕಷ್ಟ ಪರಂಪರೆಗಳು ಗೀತಾ ಅವರನ್ನು ಬಂಡಾಯ ಗಾರ್ತಿಯಾಗಿ ರೂಪಿಸಿದೆ. ಗೀತಾ ಅವರ ಕೃತಿಗಳನ್ನು ಅವಲೋಕಿಸುವವರಿಗೆ ಅವರು ಬೆಳೆದು ಬಂದ ಪರಿಸರ ಮತ್ತು ಜೀವನ ರೂಪಿಸಿಕೊಂಡ ಬಗೆ ಹಾಗೂ ಅವರ ವ್ಯಕ್ತಿತ್ವದ ಬಗ್ಗೆ ಸಂಕ್ಷಿಪ್ತವಾಗಿ ಪರಿಚಯಿಸುವುದು ಸೂಕ್ತವೆನಿಸುತ್ತದೆ. ಗೀತಾ ಅವರ ಜೀವನವೇ ಒಂದು ಹೋರಾಟ. ಜೀವನ ಕೊಟ್ಟ ಪರಿತಾಪ ಅವರಲ್ಲಿ ಬಂಡಾಯದ ಪ್ರವೃತ್ತಿಯನ್ನು ಬೆಳೆಸಿದೆ. ಸಮಾಜದಲ್ಲಿ ಗೀತಾ ಅವರು ಅನುಭವಿಸಿದ ನೋವುಗಳು, ಕಂಡ ಹಿಂಸೆ, ಶೋಷಣೆಗಳು ಬರೆಯುವ ಅವರ ತುಡಿತವನ್ನು ಅಧಿಕಗೊಳಿಸಿವೆ. ಅವರ ಮನದಲ್ಲಿ ಶೋಷಣೆಯ ವಿರುದ್ಧವಾಗಿ ಮೂಡಿದ ಬಂಡಾಯ, ಪ್ರತಿರೋಧಗಳು ಬರಹದ ಮುಖೇನ ಅಭಿವ್ಯಕ್ತಗೊಂಡಿವೆ.

ಬಾಲ್ಯಜೀವನ ಮತ್ತು ವಿದ್ಯಾಭ್ಯಾಸ :

ಗೀತಾ ನಾಗಭೂಷಣ ಅವರು ಅನಕ್ಷರಸ್ಥ ಕಡುಬಡ ಕುಟುಂಬದಲ್ಲಿ ಜನಿಸಿದವರು. ಇವರ ತಂದೆ ತಾಯಿಗೆ ಅಕ್ಷರಜ್ಞಾನವಿಲ್ಲದ ಕಾರಣ ಇವರು ಹುಟ್ಟಿದ ದಿನ, ದಿನಾಂಕಗಳನ್ನು ಅವರು ದಾಖಲು ಮಾಡಿಲ್ಲ. ಗೀತಾ ಅವರ ಮೊದಲ ಹೆಸರು 'ಶಾಂತ' ಎಂದಾಗಿತ್ತು. ಇವರ ತಂದೆ ಶಾಂತಪ್ಪ ಸಾವಳಗಿ, ತಾಯಿ ಶರಣಮ್ಮ ತಂದೆಯ ಊರು ಸಾವಳಗಿ ಶಾಂತಪ್ಪ ಗುಲಬರ್ಗಾದ ಎಂ.ಎಸ್.ಕೆ.ಮಿಲ್. ನಲ್ಲಿ ಕೂಲಿ ಕೆಲಸಗಾರರಾಗಿದ್ದರು. ಈ ದಂಪತಿಗಳಿಗೆ ಗೀತಾ ಅವರು ಚೊಚ್ಚಲ ಮಗುವಾಗಿ ಭೀಮಳ್ಳಿಯಲ್ಲಿ ಹುಟ್ಟಿದರು. ಗೀತಾ ಅವರಿಗೆ ನಾಲ್ಕು ವರ್ಷ ತುಂಬುವ ವೇಳೆಗೆ ಅವರ ಮನೆಯ ಸ್ಥಿತಿಗತಿ ಮತ್ತಷ್ಟು ಹದಗೆಡುತ್ತದೆ. ಶಾಂತಪ್ಪ ಸಾವಳಗಿ ಹನುಮಂತರಾವ್ ಅವರ ನೇತೃತ್ವದಲ್ಲಿ ಸ್ವಾತಂತ್ರ್ಯ ಚಳುವಳಿಗೆ ಧುಮುಕುತ್ತಾರೆ. ಇದರಿಂದ ಮಿಲ್‌ನ ಕೆಲಸ ಕಳೆದುಕೊಳ್ಳುತ್ತಾರೆ. ಚಳುವಳಿಯಲ್ಲಿ ಭಾಗವಹಿಸಿದ್ದರಿಂದ ಶಾಂತಪ್ಪ ಜೈಲುಸೇರಬೇಕಾಗುತ್ತದೆ. ಆಗ ಮನೆಯ ಎಲ್ಲ ಜವಬ್ದಾರಿಗಳೂ ಶರಣವ್ವನ ಮೇಲೆ ಬೀಳುತ್ತವೆ. ಶರಣವ್ವನನ್ನು ಮಗುವಿನೊಂದಿಗೆ ತವರಿನವರು ಕರೆದುಕೊಂಡು ಹೋಗುತ್ತಾರೆ. ಶಾಂತಪ್ಪ ಜೈಲಿನಿಂದ ಬಿಡುಗಡೆಯಾದ ಮೇಲೆ ಶರಣವ್ವ ಮತ್ತು ಮಗಳೊಂದಿಗೆ ಗುಲಬರ್ಗಾದಲ್ಲಿ ಬಂದು ನೆಲೆಸುತ್ತಾರೆ. ಮಿಲ್‌ನ ಕೆಲಸ ಹೊರತುಪಡಿಸಿ ಬೇರಾವುದೇ ಕೆಲಸ ಗೊತ್ತಿಲ್ಲದ ಶಾಂತಪ್ಪ ದೊಡ್ಡ ದೊಡ್ಡ ಕಲ್ಲುಗಳನ್ನು ತುಂಬುವ, ಇಳಿಸುವ ಕೆಲಸದಲ್ಲಿ ತೊಡಗುತ್ತಾನೆ. ಆ ಕೆಲಸದ ಬಗ್ಗೆ ಹೆಚ್ಚು ಗೊತ್ತಿಲ್ಲದೇ ಕಾಲಿನ ಮೇಲೆ ಕಲ್ಲು ಬೀಳಿಸಿಕೊಂಡು ಕಾಲು ಮುರಿದುಕೊಂಡು ಮನೆಯಲ್ಲಿ ಕುಳಿತಾಗ ಇವರ ಸಂಸಾರಕ್ಕೆ ಒಂದ್ಹೊತ್ತಿನ ಊಟ ದೊರೆಯುವುದು ಕಷ್ಟವಾಗುತ್ತದೆ. ಶರಣವ್ವ ಕೂಲಿ ಕೆಲಸವನ್ನು ಮಾಡಿ ಗಂಡನನ್ನು ಮಗಳನ್ನು ಸಾಕುವ ಸ್ಥಿತಿ ಉಂಟಾಗುತ್ತದೆ. ಈ ಸಮಯದಲ್ಲಿ ಗೀತಾ ಅವರ ಸಂಸಾರ ಅರೆ ಹೊಟ್ಟೆಯಲ್ಲಿ ಬದುಕುತ್ತದೆ. ಶರಣಮ್ಮನ ತವರುಮನೆಯವರು ಎಮ್ಮೆಗಳನ್ನು ತಂದುಕೊಟ್ಟು ಜೀವನಕ್ಕೆ ಒಂದು ದಾರಿ ಮಾಡಿಕೊಡುತ್ತಾರೆ. ಎಮ್ಮೆಯ ಹಾಲು ಮಾರುತ್ತಾ ಬದುಕು ಸಾಗಿಸಲಾರಂಭಿಸುತ್ತಾರೆ. ಅನಂತರ ಗೀತಾ ಅವರಿಗೆ ಇಬ್ಬರು ಸಹೋದರಿಯರು, ಒಬ್ಬ ಸಹೋದರನೂ ಹುಟ್ಟುತ್ತಾರೆ. ಶಾಂತಪ್ಪ ಮತ್ತು ಶರಣಮ್ಮ ದಂಪತಿಗಳು ಕೂಲಿ ಮಾಡುತ್ತಾ, ಹಾಲು ಮಾರುತ್ತಾ ಮಕ್ಕಳನ್ನು ಸಾಕುತ್ತಾರೆ. ಗೀತಾ ಅವರನ್ನು ಶಾಲೆಗೆ ಸೇರಿಸಲು ಮುಂದಾಗುತ್ತಾರೆ. ಗಾಂಧೀವಾದಿಯೂ, ಸ್ವಾತಂತ್ರ್ಯ ಹೋರಾಟಗಾರನೂ ಆದ ಶಾಂತಪ್ಪ ಸಾವಳಗಿಗೆ ವಿದ್ಯೆಯ ಮಹತ್ವ ಗೊತ್ತಿದ್ದರಿಂದಾಗಿ ಹೆಂಡತಿಯ ವಿರೋಧದ ನಡುವೆಯೂ ಮಗಳನ್ನು ಶಾಲೆಗೆ ಸೇರಿಸುತ್ತಾರೆ. ಶಾಲೆಗೆ ಸೇರಿಸಿಕೊಳ್ಳುವ ಸಂದರ್ಭದಲ್ಲಿ ಮಾಸ್ತರರೊಬ್ಬರು ಎಸ್.ಎಸ್.ಎಲ್.ಸಿ.ಗೆ ಬರುವ ಹೊತ್ತಿಗೆ ೧೮ ವರ್ಷ ತುಂಬುವಂತೆ ಲೆಕ್ಕಹಾಕಿ ಹುಟ್ಟಿದ ದಿನಾಂಕವೊಂದನ್ನು ಗುರುತು ಹಾಕಿಕೊಳ್ಳುತ್ತಾರೆ. ಆ ದಿನಾಂಕವೇ ೨೫ನೇ ಮಾರ್ಚ್ ೧೯೪೨ ಇದು ಅವರ ಶೈಕ್ಷಣಿಕ ದಾಖಲೆಗಳಲ್ಲಿ ಮುಂದುವರಿದಿದೆ.

ಭಾರತಕ್ಕೆ ಸ್ವಾತಂತ್ರ್ಯ ದೊರೆತರೂ ಹೈದರಾಬಾದ್ ಕರ್ನಾಟಕ ಪ್ರವೇಶವು ನಿಜಾಮನ ಆಳ್ವಿಕೆಯಲ್ಲಿ ಸಿಲುಕಿತ್ತು. ಆ ಸಮಯದಲ್ಲಿ ಅಲ್ಲಿನ ಜನರು ಅನೇಕ ಕಷ್ಟಗಳಲ್ಲಿ ಸಿಲುಕಿ ತೊಂದರೆಯನ್ನು ಅನುಭವಿಸಿದ್ದಾರೆ. ಅವುಗಳಲ್ಲಿ ರಜಾಕರ ಹಾವಳಿಯೂ ಒಂದು ಮನೆಯಲ್ಲಿರುವ ಗಂಡು ಮಕ್ಕಳಲ್ಲಿ ಅರ್ಧ ಮಂದಿಯನ್ನು ಮುಸ್ಲಿಂರಾಗಿ ಮತಾಂತರ ಮಾಡಿಕೊಳ್ಳುವ ಒತ್ತಡ ಹೇರುತ್ತಿದ್ದರು. ಈ ತೊಂದರೆಗೆ ಗೀತಾ ಅವರ ತಾಯಿಯ ತವರಿನವರೂ ಒಳಗಾಗಿರುತ್ತಾರೆ. ಉರ್ದು ಆಡಳಿತ ಭಾಷೆಯಾಗಿರುತ್ತದೆ. ಉರ್ದುವಿನಲ್ಲಿ ಪಾಠವನ್ನು ಕಲಿಸಬೇಕು, ಜನರು ಉರ್ದುವಿನಲ್ಲಿಯೇ ಮಾತನಾಡಬೇಕು ಎಂಬ ನಿಯಮವಿರುತ್ತದೆ. ಕನ್ನಡವನ್ನು ಕಲಿಸುವಂತಿಲ್ಲ ಎಂಬ ಭಾಷಾ ದಬ್ಬಾಳಿಕೆಯೂ ಇರುತ್ತದೆ. ಈ ಸಂದರ್ಭದಲ್ಲಿ ಶಾಲೆಯ ಹೊರಗಡೆ ಉರ್ದು ಮಾಧ್ಯಮ ಎಂದು ನಾಮ ಫಲಕ ಹಾಕಿ ಒಳಗಡೆ ಕನ್ನಡ ಕಲಿಸುವ ಕೆಲಸಗಳು ಆರಂಭವಾಗುತ್ತವೆ. ಈ ರೀತಿಯ ಕನ್ನಡ ಸೇವೆಗೆ ತೊಡಗಿ ದೊಡ್ಡಪ್ಪ ಅಪ್ಪ, ಶರಣಗೌಡ ಇನಾಂದಾರ್, ಜಯಪುರ್ ರಾಜ್ ಪುರೋಹಿತ್, ಹೆರೂರು, ಜಯಚಂದ್ರ ಉತ್ತಳವಾಡ್ ಮುಂತಾದವರು ಕನ್ನಡ ಉಳಿಸುವ ಕೆಲಸವನ್ನು ಮಾಡಿದ್ದಾರೆ. ಈ ಸಂದರ್ಭದಲ್ಲಿಯೇ ಲೇಖಕಿ ಪ್ರಾಥಮಿಕ ಶಿಕ್ಷಣವನ್ನು ಪ್ರವೇಶಿಸುತ್ತಾರೆ. ಹೈದರಾಬಾದ್ ಕರ್ನಾಟಕ ಪ್ರದೇಶ ಸ್ವಾತಂತ್ರ್ಯ ಪಡೆದ ಮೇಲೆ ಕನ್ನಡವನ್ನು ಧೈರ್ಯವಾಗಿ ಅಭ್ಯಾಸ ಮಾಡುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಮಹಾದೇವಿ ಕನ್ಯಾ ಶಾಲೆ ನಡೆಸುತ್ತಿದ್ದ ದೊಡ್ಡಪ್ಪ ಅಪ್ಪ ಅವರು ಟಾಂಗಾಗಳಿಗೆ ಪರದೆಯನ್ನು ಹಾಕಿಸಿ ಅದರಲ್ಲಿ ಹೆಣ್ಣು ಮಕ್ಕಳನ್ನು ಕೂರಿಸಿ ಶಾಲೆಗೆ ಕರೆಸಿಕೊಂಡು ಮತ್ತೆ ಮನೆಗೆ ಅದೇ ರೀತಿ ತಲುಪಿಸುವ ಹೊಣೆಹೊತ್ತು ಶಾಲೆ ನಡೆಸುತ್ತಾರೆ. ಗೀತಾ ಅವರನ್ನು ಇದೇ ರೀತಿ ಶಾಲೆಗೆ ಕರೆದೊಯ್ಯುತ್ತಾರೆ. ಒಂದು ವರ್ಷಕಾಲ ಈ ರೀತಿಯ ಪರಿಸ್ಥಿತಿಯು ಇರುತ್ತದೆ. ಸ್ವಾತಂತ್ರ್ಯ ದೊರೆತು ಕೆಲವು ವರ್ಷಗಳಾದ ಮೇಲೆ ಶಿಕ್ಷಣವು ಮುಕ್ತವಾಗಿ ಎಲ್ಲರಿಗೂ ದೊರೆಯುತ್ತಿದೆ. ಗೀತಾ ಅವರಿಗೆ ಶಾಲೆಯಲ್ಲಿ ೧ನೇ ತರಗತಿಯಿಂದ ೪ ರ ವರೆಗೂ ಉಚಿತವಾಗಿ ಬಟ್ಟೆ, ಪುಸ್ತಕಗಳು ದೊರೆಯುತ್ತವೆ. ಮನೆಗಳಿಗೆ ಹಾಲುಕೊಟ್ಟು ಬಂದು ತಾಯಿ ಮಾಡಿದ್ದ ರೊಟ್ಟಿ ಪಲ್ಲೆ ತಿಂದು, ಅದನ್ನೇ ಕಟ್ಟಿಕೊಂಡು ಯಾರೋ ಕೊಟ್ಟಿದ್ದ ಹರಕು ಮುರುಕು ಫ್ರಾಕ್ ತೊಟ್ಟು, ಪಾಟಿಚೀಲ ಹಾಕಿಕೊಂಡು ಶಾಲೆಗೆ ಹೋಗುತ್ತಿದ್ದರು. ಅಲ್ಲಿ ಬ್ರಾಹ್ಮಣ ಮಕ್ಕಳೊಂದಿಗೆ ಕೂರುವಂತಿರಲಿಲ್ಲ. ಕೆಳಜಾತಿಯ ಮಕ್ಕಳೆಲ್ಲರೂ ಒಂದು ಮೂಲೆಯಲ್ಲಿ ಕೂರುತ್ತಿದ್ದರಂತೆ. ಶಾಲೆಯ ಮಾಸ್ತರರು ಮಾತ್ರ ಯಾವ ಭೇದವಿಲ್ಲದೇ ಎಲ್ಲರ ಕೈ ಹಿಡಿದು ಅಕ್ಷರ ತಿದ್ದಿಸುತ್ತಿದ್ದರಂತೆ. ಬ್ರಾಹ್ಮಣರ ಮಕ್ಕಳು ಇವರನ್ನು ಮುಟ್ಟಿಸಿಕೊಳ್ಳುತ್ತಿರಲಿಲ್ಲವೆಂದು ಹೇಳುತ್ತಾರೆ. ಗೀತಾ ಅವರು ಪಲ್ಲೆಯಲ್ಲಿ ನೆಂದು ತಿನ್ನಲು ಅಸಾಧ್ಯವಾದ ಸ್ಥಿತಿ ತಲುಪಿರುತ್ತಿದ್ದ ರೊಟ್ಟಿಯನ್ನು ಕಣ್ಣುಮುಚ್ಚಿ ನುಂಗಿ ನೀರು ಕುಡಿಯುತ್ತಿದ್ದದ್ದನ್ನು ನೆನೆಯುತ್ತಾರೆ. ಹೀಗೆ ಇವರ ಪ್ರೈಮರಿ ಶಾಲಾ ಶಿಕ್ಷಣವು ಮುಗಿಯುತ್ತದೆ.

ಗೀತಾ ಅವರು ನಾಲ್ಕನೆಯ ತರಗತಿಯನ್ನು ಮುಗಿಸುವಷ್ಟರಲ್ಲಿ ಇವರ ಮನೆಯ ಪರಿಸ್ಥಿತಿ ಬಿಗಡಾಯಿಸಿರುತ್ತದೆ. ಬಡತನ ಕಿತ್ತು ತಿನ್ನುತ್ತಿರುತ್ತದೆ. ಇವರ ಸಂಸಾರವೂ ದೊಡ್ಡದಾಗಿರುತ್ತದೆ. ಆಗ ಗೀತಾ ಅವರನ್ನು ಹಿರಿಯ ಪ್ರಾಥಮಿಕ ಶಾಲೆಗೆ ಸೇರಿಸಲು ಹಣದ ಕೊರತೆಯಿದ್ದು, ಶಾಲೆ ಬಿಡಿಸುವ ಚಿಂತನೆಯನ್ನು ಮಾಡಿರುತ್ತಾರೆ. ಆ ಸಂದರ್ಭದಲ್ಲಿ ಇವರ ನೆರವಿಗೆ ಬಂದವರು ಬಜಿಮಾಮನೆಂದು ಹೆಸರಾದ ಬಜಿಮಾರುವ ವೃದ್ಧ ವೀರಣ್ಣ. ಗೀತಾ ಅವರಿಗೆ ಕೆಲವು ಬಜಿಗಳನ್ನಾದರೂ ಉಳಿಸಿಕೊಂಡು ಬಂದು ಕೊಟ್ಟು ಪ್ರೀತಿಯಿಂದ ಮಾತನಾಡಿಸಿ ಹೋಗುತ್ತಿದ್ದ ಈತನಿಗೆ ಹೆಂಡತಿ ಮಕ್ಕಳಿರುವುದಿಲ್ಲ. ಈ ಬಜಿಮಾಮ ಗೀತಾ ಅವರ ಶಾಲಾ ಶುಲ್ಕವನ್ನು ಭರಿಸಿದ್ದಲ್ಲದೇ ಆಕೆಗೆ ಹಿಂದಿ ಪಾಠವನ್ನು ಹೇಳಿಕೊಡುತ್ತಿರುತ್ತಾರೆ. ಈ ಸಂದರ್ಭದಲ್ಲಿ ಇವರ ಸಂಸಾರ 'ಮನ್ಸಬ್ದಾರ್‌ಗಲ್ಲಿ'ಯ ಖೋಲಿಯೊಂದನ್ನು ಬಾಡಿಗೆಗೆ ಹಿಡಿದಿರುತ್ತದೆ. ಇದು ಬ್ರಾಹ್ಮಣರ ಅಗ್ರಹಾರ ಇಲ್ಲಿ ಕುದುರೆ ಲಾಯಗಳಾಗಿದ್ದ ಖೋಲಿಗಳು ಖಾಲಿ ಇದ್ದು ಅವುಗಳನ್ನು ಕೂಲಿಕಾರರಿಗೆ ಬಾಡಿಗೆ ನೀಡಿದ್ದರು. ಅದರಲ್ಲಿ ಇವರಿಗೂ ಒಂದು ಖೋಲಿ ಇದ್ದು ಅವುಗಳನ್ನು ಕೂಲಿಕಾರರಿಗೆ ಬಾಡಿಗೆ ನೀಡಿದ್ದರು. ಅದರಲ್ಲಿ ಇವರಿಗೂ ಒಂದು ಖೋಲಿ ಬಾಡಿಗೆಗೆ ದೊರೆತಿತ್ತು. ಇರುವ ಒಂದು ಕೋಣೆಯಲ್ಲಿ ಮನೆ ಮಂದಿಯೆಲ್ಲ ತಮ್ಮ ವಸ್ತುಗಳೊಂದಿಗೆ ಆಶ್ರಯ ಪಡೆದು ಜೀವಿಸುತ್ತಾರೆ. ಇವರ ಮನೆಯಲ್ಲಿ ಒಂದು ಚಿಮಣಿ ದೀಪವಿರುತ್ತದೆ. ಅದನ್ನು ಅಡಿಗೆ ಮಾಡಿ ಉಣ್ಣುವವರೆಗೆ ಮಾತ್ರ ಉರಿಸುತ್ತಾರೆ. ಆ ಚಿಮಣಿಯ ಬೆಳಕಿನಲ್ಲಿ ಗೀತಾ ಸರಿಯಾಗಿ ಓದಲಾಗದೇ ಕಷ್ಟಪಡುತ್ತಾರೆ. ಇವರ ಮುಂದಿನ ಮನೆ, ಬ್ರಾಹ್ಮಣನಾದ ಬಾಣಾಚಾರಿಯದು. ಆತನ ಮನೆಯ ಮುಂದಿನ ಕಟ್ಟೆಯಲ್ಲಿ ಕಂದಿಲನ್ನು ಇಟ್ಟುಕೊಂಡು ಆ ಮನೆಯ ಮಕ್ಕಳೆಲ್ಲರೂ ಓದುತ್ತಿರುತ್ತಾರೆ. ಆ ಮನೆಯ ಯಜಮಾನ ಈಕೆಗೂ ಅವರ ಮನೆಯ ಮಕ್ಕಳೊಂದಿಗೆ ಕುಳಿತು ಓದಲು ಅವಕಾಶ ಮಾಡಿಕೊಟ್ಟಿರುತ್ತಾನೆ. ಅವರ ಮನೆಯಲ್ಲಿ ಇದ್ದ ಸುಂದ್ರಾಬಾಯಿ ಎಂಬ ಮಡಿ ಹೆಂಗಸಿನ ಕಿರಿಕಿರಿಯನ್ನು ಗೀತಾ ಅವರು ಸಹಿಸಬೇಕಾಗುತ್ತಿತ್ತು. ಸದಾ ಬೈಗುಳ ಸುರಿಸುತ್ತಿದ್ದ ಸುಂದ್ರಾಬಾಯಿಯು ಇವರನ್ನು ಕಂಡರೇ ಸಿಡಿಪಿಡಿ ಮಾಡುತ್ತಿದ್ದ ಬಗೆಯನ್ನು ನೆನೆಯುತ್ತಾರೆ. "ಏs ಶೂದ್ರ ಮುಂಡೆದೇ........ ದೂರ ಕೂಡು ಆಕಾಡಿ...... ನಮ್ಮ ಹುಡ್ರ ಸರಿಜೋಡಿ ಕುಂತು ಓದ್ತಿಯೇನೇ .... ಥೂ .... ಸಲಿಗೆ ಕೊಟ್ಟ ನಾಯಿ ತೆಲಿ ಮೂಸಿ ನೋಡಿತಂತೆ .... ಈ ಕೆಳಮಂದೀಗೆಲ್ಲಾ ಸಮೀಪ ಕರ್‍ಕೋಬ್ಯಾಡ್ರೋ ಅಂದ್ರ ನನ್ನ ಮಾತೆಲ್ಲಿ ಕೇಳ್ತಾನ ನನ್ನ ಮಗಾ ...... ನಮ್ಮ ಪಾರುಗೊಳ ಜತಿ ಆಕಿನೂ ಓದ್ಕೋಲಿ ಪಾಪ .... ಅಂತಾನ .... ಹಿಟ್ಟೂ ಬೂದಿ ಸಮಾಯೇನು?[7] ಎಂದು ಸಿಡುಕುತ್ತಿರುತ್ತಾಳೆ. ಇಂತಹ ಅಪಮಾನಗಳಿಂದ ಕುಗ್ಗಿ ಹೋಗುತ್ತಿದ್ದ ಗೀತಾ ತನ್ನ ಪಾಟಿಚೀಲ ತೆಗೆದುಕೊಂಡು ದೂರ ಸರಿದು ಕುಳಿತುಕೊಳ್ಳುತ್ತಿದ್ದರಂತೆ. ಆ ಸಂದರ್ಭಗಳಲ್ಲಿ ಆ ಮನೆಯ ಮಕ್ಕಳು ತಿಂದುಳಿದ ಉಪ್ಪಿಟ್ಟು, ಅವಲಕ್ಕಿ ಒಗ್ಗರಣೆಯನ್ನು ಗೀತಾರಿಗೆ ತಿನ್ನಲು ಕೊಡುತ್ತಿದ್ದರಂತೆ. ಆ ಪರಿಸ್ಥಿತಿಯಲ್ಲಿ ಗೀತಾರಿಗೆ ಒದಗುತ್ತಿದ್ದ

ಸಂಕಟ ನೋವು ಅಪಮಾನಗಳ ಬಗ್ಗೆ ನೆನೆಯುತ್ತಾರೆ. "ಏs ಪೋರೀ........ಇಕಾ........ನಮ್ಮ ಹುಡ್ರೆಲ್ಲಾ ತಿಂದು ಒಂದಿಷ್ಟು ಉಪ್ಪಿಟ್ಟು ಉಳದದ ನೋಡು ತಗೋ....... ತಿನ್ನು....... ಅಂತ ನನ್ನನ್ನು ಕರೆಯುತ್ತಿದ್ದರು. ನಾನು ಅವರ ಮುಂದೆ ನಿಂತು ಕೈ ಒಟ್ಟುತ್ತಿದ್ದೆ. ಪತ್ರೋಳಿಯಲ್ಲೋ ಹಳೆಯ ರದ್ದಿ ಕಾಗದದ ಮೇಲೋ ಅದನ್ನಿಟ್ಟು ಅಷ್ಟು ಎತ್ತರದಿಂದಲೇ ನನ್ನ ಕೈಗೆ ದೊಪ್ಪನೆ ಬಿಸಾಕುತ್ತಿದ್ದರು. ಪುಣ್ಯಕ್ಕೆ ಅದು ನನ್ನ ಕೈಯಲ್ಲಿ ಬಿದ್ದು ಭಾರ ಸಂಬಾಳಿಸಿದರೆ ಸರಿ. ಆದರೆ ಕೆಲವೊಮ್ಮೆ ಅದು ಜೋರಾಗಿ ಬಿದ್ದಾಗ ನನ್ನ ಪುಟ್ಟ ಕೈಗಳಿಗಮರದೆ ಧಡಕ್ಕನೆ ಕೆಳಗೆ ಬೀಳುತ್ತಿತ್ತು. ಉಪ್ಪಿಟ್ಟು ನೆಲದ ಮೇಲೆ ಚೆಲ್ಲಾಪಿಲ್ಲಿಯಾಗಿ ಹರಡಿದಾಗ ನನ್ನ ಕಣ್ಣಲ್ಲಿ ನೀರು ದಟ್ಟೈಸುತ್ತಿತ್ತು."[3] ಎಂದು ಹೇಳುತ್ತಾರೆ. ಇಂಥ ಸಂದರ್ಭಗಳಲ್ಲಿ ಕೆಲವೊಮ್ಮೆ ಭಯದಿಂದ ನೆಲಕ್ಕೆ ಬಿದ್ದ ಉಪ್ಪಿಟ್ಟನ್ನೇ ಬಳಿದು ತಿನ್ನುತ್ತಿದ್ದರಂತೆ, ಆ ಜಾಗವನ್ನು ನೀರಿನಿಂದ ಶುಚಿಗೊಳಿಸುತ್ತಿದ್ದರಂತೆ, ಇವು ಗೀತಾ ಅವರ ಪುಟ್ಟ ಹೃದಯದಲ್ಲಿ ಸೇಡನ್ನು, ಬಂಡಾಯವನ್ನು, ಕೆರಳಿಸುತ್ತಿದ್ದವಂತೆ, ಅವರ ಮನೆಯಿಂದ ತಿಂಡಿಯನ್ನಾಗಲಿ, ನೀರನ್ನಾಗಲಿ ತೆಗೆದುಕೊಳ್ಳಬಾರದೆಂದು ನಿರ್ಧರಿಸಿ ಬಿಟ್ಟುಬಿಟ್ಟರಂತೆ. ಇದನ್ನು ಇವರ ತಂದೆ-ತಾಯಿಗೆ ಚುಚ್ಚಿ ಕೊಟ್ಟು ಹೊಡೆಸಿದ್ದಲ್ಲದೆ ಶಾಲೆಗೆ ಹೋಗುವ ಬಗ್ಗೆಯೂ ಲೇವಡಿ ಮಾಡಿ ನಗುತ್ತಿದ್ದರಂತೆ. ಹೀಗೆ ಗೀತಾ ಅವರ ಜೀವನ ಪ್ರತಿ ಹೆಜ್ಜೆ ಹೆಜ್ಜೆಗೂ ಕಷ್ಟ ಎಂಬುವುದು ಬರುತ್ತಿದ್ದದ್ದು ಅವರಿಗೆ ಈಗಲೂ ನೆನಪಿಸಿಕೊಂಡರೇ ಕಣ್ಣಿರು ಬರುತ್ತದೆ ಎಂದು ಹೇಳುತ್ತಾರೆ.

ಸಾಹಿತ್ಯಿಕ ಕೊಡುಗೆ ಃ

ಕೆಳವರ್ಗದ ಬಡವರು ವಿದ್ಯೆ ಕಲಿಯುವುದೇ ಅಸಾಧ್ಯವಾಗಿದ್ದಂತಹ ಸಂದರ್ಭದಲ್ಲಿ ಆ ವರ್ಗದ ಹೆಣ್ಣು ಮಗಳಾದ ಗೀತಾ ಶಾಲೆಗೆ ಹೋಗಲು ಪ್ರಾರಂಭಿಸಿ ಎಲ್ಲರ ಹದ್ದಿನ ಕಣ್ಣುಗಳಿಗೆ ಬೀಳುತ್ತಾರೆ. ಮೇಲ್ವರ್ಗ ಕೆಳವರ್ಗದ ಎಲ್ಲ ಜನರಿಂದಲೂ ಹೀನಾಯ ಬೈಗುಳಗಳನ್ನು ಸಹಿಸಬೇಕಾಗುತ್ತದೆ. ಮೆಟ್ರಿಕ್ ಹಂತದವರೆಗೆ ವಿದ್ಯೆ ಕಲಿತ ಗೀತಾ ಅನಿವಾರ್ಯವಾಗಿ ಕೆಲಸಕ್ಕೆ ಸೇರುತ್ತಾರೆ. ಆ ಸಂದರ್ಭದಲ್ಲಿ ಬಂದ ಅನೇಕ ಅಡೆತಡೆಗಳು, ಕಛೇರಿಯ ಗಂಡಸರ ನಡೆ ನುಡಿಗಳು ಗೀತಾ ಅವರಲ್ಲಿ ಬಂಡಾಯದ ಬೀಜಗಳನ್ನು ಬಿತ್ತುತ್ತವೆ. ಗೀತಾ ಅವರಲ್ಲಿ ಬಂಡಾಯದ ಬೀಜಗಳನ್ನು ಬಿತ್ತುತ್ತವೆ. ಗೀತಾ ಅವರ ಸಾಂಸಾರಿಕ ಜೀವನದ ದುರಂತಗಳು ಕೂಡ ಅವರನ್ನು ದಿಟ್ಟ ಬರಹಗಾರ್ತಿಯಾಗಿ ರೂಪಿಸಿದೆ ಎಂದು ಹೇಳಬಹುದಾಗಿದೆ. "ಸಮಾಜಕ್ಕೆ ಸೆಡ್ಡು ಹೊಡೆದು ನಿಂತು ತನ್ನ ಬದುಕನ್ನು ತಾನು ತನಗೆ ತೋಚಿದಂತೆ ರೂಪಿಸಿಕೊಳ್ಳುವ ಛಲ ಕೆಲ ಹೆಣ್ಣುಗಂಡುಗಳಲ್ಲಿರುತ್ತದೆ; ಅಥವಾ ಬರುತ್ತದೆ. ಅಂಥವರು ಯಾವುದಕ್ಕೂ ರಾಜಿಮಾಡಿಕೊಳ್ಳುವುದೇ ಇಲ್ಲ. ಆಗ ಅವರು ಎತ್ತಿಡುವ ಹೆಜ್ಜೆಗಳು ಹೊಸ ಹಾದಿಯನ್ನೇ ಹುಟ್ಟಿಸುತ್ತವೆ. ನನ್ನ ಸ್ವಭಾವವೂ ಅಷ್ಟೇ. ಎಲ್ಲರಂತೆ ಸಾಮಾನ್ಯ ಹೆಣ್ಣುಮಗಳಾಗಿ, ಹತ್ತರಲ್ಲಿ ಹನ್ನೊಂದನೆಯವಳಾಗಿ

ಬದುಕಿ ಸಾಯುವುದು ನನಗೆ ಬೇಕಾಗಿಲ್ಲ. ಎಲ್ಲರಿಗಿಂತ ನಾನು ಭಿನ್ನವಾಗಿ ನಿಂತು ನನ್ನದೇ ಆದ ವಿಶಿಷ್ಟತೆಯನ್ನು ಹೊಂದಬೇಕೆಂಬ ಛಲ ನನ್ನೆದಯ ತಳದಲ್ಲಿ ಬತ್ತದ ಗಂಗೆಯಾಗಿ ಹರಿಯುತ್ತಿರುವಾಗಲೇ ನಾನು ನನಗೆ ಬಂದ ಎಲ್ಲ ಸಮಸ್ಯೆಗಳನ್ನು ಸವಾಲಾಗಿಯೇ ಸ್ವೀಕರಿಸಿ ಬದುಕಲು ನಿರ್ಧರಿಸಿದ್ದೆ. ಆಗ ಬಂದವು ನೋಡಿ ಸಂಕಟದ ಸರಮಾಲೆ ಈ ಸಮಾಜದ ರೂಢಿರಿವಾಜುಗಳ ವಿರುದ್ಧ, ನೀತಿ ಸಂಪ್ರದಾಯಗಳ ವಿರುದ್ಧ, ಕೆಟ್ಟ ವ್ಯವಸ್ಥೆಯ ವಿರುದ್ಧ ಬಂಡು ಸಾರುತ್ತ ಮುನ್ನಡೆದೆ"[8] ಎಂದು ಗೀತಾ ಅವರೇ ಹೇಳಿದ್ದಾರೆ. ಗೀತಾ ಅವರು ಕಂಡ ಹಳ್ಳಿಯ ಅಮಾಯಕರ, ಅನಕ್ಷರಸ್ಥರ ನೋವುಗಳು, ಹೆಣ್ಣು ಮಕ್ಕಳ ಮೇಲಾಗುವ ಶೋಷಣೆಗಳು, ಚಾಲ್ತಿಯಲ್ಲಿದ್ದ ದೌರ್ಜನ್ಯ, ಹಿಂಸೆ, ಆಚರಣೆಗಳು, ಕೆಟ್ಟ ಸಂಪ್ರದಾಯಗಳು ಗೀತಾ ಅವರನ್ನು ಒಬ್ಬ ಬಂಡಾಯಗಾರ್ತಿಯನ್ನಾಗಿ ರೂಪಿಸಿದೆ. ಗೀತಾ ಅವರ ತಾಯಿಯ ಮನೆಯ ಕುಲದೇವತೆ ಮಾಪುರಿತಾಯಿ. ಮಾಪುರಿ ಜಾತ್ರೆಯನ್ನು ಚಿಕ್ಕಂದಿನಿಂದ ಪ್ರತಿವರ್ಷವೂ ನೋಡಿರುವ ಗೀತಾ ಹೈಸ್ಕೂಲ್ ಮೆಟ್ಟಿಲೇರುವ ಹೊತ್ತಿಗೆ ಯೋಚಿಸುವ ಮನಸ್ಸನ್ನು ರೂಢಿಸಿಕೊಳ್ಳುತ್ತಾರೆ. ಮಾಪುರಿಯ ಜಾತ್ರೆಯಲ್ಲಿ ನಡೆಯುವ ಬೆತ್ತಲೆ ಸೇವೆ, ಗಂಧದ ಹುಟ್ಟಿಗೆ, ಬೇವಿನ ಹುಡಿಗೆಯಂತಹ ಹರಕೆಗಳು ಗೀತಾ ಅವರನ್ನು ಬೆಚ್ಚಿ ಬೀಳಿಸುತ್ತವೆ. ದಲಿತ ಹೆಣ್ಣುಮಕ್ಕಳನ್ನು ಮಾಪುರಿ ದೇವತೆಯ ಹೆಸರಿನಲ್ಲಿ ಸೂಳೆಗಾರಿಕೆಗೆ ಇಳಿಸುವುದು, ಆಕೆಯನ್ನು ಪಟ್ಟಕ್ಕೆ ಹಾಕಿಕೊಂಡು ಅನುಭವಿಸಿ ದೇವತೆಯ ಹೆಸರಿನಲ್ಲಿ ಸೇವೆಗೆ ಬಿಡುವುದು, ಮುಂತಾದವರನ್ನು ಕಣ್ಣಾರೆ ಕಂಡು ಗೀತಾ ಅವರು ಆ ರೀತಿ ರಿವಾಜುಗಳು ಏಕೆ ಪ್ರಾರಂಭವಾಗಿರಬಹುದು ಎಂದು ಚಿಂತಿಸಲಾರಂಭಿಸುತ್ತಾರೆ. ಅದೂ ದಲಿತ ಹೆಂಗಸರೇ ಯಾಕೆ ಇಂಥ ಪದ್ಧತಿಗೆ ಸಿಲುಕಿ ಜೋಗಿಣಿಯಾಗುತ್ತಾರೆ? ಹೆಣ್ಣು ದೇವತೆಯೇ ಹೆಣ್ಣು ಮಕ್ಕಳನ್ನು ತನ್ನ ಹೆಸರಿನಲ್ಲಿ ಹಾದರಕ್ಕಿಳಿಸುತ್ತಾಳೆಯೇ? ಎಂಬ ಹಲವಾರು ಪ್ರಶ್ನೆಗಳು ಗೀತಾ ಅವರನ್ನು ಕಾಡಲಾರಂಭಿಸುತ್ತವೆ. ಆ ಸಂದರ್ಭದಲ್ಲಿ ಮನಸ್ಸಿಗೆ ಹತ್ತಿರ ಚಿಂತೆಯ ಕಿಚ್ಚನ್ನು ಅನುಸರಿಸಿ ಅವರು ಬರಹದ ಮೂಲಕ ಬಂಡಾಯವನ್ನು ಮಾಡಲು ಮುಂದಾಗುತ್ತಾರೆ. ಪಟ್ಟಣದ ಕೊಳಗೇರಿ ಝೋಪಡಿಗಳ, ಹಳ್ಳಿಯ ದಲಿತ ಮತ್ತು ಶೂದ್ರಗುಡಿಸಲುಗಳ ಅಮಾಯಕ ಹೆಣ್ಣುಗಳ ಸಮಸ್ಯೆಗಳು ಗೀತಾ ಅವರ ಬರಹಕ್ಕೆ ಪ್ರೇರಣೆಗಳಾಗಿ ನಿಂತು ಬಂಡಾಯದ ಬರಹಕ್ಕೆ ಕಾರಣವಾಗಿವೆ.

ಲಂಕೇಶ್ ಪತ್ರಿಕೆಯಲ್ಲಿ ತರಕಾರಿ ಮಾರುವ ಹೆಂಗಸರ ಸಂಕಟ, ಸಮಸ್ಯೆಗಳು ಹಾಗೂ ಅಸಾಯಕತೆಯ ಬಗ್ಗೆ, ಅವರನ್ನು ದಿನನಿತ್ಯವೂ ಹಿಂಸಿಸುವ ಗೂಂಡಾ ಒಬ್ಬನ ಬಗ್ಗೆ ಬರೆದಾಗ ಅದು ಪ್ರಕಟವಾದ ಮರುದಿನವೇ ಪೋಲೀಸರಿಂದ ಗೀತಾ ಅವರು ತನಿಖೆಯನ್ನು ಎದುರಿಸಬೇಕಾಗುತ್ತದೆ. 'ಸಂಗಾತಿ' ಎಂಬ ಕತೆ ಸುಧಾದಲ್ಲಿ ಪ್ರಕಟವಾದಾಗ ಅದು ಯಾವುದೋ ಹಳ್ಳಿಯ ಗೌಡ್ತಿಯ ಜೀವನಕ್ಕೆ ಹೊಂದುತ್ತದೆಂದು ಆ ಗೌಡ್ತಿಯ ಬಗ್ಗೆಯೇ ಬರೆದು ಅವಮಾನ ಮಾಡಲಾಗಿದೆ ಎಂದು ಅವರ ಕಡೆಯ ಜನರು ಬಂದು ಗೀತಾ ಅವರೊಂದಿಗೆ ಗಲಾಟೆ ಮಾಡಿದ ಘಟನೆಯನ್ನು ನೆನಪಿಸಿಕೊಳ್ಳುತ್ತಾರೆ.

'ಕುದುರೆಮೋತಿ' ಎಂಬಲ್ಲಿ ನಡೆದ ಹೆಣ್ಣುಮಕ್ಕಳಿಬ್ಬರ ಬೆತ್ತಲೆ ಮೆರವಣಿಗೆ ಬಗ್ಗೆ ವಿಷಯ ಸಂಗ್ರಹಿಸಿ ಆ ರೀತಿ ಘಾಸಿಗೊಂಡ ಹೆಣ್ಣುಮಕ್ಕಳನ್ನು ಸಂದರ್ಶನ ಮಾಡಿ ಸಿದ್ಧಪಡಿಸಿದ್ದ ವರದಿ 'ತರಂಗ' ಪತ್ರಿಕೆಯಲ್ಲಿ ಪ್ರಕಟವಾದಾಗಲೂ ಗೀತಾ ಅವರು ಬೆದರಿಕೆಯ ಕರೆಗಳನ್ನು, ಪತ್ರಗಳನ್ನು ಎದುರಿಸಬೇಕಾಗುತ್ತದೆ. ಗೀತಾ ಅವರ ಹೋರಾಟದ ಬದುಕೇ ಅವರನ್ನು ಬಂಡಾಯದ ಬರಹಗಾರ್ತಿಯಾಗಿ ರೂಪಿಸಿದೆ. ಗೀತಾನಾಗಭೂಷಣ ಅವರು ಆರಂಭದಲ್ಲೇ ಬಂಡಾಯದ ಕೃತಿಗಳನ್ನು ರಚಿಸಲಿಲ್ಲ. ಮೊದ ಮೊದಲು ಜನಪ್ರೀಯ ಕಾದಂಬರಿಗಳತ್ತ ಒಲವು ತೋರಿದ್ದರು. ಹದಿಹರೆಯದ ದಿನಗಳಲ್ಲಿ ಅ.ನ. ಕೃ ತ.ರಾ.ಸು, ತ್ರಿವೇಣಿ, ಎಂ.ಕೆ. ಇಂದಿರಾ ಉಷಾನವರತ್ನರಾವ್, ಟಿ.ಕೆ. ರಾಮರಾಯರ ಕಾದಂಬರಿಗಳನ್ನು ಓದಿ ಆಕರ್ಷಿತರಾಗಿದ್ದ ಗೀತಾ ಅವರು ಇವರೆಲ್ಲರೂ ಬರೆಯುತ್ತಿದ್ದ ಮಾದರಿಯಲ್ಲಿಯೇ ಬರಹಕ್ಕೆ ತೊಡಗಿದ್ದಾರೆ. ಮಧ್ಯಮವರ್ಗದ ಜೀವನ ಶೈಲಿ, ಉಡುಗೆ, ತೊಡುಗೆ, ಊಟ-ತಿಂಡಿಗಳು ಅವರ ಕೃತಿಗಳಲ್ಲಿ ವರ್ಣಿತವಾಗಿರುವ ರೀತಿ, ಇವರನ್ನು ಸೆಳೆಯುತ್ತದೆ. ಈ ಬರಹದ ಜನಪ್ರಿಯತೆಯ ಜಾಡನ್ನು ಹಿಡಿದು ಸಾಗಿದ ಗೀತಾ ಅನುಭವಕ್ಕೆ ಬಂದಿರದ, ನೋಡಿರದ ಅನೇಕ ವಿಚಾರಗಳನ್ನು ಕಲ್ಪಿಸಿಕೊಂಡು ಬರೆಯಲಾರಂಭಿಸುತ್ತಾರೆ. ಅವರಲ್ಲಿಲ್ಲದ್ದನ್ನು ಕೃತಿಗಳಲ್ಲಿ ತುಂಬಿಕೊಳ್ಳುವ ಹಪಾಹಪಿ ಅವರಲ್ಲಿ ಇತ್ತೆಂದು ಹೇಳುತ್ತಾರೆ. ಅದಕ್ಕೆ ಅವರ ವಯಸ್ಸು ಕಾರಣವೆಂದು ಲೇಖಕಿ ಪ್ರಾಮಾಣಿಕವಾಗಿಯೇ ಒಪ್ಪಿಕೊಳ್ಳುತ್ತಾರೆ. ಕನ್ನಡದ ಅನೇಕ ಪತ್ರಿಕೆಗಳ ಸಂಪಾದಕರು ಇವರ ಕಥೆಗಳಿಗಾಗಿ, ಕಾದಂಬರಿಗಳಿಗಾಗಿ ಕಾಗದ ಬರೆಯುತ್ತಿದ್ದರಂತೆ. ಆದರೆ ಈ ಬರಹ ಲೇಖಕಿಗೆ ಹೆಚ್ಚಿನ ತೃಪ್ತಿಯನ್ನೇನೂ ನೀಡಿರುವಂತೆ ತೋರುವುದಿಲ್ಲ. ಅವರಿಗೆ ತನ್ನೊಳಗಿನ ಖರೇ ಕಾಳಜಿಗಳು ಹೊರಹೊಮ್ಮಿಲ್ಲವೆಂಬ ಅರಿವಿದ್ದಂತೆ ತೋರುತ್ತದೆ. ಆದ್ದರಿಂದ ಅವರು ಜನಪ್ರಿಯತೆಯ ಸಮಯವ್ಯರ್ಥ ಬರಹವನ್ನು ಬಿಟ್ಟು ಬೇರೆಡೆಗೆ ತಿರುಗುತ್ತಾರೆ. ಗುಡಿಸಲುಗೇರಿಯ ಅಮಾಯಕ ಜನರ ಬಗ್ಗೆ, ಅಲ್ಲಿನ ಹೆಂಗಸರ ಶೋಷಣೆಯ ಬಗ್ಗೆ, ಕೆಳವರ್ಗದ ದಲಿತರ ಬವಣೆಗಳ ಬಗ್ಗೆ ಬರೆಯುವ ಅದಮ್ಯ ಆಸೆ ಮೂಡಿದ ಪರಿಣಾಮವಾಗಿ ಇವರ ಬರಹ ಜನಪ್ರಿಯತೆಯ ಜಾಡಿನಿಂದ ಸರಿದು ಮತ್ತೊಂದು ತಿರುವಿನಲ್ಲಿ ಹೆಜ್ಜೆ ಹಾಕುತ್ತಾರೆ.

ವಿದ್ಯಾರ್ಥಿನಿಯಾಗಿದ್ದ ಹಾಸ್ಯಭರಿತವಾದ ಕಥೆಗಳನ್ನು ಗೀತಾ ಅವರು ಬರೆಯುತ್ತಿದ್ದರೆಂದು ತಿಳಿದು ಬರುತ್ತದೆ. ಅವರು ಬರೆದ ಮೊಟ್ಟ ಮೊದಲ ಕಥೆ 'ಕ್ಷಿತಿಜ' ಸುಧಾ ವಾರ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಅನಂತರ ಇವರು ಬರೆದ ಮೊತ್ತ ಮೊದಲ ಕಾದಂಬರಿ 'ತಾವರೆಯ ಹೂ' ಲಂಕೇಶ್ ಪತ್ರಿಕೆಯಲ್ಲಿ ಇವರು ಸಾಮಾಜಿಕ ಕೆಡುಕುಗಳು ಎಂಬ ಅಂಕಣವನ್ನು ಬರೆಯುತ್ತಿದ್ದರೆಂದು, ಲಂಕೇಶ್ ಅವರು ಇವರ ಬರಹಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದ್ದಲ್ಲದೇ ಅನೇಕ ಕಾದಂಬರಿಗಳನ್ನು ಧಾರವಾಹಿಯಾಗಿ ಪ್ರಕಟಿಸಿ ಹೆಚ್ಚಿನ ಪ್ರಚಾರವನ್ನು, ಜನಪ್ರಿಯತೆಯನ್ನು ತಂದುಕೊಟ್ಟರೆಂದು ಗೀತಾ ಅವರೇ ಹೇಳುತ್ತಾರೆ.

ಲೇಖಕಿಯ ಬರಹಕ್ಕೆ ಮೊದಲ ಪ್ರೇರಕರೆಂದರೆ ಅವರ ತಂದೆ ಶಾಂತಪ್ಪ ಸಾವಳಗಿ, ಮಾಪುರ ತಾಯಿಯ ಮಕ್ಕಳು 'ಕಾದಂಬರಿ ಬರೆದು ಕುಟುಂಬದವರ, ಬಂಧುಗಳ ವಿರೋಧವನ್ನು, ಕಲಹವನ್ನು ಎದುರಿಸುವವರೆಗೆ ಬೆಂಬಲವಾಗಿದ್ದ ತಂದೆಯು ಆ ಸಂದರ್ಭದಿಂದ ತಟಸ್ಥರಾಗಿಬಿಟ್ಟರೆಂದು ಹೇಳುತ್ತಾರೆ. ಲೇಖಕಿಗೆ ಕುವೆಂಪು, ಕಾರಂತ, ಚಂದ್ರಶೇಖರ ಕಂಬಾರ, ದೇವನೂರು ಮಹಾದೇವ ಮೆಚ್ಚಿನ ಲೇಖಕರು, ಕಂಬಾರರ 'ಸಿಂಗಾರವ್ವ ಮತ್ತು ಅರಮನೆ' ಹಾಗೂ ಕುವೆಂಪು ಅವರ 'ಮಲೆಗಳಲ್ಲಿ ಮದು ಮಗಳು' ತುಂಬ ಇಷ್ಟವಾದ ಕಾದಂಬರಿಗಳು.

ಬಡತನದಲ್ಲಿಯೇ ಬೆಳೆದ ಇವರು ಸುತ್ತ ಮುತ್ತಲ ಕೂಲಿಕಾರರ, ಹಮಾಲಿಗಳ, ಕಾರ್ಮಿಕರ, ಗಾರೆಯ ಕೆಲಸದಲ್ಲಿ ತೊಡಗಿದ್ದವರ ಒಡನಾಟವನ್ನು ಹೊಂದಿರುತ್ತಾರೆ. ಅವರೊಂದಿಗಿನ ಒಡನಾಟದಿಂದ ಅವರ ಬೈಗುಳ ಮಿಶ್ರಿತ ಭಾಷೆಯ ಪರಿಚಯವೂ ಇವರಿಗೆ ಸಹಜವಾಗಿಯೇ ಆಗಿರುತ್ತದೆ. ಆದ್ದರಿಂದಲೇ ಇವರ ಕೃತಿಗಳಿಗೆ ವಸ್ತುವನ್ನು ಅನುಭವಗಳನ್ನು ಅಲ್ಲಿಂದಲೇ ಪಡೆದಿದ್ದಾರೆ. ಕುಡಿತ-ಕಾಮ-ಕುಣಿತ ಇವೆಲ್ಲವೂ ಶೂದ್ರ ಜನತೆಯ, ದಲಿತರ ಜೀವನದ ಬೇರ್ಪಡಿಸಲಾಗದ ಅವಿಭಾಜ್ಯ ಅಂಗಗಳೆಂದು ಹೇಳುವ ಲೇಖಕಿ ಯಾವುದೇ ಮಡಿವಂತಿಕೆಯನ್ನು ಇಟ್ಟುಕೊಳ್ಳದೇ ಇದ್ದದ್ದನ್ನು ಇದ್ದಹಾಗೇ ಹೇಳಿದ್ದೇನೆ ಎನ್ನುತ್ತಾರೆ. ಇದು ಅವರ ಕೃತಿಗಳನ್ನು ಅವಲೋಕಿಸಿದವರಿಗೆ ಮನದಟ್ಟಾಗುತ್ತದೆ.

ಟಿಪ್ಪಣಿಗಳು :

೧) (ಸಂ) ಕೆ.ಉಷಾ. ಪಿ.ರೈ., ಕೆ.ಎಂ. ವಿಜಯಲಕ್ಷ್ಮೀ, ಲೇಖ-ಲೋಕ-೪ (ಮಹಿಳಾ ಸಾಹಿತ್ಯ ಒಂದು ಆತ್ಮಕಥಾನಕ), ಕರ್ನಾಟಕ ಲೇಖಕಿಯರ ಸಂಘ, ಚಾಮರಾಜಪೇಟೆ, ಬೆಂಗಳೂರು -೧೮, ಮೊದಲ ಮುದ್ರಣ – ೨೦೦೩, ಪು. ಸಂ. ೩೧.

೨) ಅದೇ ಪುಟ ಸಂಖ್ಯೆ - ೩೬

೩) ಅದೇ ಪುಟ ಸಂಖ್ಯೆ - ೩೫

ಅಧ್ಯಾಯ-೩

‘ಧುಮ್ಮಸು’ ಕಾದಂಬರಿಯ ಅಧ್ಯಯನ

೧) ವಸ್ತು
೨) ಸನ್ನಿವೇಶ ನಿರ್ಮಾಣ
೩) ಭಾಷೆ, ಶೈಲಿ, ತಂತ್ರ
೪) ಪಾತ್ರ ಚಿತ್ರಣ
೫) ಆಶಯಗಳು ಧೋರಣೆ

ಅಧ್ಯಾಯ-೩

'ಧುಮ್ಮಸು' ಕಾದಂಬರಿಯ ಅಧ್ಯಯನ

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ವಿಭಿನ್ನವಾದ ಕಾದಂಬರಿಗಳನ್ನು ಕೊಟ್ಟ ಕೀರ್ತಿ ಗೀತಾ ನಾಗಭೂಷಣ ಅವರದು. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಹಂಪಿ ಕನ್ನಡ ವಿಶ್ವವಿದ್ಯಾನಿಲಯದ 'ನಾಡೋಜ' ಪ್ರಶಸ್ತಿಯಾದಿಗಯಾಗಿ ಅನೇಕ ಪುರಸ್ಕಾರಗಳನ್ನು ಪಡೆದಿರುವ ಇವರ ಕಾದಂಬರಿಗಳು ವಸ್ತು, ಸನ್ನಿವೇಶ ನಿರ್ಮಾಣ, ಭಾಷೆ, ಶೈಲಿ, ತಂತ್ರ, ಪಾತ್ರ ಚಿತ್ರಣ, ಆಶಯಗಳು-ಧೋರಣೆ ಎಲ್ಲ ದೃಷ್ಟಿಯಿಂದಲೂ ವಿಶಿಷ್ಟವಾದ ನೆಲೆಯಲ್ಲಿ ನಿಲ್ಲುತ್ತವೆ.

"ಗೀತಾ ಬರೆದ ಪ್ರಾರಂಭಿಕ ಕಾದಂಬರಿಗಳು ಮಧ್ಯಮದರ್ಜೆಯ ಶೋಕಿಲಾಲರ ವೈಭವಪೂರಿತ ಬದುಕಿಗೆ ಮೀಸಲಾಗುಳಿಯುತ್ತವೆ. ಈ ಲೇಖಕಿ ತಾನು ಬರೆಯುತ್ತಿರುವ ಸಂದರ್ಭದ ಮಿತಿಗೆ ಒಪ್ಪಿಕೊಳ್ಳುವ ತರಾತುರಿಗೆ ಒಳಗಾದದ್ದು ಎದ್ದು ಕಾಣುತ್ತದೆ. ಆ ಹೊತ್ತಿನ ಜನಪ್ರಿಯ ಲೇಖಕಿಯರ ಜಾಡನ್ನು ಹಿಡಿದು ಹಸಿ ಹಸಿ ಪ್ರೇಮ, ಪ್ರಣಯ, ಕಾಮ ಇವುಗಳ ಸುತ್ತಲೇ ಗಿರಕಿ ಹೊಡೆಯುವ ಈ ಕಾದಂಬರಿಗಳು ಮಹತ್ವಾಕಾಂಕ್ಷೆಯಿಂದ ದೂರವೇ ಉಳಿಯುತ್ತವೆ. ಇಂತಹ ಕಾದಂಬರಿಗಳನ್ನು ಕೈಬಿಟ್ಟರೂ ಸಾಮಾಜಿಕ ವೈಪರಿತ್ಯ, ದಲಿತ ಸ್ತ್ರೀಯರ ಸಂಘರ್ಷ ಕೊಳಗೇರಿಯ ಹೆಣ್ಣುಗಳ ಸಂಕೀರ್ಣಾನುಭವಗಳ ಕುರಿತು ಬರೆದ ಕಾದಂಬರಿಗಳು ಗಮನ ಸೆಳೆಯುತ್ತವೆ. ಕಾದಂಬರಿಕಾರ್ತಿಯರು ಮಧ್ಯಮ ವರ್ಗದ ಕೌಟುಂಬಿಕ ನೆಲೆ, ಹದಿಹರೆಯದ ಪ್ರೇಮ, ಪ್ರಣಯ, ಪುರುಷ ಪ್ರಧಾನ ವ್ಯವಸ್ಥೆಯ ಮೌಲ್ಯಗಳನ್ನೇ ವೈಭವೀಕರಿಸಿ ಬರೆಯುತ್ತಿರುವ ಸಂದರ್ಭದಲ್ಲಿ ಗೀತಾ ಒಂದು ಹೆಜ್ಜೆ ಮುಂದಿಟ್ಟು ಕೆಳಗೇರಿಯ ಕತ್ತಲು ಲೋಕದ ಮೌನಗಳಿಗೆ ಮಾತಾದದ್ದು ಸ್ವಾಗತಾರ್ಹವೇ ಸರಿ"[1] ಎನ್ನುವ ಮೀನಾಕ್ಷಿಬಾಳಿ ಅವರ ಮಾತುಗಳನ್ನು ಬಹುಪಾಲು ಒಪ್ಪಿಕೊಳ್ಳಬಹುದು.

ಗೀತಾನಾಗಭೂಷಣ ಅವರು ಕಾದಂಬರಿಗೆ ಆಯ್ದುಕೊಳ್ಳುವ ವಿಶಿಷ್ಟ ಕಥಾವಸ್ತು, ನಿರೂಪಣಾ ಶೈಲಿಗಳಿಂದಲೇ ಸಾಹಿತ್ಯ ಲೋಕದ ಸಹೃದಯರ ಮೆಚ್ಚುಗೆಗಳಿಸುತ್ತಾರೆ. ಹೈದರಾಬಾದ್ ಕರ್ನಾಟಕದ ಜನಜೀವನವನ್ನು ಕಣ್ಣಾರೆ ಕಂಡು ಅನುಭವಿಸಿರುವ ಲೇಖಕಿಯು ಅದನ್ನು ಸೂಕ್ಷ್ಮ ನೆಲೆಯಲ್ಲಿ ಅವಲೋಕಿಸಿ ತಮ್ಮ ಬರಹದಲ್ಲಿ ಹಿಡಿದಿಡುವಲ್ಲಿ ಯಶಸ್ವಿಯಾಗಿದ್ದಾರೆ. ಅವರ ಕಥೆ ಕಾದಂಬರಿಗಳನ್ನು ಓದಿದವರಿಗೆ ಮೇಲ್ನೋಟಕ್ಕೆ ಒಂದೇ ರೀತಿಯ ಕಥಾ ಹಂದರವಿದೆ ಎನಿಸುತ್ತದೆ. ಆದರೆ ಅವಲೋಕನಕ್ಕೆ ಹೊರಟವರಿಗೆ ಮಾತ್ರ ಅದರ ಆಳ-ಅಗಲಗಳ ಪರಿಚಯವಾಗುತ್ತದೆ. "ಗೀತಾರವರ ಬಹುತೇಕ

ಕಾದಂಬರಿಗಳಲ್ಲಿ ಉನ್ನತ ವರ್ಗದ ಗೌಡ-ಕುಲ್ಕರ್ಣಿ, ಸಾಹುಕಾರ ಮುಂತಾದ ಗ್ರಾಮ ವ್ಯವಸ್ಥೆಯ ಆಡಳಿತಗಾರರು ಹಾಗೂ ದಲಿತರಾದಿಯಾಗಿ ಸಮಗ್ರ ಪುರುಷವರ್ಗವು ಹಲವು ಹತ್ತು ಕುಲದ ದೈಹಿಕ ದುಡಿಮೆಗಾರ ಸ್ತ್ರೀಯರ ಮೇಲೆಸಗುವ ಹಿಂಸೆ, ಕ್ರೌರ್ಯ, ಅನ್ಯಾಯಗಳು ಪ್ರಧಾನವಾಗಿ ಚಿತ್ರಣಗೊಂಡಿವೆ. ಈ ಎಲ್ಲ ಚಿತ್ರಣಗಳು ಈ ನೆಲದ ಜವಾರಿ ಭಾಷೆಯಲ್ಲಿ ಅನಾವರಣಗೊಂಡಿದೆ. ಹಾಗೆ ನೋಡಿದರೆ 'ಗೀತಾ' ಒಂದೇ ವಸ್ತುವಿನ ಸುತ್ತ ಗಿರಕಿ ಹೊಡೆಯುತ್ತಾರೆ ಎನಿಸಿದರೂ ಶೋಷಣೆಯ ಹಲವು ಮುಖಗಳನ್ನು ಸೂಕ್ಷ್ಮಾತಿಸೂಕ್ಷ್ಮ ಒಳತೋಟಿಗಳನ್ನು ವಿಭಿನ್ನ ಸಂದರ್ಭ ಮತ್ತು ನೆಲೆಯಲ್ಲಿಟ್ಟು ಕೆದಕುವ ಪ್ರಯತ್ನ ಮಾಡುತ್ತಾರೆ. ನಮ್ಮ ದೇಶದ ದಲಿತ ಸಂಸ್ಕೃತಿಗಳ ವಿವರಗಳು ಒಂದೆರಡು ಕೃತಿಗಳಲ್ಲಿ ಹೇಳಿ ಮುಗಿಸುವಂತಹವುಗಳಲ್ಲ. ಅವು ಹಲವಾರು ಕೃತಿಗಳಲ್ಲಿ ಚಿತ್ರಣಗೊಂಡರೂ ಇನ್ನೂ ಕಾಣಿಸಿಕೊಳ್ಳದೇ ಹಲವಾರು ಶೋಷಿತ ಆಯಾಮಗಳು ಭಾರತೀಯ ಸಮಾಜದ ಶ್ರೇಣೀಕೃತ ವ್ಯವಸ್ಥೆಯ ಸಂಕೀರ್ಣತೆಯಿಂದಾಗಿ ಇತಿಹಾಸ ಅಥವಾ ಕಲಾಕೃತಿಯ ತೆಕ್ಕೆಗೆ ದಕ್ಕದೇ ಹೋಗುವ ಸಾಧ್ಯತೆ ಇದೆ. ಹೀಗಾಗಿಯೇ ಲೇಖಕಿ ಅದೇ ವಸ್ತುವನ್ನು ಕುರಿತು ಹಲವು ಕೃತಿ ನೀಡಿದರೂ ಮತ್ತೆ ಮತ್ತೆ ಬರೆಯಲು ಪೀಡಿಸಿದಂತೆ ತೋರುತ್ತದೆ"[3] ಎಂದು ಮೀನಾಕ್ಷಿ ಬಾಳಿಯವರು ವ್ಯಕ್ತಪಡಿಸಿರುವ ಅಭಿಪ್ರಾಯಗಳನ್ನು ಒಪ್ಪಿಕೊಳ್ಳಬಹುದು.

ಗೀತಾ ನಾಗಭೂಷಣ ಅವರು ತಮ್ಮ ಕಾದಂಬರಿಯಲ್ಲಿ ಗುಲಬರ್ಗಾದ ಸುತ್ತಮುತ್ತಲಿನ ಪ್ರದೇಶದ ಜನ ಜೀವನವನ್ನು ಕೇಂದ್ರವಾಗಿ ಇಟ್ಟುಕೊಂಡಿವೆ. ಝೋಪಡಿ ಪಟ್ಟಿಯಲ್ಲಿ ವಾಸಿಸುವ ಜನರ ಜೀವನದ ರೀತಿ ನೀತಿಗಳು, ಹಸಿವೆಯನ್ನು ನೀಗಿಸಿಕೊಳ್ಳಲು ಅವರು ಮಾಡುವ ಕಳ್ಳತನ, ಸುಳ್ಳು, ಹಾದರಗಳು ಹಾಗೂ ಹಳ್ಳಿಯ ಕೆಳವರ್ಗದ ಜನರ ಜೀತ, ದುಡಿಮೆ ಹಾಗೂ ಸಾವ್ಕಾರ್, ಗೌಡ, ಕುಲ್ಕರ್ಣಿಯರ ದೌರ್ಜನ್ಯ, ಹಿಂಸೆ, ಕೌರ್ಯಗಳು, ದಲಿತ, ಕೆಳವರ್ಗದ ಮಹಿಳೆಯರ ಮೇಲಾಗುವ ಮಾನಸಿಕ, ದೈಹಿಕ ಶೋಷಣೆಗಳು, ಕೆಳವರ್ಗದ ಜನರ ಕುಡಿತ, ಹಾದರಗಳನ್ನು ಲೇಖಕಿಯು ಕಾದಂಬರಿಯಲ್ಲಿ ಒಂದಲ್ಲಾ ಒಂದು ರೀತಿಯಲ್ಲಿ ಸೂಕ್ಷ್ಮವಾಗಿಯೂ ಸಮಗ್ರವಾಗಿಯೂ ವಿಭಿನ್ನ ಸಂದರ್ಭಗಳಲ್ಲಿಟ್ಟು ಕಟ್ಟಿಕೊಡುತ್ತಾರೆ. ಒಂದೊಂದು ಕಾದಂಬರಿ ದಲಿತ, ಕೆಳವರ್ಗದ ಕೂಲಿಕಾರರ ಕಥೆಯನ್ನು ಕರುಣಾಜನಕವಾಗಿ ಆ ಜನರ ಭಾಷಾ ಶೈಲಿಯಲ್ಲಿಯೇ ಲೇಖಕಿ ಅನಾವರಣಗೊಳಿಸಿದ್ದಾರೆ. ಆದ್ದರಿಂದ ಪ್ರತಿಯೊಂದು ಕಾದಂಬರಿಯಲ್ಲಿ ಪ್ರತ್ಯೇಕವಾಗಿಯೇ ಅವಲೋಕಿಸುವ ಅಗತ್ಯವಿದೆ. ಪ್ರತಿಯೊಂದು ಕಾದಂಬರಿಯಲ್ಲಿ ಸೂಕ್ಷ್ಮವಾಗಿ ಅವಲೋಕಿಸಿ ಅವುಗಳ ವಸ್ತು, ಹಿನ್ನಲೆ, ಪ್ರೇರಣೆ, ಲೇಖಕಿಯ ಆಶಯ, ಧೋರಣೆಗಳನ್ನು ಒರೆಹಚ್ಚುವ ಪ್ರಯತ್ನಕ್ಕೆ ಇಲ್ಲಿ ಮುಂದಾಗಿದ್ದೇನೆ.

'ಧುಮ್ಮಸು' ಕೆಳವರ್ಗದ ಹೆಣ್ಣೊಬ್ಬಳ ಜೀವನದೊಂದಿಗೆ ಆಕೆ ಬೆಳೆದು ಬಂದ ಸಮಾಜ, ಸಂಸ್ಕೃತಿ, ಜನಜೀವನದ ಚಿತ್ರಣವನ್ನು ಒಳಗೊಂಡಿರುವ ಕಾದಂಬರಿ. ಅನಕ್ಷರಸ್ಥಳೂ, ಬುದ್ಧಿವಂತಳೂ ಆದ ಹೆಣ್ಣೊಬ್ಬಳು ಅಸಹಾಯಕ ಸ್ಥಿತಿಯಲ್ಲಿಯೂ ಮೌಢ್ಯಗಳನ್ನು ಧಿಕ್ಕರಿಸುವ, ಸಮಾಜದ ರೀತಿ ರಿವಾಜುಗಳನ್ನು ತಿರಸ್ಕರಿಸಿ ನಡೆಯುವ ಸಾಹಸ ಮಾಡುತ್ತಾಳೆ. ಎಲ್ಲರ ವಿರೋಧವನ್ನು ಕಟ್ಟಿಕೊಂಡರೂ, ತನಗಾಗಿ ಬದುಕಲು ಮುಂದಾಗುವ ದಿಟ್ಟ ದಲಿತ ಹೆಣ್ಣಿನ ಜೀವನವೇ ಇಡೀ ಕಾದಂಬರಿಯ ವಿಸ್ತಾರವನ್ನೆಲ್ಲಾ ವ್ಯಾಪಿಸಿಕೊಂಡಿದೆ. ಈ ಕಾದಂಬರಿಗೆ ಲೇಖಕಿ ಬಳಸಿರುವ ನಿರೂಪಣಾ ಶೈಲಿ ಮತ್ತು ಭಾಷಾ ಸೊಗಡಿನಿಂದಲೇ ಇದು ಯಶಸ್ಸನ್ನು ಕಂಡಿದೆ ಎಂದು ಹೇಳಬಹುದು.

ಭೀಮಾ ಹೊಳೆಯ ದಂಡೆಯಲ್ಲಿದ್ದ ದುರ್ಗಿಹಳ್ಳಿಯ ವರ್ಣನೆಯಿಂದ ಕಾದಂಬರಿ ಆರಂಭವಾಗುತ್ತದೆ. ಈ ಹಳ್ಳಿಯ ಮೇಲ್ವರ್ಗದವರ ಮನೆಯ ಆಳುಮಗನಾಗಿದ್ದ ಸೀನಿಂಗನ ಮಗಳು ಸೋನಿ ಈ ಕಾದಂಬರಿಯ ನಾಯಕಿ. ತಾಯಿ ಯಿಲ್ಲದ ಮಗಳನ್ನು ಸೀನಿಂಗ ಪ್ರೀತಿಯಿಂದ ಬೆಳೆಸುತ್ತಾನೆ. ಮುದುಕಿ ಮುತ್ತವ್ವಾಯಿ ಸೋನಿಯನ್ನು ಬೆಳೆಸುವಲ್ಲಿ ಹೆಚ್ಚಿನ ಸಹಕಾರ ನೀಡುತ್ತಾಳೆ. ಸೀನಿಂಗ ಸೋನಿಯ ಬಗೆಗೆ ಆಡುವ ಹೆಮ್ಮೆಯ ಮಾತುಗಳು ಆಕೆಯ ವ್ಯಕ್ತಿತ್ವವನ್ನು ಬಿಂಬಿಸುವುದಲ್ಲದೇ ಆಕೆಯ ಧೈರ್ಯ ಸಾಹಸಗಳಿಗೆ ಸಾಕ್ಷಿಯಾಗಿ ನಿಲ್ಲುತ್ತವೆ. "ನನ್ನ ಮಗಳು ಸೋನಿ ಅಂದ್ರ ನನಗ ಗಂಡಸ ಮಗಾ ಇದ್ದಂಗೇ ಅದಕ್ಕಿಂತಾ ಒಂದು ಕೈ ಮ್ಯಾಲೇ ಅನ್ನು ಗಂಡು ಪಾರಗೋಳ ಹಂಗೇ ಬೆಳೆಸೀನಿ ಅಕೀಗಿ ಯಾ ಗಂಡ ಪಾರನಕ್ಕಿಂತಾ ಆಕಿಯೇನೂ ಯಾವದರಾಗನೂ ಕಮ್ಮಿಯಿಲ್ಲೊ ಬೀರಪ್ಪಣ್ಣಾ....... ನನ್ ಸೋನಿ ಅಂದ್ರ ಹುಲಿ ...."[3] ಹುಲಿ .... "ಸೋನಿಯ ಗುಣಗಳು ಎಲ್ಲರನ್ನೂ ಆಕರ್ಷಿಸುತ್ತವೆ. ಕೆಳಗೇರಿಯಲ್ಲಿ ಹುಟ್ಟಿರುವ ಈಕೆಯ ಬಗ್ಗೆ ಆ ಕುಲದ ಜನರು ಹೆಮ್ಮೆ ಪಡುತ್ತಾರೆ. ತುಂಬು ಹೊಳೆಯಲ್ಲಿ ಈಜುವುದು ಸೋನಿಗೆ ಮೋಜಿನ ವಿಷಯ. ಈ ಉತ್ಸಾಹವು ಆಕೆಯ ಪ್ರಾಣವನ್ನು ಅಪಾಯದಲ್ಲಿ ಸಿಲುಕಿಸಿದಾಗ ಆಕೆಯನ್ನು ಡ್ರೈವರ್ ಮಲ್ಲೇಶಿ ರಕ್ಷಿಸುತ್ತಾನೆ. ಈ ಘಟನೆಯ ಅನಂತರ ಅವರಿಬ್ಬರ ಮನಸ್ಸು ಒಂದಾಗುತ್ತದೆ. ಹಿರಿಯರ ಒಪ್ಪಿಗೆಯೂ ದೊರೆತು ಮದುವೆಯೂ ನಿಶ್ಚಯವಾಗುತ್ತದೆ. ಮದುವೆಯು ಇನ್ನು ಮೂರುದಿನ ಉಳಿದಿದೆ ಎನ್ನುವಾಗಲೆ ಬಸ್ ಅಪಘಾತದಲ್ಲಿ ಮಲ್ಲೇಶಿ ಮೃತನಾಗುತ್ತಾನೆ ಬದುಕುವ ಆಸೆಯೇ ಬತ್ತಿ ಹೋದ ಸೋನಿಗೆ ಆಕೆಯ ಗರ್ಭದಲ್ಲಿದ್ದ ಮಲ್ಲೇಶಿಯ ಕುಡಿಯು ಬದುಕಬೇಕೆಂಬ ಆಸೆಯನ್ನು ಮೂಡಿಸುತ್ತದೆ. ಕುಲದ ಮರ್ಯಾದೆಯನ್ನು ಕಾಪಾಡಿಕೊಳ್ಳಲು ಸೋನಿಯ ಬಸಿರನ್ನು ತೆಗೆಸಬೇಕೆಂದು ಹಿರಿಯರು ಒತ್ತಾಯಿಸುತ್ತಾರೆ. ಸೀನಿಂಗ ಮತ್ತು ಮುತ್ತವ್ವಾಯಿಯು ಸೋನಿಗೆ ಬುದ್ಧಿ ಹೇಳುವುದಲ್ಲದೇ, ಕುಲದವರ ಆಜ್ಞೆಯಂತೆ ನಡೆಯಲು ಒತ್ತಾಯಿಸುತ್ತಾರೆ. ಆದರೆ ಸೋನಿ ನಿರ್ಧಾರವನ್ನು ಬದಲಿಸುವುದಿಲ್ಲ.

ಸೋನಿಯ ಪ್ರಕರಣ ಊರಿನ ಪಂಚರ ಮುಂದೆ ಬರುತ್ತದೆ. ಪಂಚಾಯಿತಿಯಲ್ಲಿ ವಿಚಾರಣೆಗೆ ಒಳಪಡಿಸಲಾಗುತ್ತದೆ. ಸೋನಿಯು ಪಂಚಾಯಿತಿಯಲ್ಲಿ ಧೈರ್ಯವಾಗಿ ತನ್ನ ನಿರ್ಧಾರವನ್ನು ಪ್ರಕಟಿಸಿ ಎಲ್ಲರ ಕೋಪಕ್ಕೆ ಗುರಿಯಾಗುತ್ತಾಳೆ. ಗೌಡ, ಕುಲ್ಕರ್ಣಿ, ಸಾವುಕಾರರು ತಮ್ಮ ಮುಂದೆ ಎದುರಾಡಿದ ಕೆಳಗೇರಿಯ ಹೆಣ್ಣಿನ ಸೊಕ್ಕು ಮುರಿಯಬೇಕೆಂದು ಊರಿನಿಂದಲೇ ಬಹಿಷ್ಕಾರ ಹಾಕುತ್ತಾರೆ ಮರ್ಯಾದೆಯಿಂದ ಬಾಳಿದ್ದ ಸೀನಿಂಗ ಇದೆಲ್ಲವನ್ನೂ ಕಂಡು ಉರುಳು ಹಾಕಿಕೊಂಡು ಸಾವಿಗೆ ಶರಣಾಗುತ್ತಾನೆ. ಮೇಲ್ವರ್ಗದ ಪಂಚರು ಸೀನಿಂಗನ ಹೆಣದ ಸಂಸ್ಕಾರ ಮಾಡಲು ಆತುರ ತೋರಿದಾಗ ಸೋನಿ ತಂದೆಯ ಸಾವಿಗೆ ಪಂಚರ ತೀರ್ಮಾನ ಕಾರಣವೆಂದು ಪ್ರತಿಭಟಿಸುತ್ತಾಳೆ. ಹಣದ ಪ್ರಭಾವದಿಂದ ಮೇಲ್ವರ್ಗದ ಪಂಚರು ಈ ಘಟನೆಯನ್ನು ಮುಚ್ಚಿಹಾಕಿಸುತ್ತಾರೆ. ಸೋನಿಯನ್ನು ಬಹಿಷ್ಕರಿಸಿ ಆಕೆಯ ಗುಡಿಸಲನ್ನು ಸುಟ್ಟುಹಾಕುತ್ತಾರೆ. ಎಲ್ಲರ ಮನೆ ಬಾಗಿಲುಗಳು ಸೋನಿಯ ಪಾಲಿಗೆ ಮುಚ್ಚುತ್ತವೆ. ಎರಡು ಮೂರು ದಿನ ಉಪವಾಸದಿಂದಲೇ ಕಳೆದ ಸೋನಿ ಪಟ್ಟಣಕ್ಕೆ ಹೋಗಿ ಬದುಕುವ ನಿರ್ಧಾರ ಮಾಡಿ ಮಲ್ಲೇಶಿಯ ಸ್ನೇಹಿತರ ಸಹಾಯ ಪಡೆದು ಬದುಕು ರೂಪಿಸಿಕೊಳ್ಳುವ ಧೈರ್ಯವನ್ನು ಮಾಡುತ್ತಾಳೆ. ಮನೆಕಟ್ಟುವಲ್ಲಿ ಕೂಲಿಯಾಗಿ ಸೇರಿಕೊಂಡು ದುಡಿಯುವ ಈಕೆ ಮಲ್ಲೇಶಿಯ ವಿಧವೆ ಎಂದೇ ಪರಿಚಯಿಸಿಕೊಂಡು ಎಲ್ಲರ ಅನುಕಂಪವನ್ನು ಗಿಟ್ಟಿಸಿಕೊಂಡು ಗಂಡು ಮಗುವನ್ನು ಹೆತ್ತು ಬೆಳೆಸುತ್ತಾಳೆ.

'ಧುಮ್ಮಸು' ಎಂದರೆ ನೆಲವನ್ನು ಇಲ್ಲವೇ ತಾರಸಿಯನ್ನು ಬಡಿದು ಗಟ್ಟಿಗೊಳಿಸಲು ಬಳಸುವ ಕಬ್ಬಿಣದ ಅಥವಾ ಮರದ ಉಪಕರಣ. ಸೋನಿಯ ನೋವನ್ನು ಕಂಡ ಅನುಭವಿ ಮುದುಕನೊಬ್ಬ "ಧುಮ್ಮಸಿನ ಪೆಟ್ಟುಗಳು ಬಿದ್ದಾಂಗ ಛಾವಣಿಯ ಗಟ್ಟಿಯಾಗ್ತದ ಹಂಗೇ ಹೆಂಗಸು ತನ್ನ ಬದುಕಿನ್ಯಾಗ ಬೀಳೋ ಪೆಟ್ಟುಗಳಿಗೆ ಎದಿಗಟ್ಟಿ ಮಾಡ್ಕೊಂಡು ಬಾಳ್ಯಾ ಮಾಡೋದು ಕಲಿಬೇಕವ್ವಾ ...."[೪] ಎಂದು ಹೇಳುತ್ತಾಳೆ. ಧುಮ್ಮಸಿನ ಪೆಟ್ಟುಗಳಂತೆ ಮೈ ಮನಸ್ಸಿನ ಮೇಲೆ ಬಿದ್ದು ಗಾಯಗೊಳಿಸಿದ ಕಷ್ಟದ ಪೆಟ್ಟುಗಳನ್ನು ನೆನವ ಸೋನಿಯ ಮನಸ್ಸು ಗಟ್ಟಿಗೊಳ್ಳುತ್ತದೆ. ತನ್ನ ಮಗನನ್ನು ಚೆನ್ನಾಗಿ ಬೆಳೆಸಿ ಒಳ್ಳೆಯ ಅಧಿಕಾರಿಯನ್ನಾಗಿಸುವ ಕನಸ್ಹೊತ್ತ ಸೋನಿಯು ಮಗನಿಗೆ ಮೇಲ್ವರ್ಗದ ಜನರು ರೂಢಿಸಿರುವ ಕಟ್ಟು ಪಾಡುಗಳನ್ನು ಧಿಕ್ಕರಿಸುವ ಹಾಗೂ ಕೆಳವರ್ಗದವರಿಗೆ ಬೆಂಬಲವಾಗಿ ನಿಲ್ಲುವ ತಾಕತ್ತು ತುಂಬಲು ಪ್ರಯತ್ನಿಸುತ್ತಾಳೆ. ಕಷ್ಟದ ದಾರಿಯನ್ನು ಸವೆಸಿದ ಸೋನಿಗೆ ಮಗನಿಂದ ಸುಖದ ದಿನಗಳು ಬರುತ್ತವೆಂಬ ಸೂಚನೆಯನ್ನು ನೀಡುತ್ತಾ ಲೇಖಕಿ ಕಾದಂಬರಿಯನ್ನು ಮುಗಿಸಿದ್ದಾರೆ. ಸಮಾಜದ ಎಲ್ಲ ಕಟ್ಟು ಪಾಡುಗಳನ್ನು ಮೀರಿ ಧೈರ್ಯವಾಗಿ ಬದುಕು ಕಟ್ಟಿಕೊಂಡ ದಿಟ್ಟ ಹೆಣ್ಣಿನ ಚಿತ್ರಣದಿಂದಲೇ ಕಾದಂಬರಿ ಎಲ್ಲರ ಗಮನ ಸೆಳೆದಿದೆ.

ಕಾದಂಬರಿಗಳ ಜಾಡನ್ನೇ ಹಿಡಿದಿರುವ ಗೀತಾನಾಗಭೂಷಣ ಅವರ ಎಲ್ಲ ಕಥೆಗಳ ಕೇಂದ್ರವಾಗಿ ನೊಂದ ಸ್ತ್ರೀ ಇದ್ದಾಳೆ. ಈ ಕಥೆಗಳು ಒಂದೇ ರೀತಿಯ ಕಥಾವಸ್ತುವನ್ನು ಒಳಗೊಂಡು, ಒಂದೇ ರೀತಿಯಲ್ಲಿ ನಿರೂಪಣೆಯಾಗುವುದರಿಂದ ಓದುಗರಿಗೆ ಏಕತಾನತೆಯ ಅನುಭವವನ್ನು ನೀಡುತ್ತವೆ. ಎಲ್ಲ ಕಥೆಗಳಲ್ಲಿಯೂ ಪ್ರಕೃತಿಯ ವಿಭಿನ್ನ ವರ್ಣನೆ, ಹರೆಯ, ಗಂಡು ಹೆಣ್ಣಿನ ಸಂಭೋಗ, ಕುಡಿತ, ಹಸಿವಿನ ಹಾಹಾಕಾರ ಸುಳ್ಳು, ಹಾದರ ಮುಂತಾದವುಗಳನ್ನು ಮತ್ತೆ ಮತ್ತೆ ಚಿತ್ರಿಸಿರುವುದರಿಂದ ಓದುಗರಿಗೆ ವರ್ಣನೆ, ಚಿತ್ರಣಗಳ ಪುನರಾವರ್ತನೆಯ ಅನುಭವವಾಗುತ್ತದೆ. ಇದು ಓದುಗರಿಗೆ ಬೇಸರವನ್ನೂ ಉಂಟುಮಾಡಬಹುದು. ಕೆಲವು ಕಥೆಗಳು ದುಡಿಮೆಗಾರರ ಶೋಷಣೆಯ ಚಿತ್ರಣವನ್ನು ಸೂಕ್ಷ್ಮಸ್ತರದಲ್ಲಿ ಕಟ್ಟಿಕೊಟ್ಟು, ಪ್ರಾದೇಶಿಕತೆ ಮತ್ತು ಭಾಷಾ ವೈಶಿಷ್ಟ್ಯತೆಯನ್ನು ಮೆರೆದು ಉತ್ತಮ ಕಥೆಗಳಾಗಿ ಮಾನ್ಯತೆ ಪಡೆದಿದೆ. ಲೇಖಕಿ ಜನಪದ ನಂಬಿಕೆ, ಆಚರಣೆಗಳನ್ನು ಕಥೆಗಳಲ್ಲಿ ಚೆನ್ನಾಗಿಯೇ ದುಡಿಸಿಕೊಂಡಿದ್ದಾರೆ. ಜನಪದ ನಂಬಿಕೆ, ಆಚಾರ ವಿಚಾರಗಳ ಚಿತ್ರಣವು ಕಥೆಗಳ ರೋಚಕತೆಗೆ ಕಾರಣವಾಗಿವೆ. ತಳವರ್ಗದ ಜನರ ಬದುಕು, ಬವಣೆ ಹಾಗೂ ಅವರ ಸಂಸ್ಕೃತಿಯನ್ನು ಕಟ್ಟಿಕೊಡುವಲ್ಲಿ ಲೇಖಕಿಯ ಕಥಾ ನಿರೂಪಣೆ ಯಶಸ್ವಿಯಾಗಿದೆ ಎನ್ನಬಹುದು.

ಟಿಪ್ಪಣಿಗಳು :

೧. ಡಾ. ಸರಸ್ವತಿ ಚಿಮ್ಮಲಗಿ (ಸಂ), ಕಲ್ಬುರ್ಗಿಯ ಸ್ಪಂದನ, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಮೊದಲ ಮುದ್ರಣ ೨೦೦೪, ಪು.ಸಂ. ೩೮.

೨. ಅದೇ ಪುಟ ಸಂಖ್ಯೆ ೩೯

೩. ಗೀತಾ ನಾಗಭೂಷಣ, ಧುಮ್ಮಸು, ಮಹಿಳಾ ಸಾಹಿತ್ಯಿಕ ಪ್ರಕಾಶನ, ಹುಬ್ಬಳ್ಳಿ, ಮೊದಲ ಆವೃತ್ತಿ-೧೯೯೪ ಪು ಸಂಖ್ಯೆ ೨೩

೪. ಅದೇ ಪುಟ ಸಂಖ್ಯೆ ೨೨೩

ಅಧ್ಯಾಯ-೪

'ಧುಮ್ಮಸು' ಕಾದಂಬರಿಯ ಸಾಂಸ್ಕೃತಿಕ ಅಂಶಗಳು

೧) ಸಾಮಾಜಿಕ
೨) ಕೌಟುಂಬಿಕ
೩) ಆರ್ಥಿಕ
೪) ಧಾರ್ಮಿಕ

ಅಧ್ಯಾಯ-೪

'ಧುಮ್ಮಸು' ಕಾದಂಬರಿಯ ಸಾಂಸ್ಕೃತಿಕ ಅಂಶಗಳು

ಇತ್ತೀಚೆಗೆ ಎರಡೂವರೆ ದಶಕಗಳಿಂದ ಸ್ತ್ರೀವಾದಿ ಚಿಂತನೆಯು ಹುಟ್ಟಿಕೊಂಡಿದೆ. 'ಸ್ತ್ರೀ' ಪುರುಷ ನಿರ್ಮಿತವಾದ ಕಟ್ಟುಪಾಡುಗಳಲ್ಲಿ ಪಡುವ ಬವಣೆಯನ್ನೇ ಕೆಲವು ಲೇಖಕಿಯರು ತಮ್ಮ ಕೃತಿಗಳ ಕೇಂದ್ರವಸ್ತುವನ್ನಾಗಿಸಿಕೊಂಡು ಸಾಹಿತ್ಯ ರಚನೆಯಲ್ಲಿ ತೊಡಗಿದ್ದಾರೆ. ಈ ಲೇಖಕಿಯರಿಗೆ ಸ್ತ್ರೀಪರ ಹೋರಾಟಗಳು, ಸ್ತ್ರೀವಾದಿ ಚಳುವಳಿಗಳು, ಸ್ತ್ರೀವಾದಿ ಚಿಂತಕರ ವಿಚಾರಧಾರೆಗಳು ಸ್ಪೂರ್ತಿಯಾಗಿರುವುದನ್ನು ಮನಗಾಣಬಹುದು.

ಗೀತಾ ನಾಗಭೂಷಣ ಅವರು ಹೈದರಾಬಾದ್ ಕರ್ನಾಟಕದ ಮಹಿಳಾ ಲೇಖಕಿ, ಚಿಂತಕಿ, ಬರಹದ ಬಂಡಾಯಗಾರ್ತಿ. ಹಿಂದುಳಿದ ಉತ್ತರ ಕರ್ನಾಟಕದ ಜನರ ಸ್ಥಿತಿಗತಿ, ಅವರ ಮೇಲಾಗುತ್ತಿರುವ ಶೋಷಣೆ ಮತ್ತು ಆ ಪ್ರದೇಶದ ಜನಜೀವನ ಸಂಸ್ಕೃತಿಯನ್ನೇ ತಮ್ಮ ಬರಹಕ್ಕೆ ಸ್ಪೂರ್ತಿಯಾಗಿಸಿಕೊಂಡಿದ್ದಾರೆ. ಈ ಲೇಖಕಿ ತಮ್ಮ ಕೃತಿಗಳಲ್ಲಿ ಹೈದರಾಬಾದ್ ಕರ್ನಾಟಕದ ಜನರ ಹೀನಾಯವಾದ ಬದುಕಿನ ಚಿತ್ರಣ ನೀಡಿದ್ದಾರೆ. ಅಲ್ಲಿನ ಸ್ತ್ರೀಯರೇ ಇವರ ಕೃತಿಗಳ ಕೇಂದ್ರ ಬಿಂದುಗಳು. ಮಹಿಳೆಯರ ಮೇಲಾಗುವ ಲೈಂಗಿಕ ಶೋಷಣೆಯೇ ಇವರ ಕಾದಂಬರಿಗೆ ದೊರೆತಿರುವ ಮುಗಿಯದ ವಸ್ತು ಹಿಂದುಳಿದ ಜನಾಂಗಗಳ ಮಹಿಳೆಯರ ಮೇಲೆ ಮುಖ್ಯವಾಗಿ ದಲಿತ ಸ್ತ್ರೀಯರ ಮೇಲಾಗುವ ಲೈಂಗಿಕ ದೌರ್ಜನ್ಯಗಳ ವಿವಿಧ ಮಜಲುಗಳನ್ನು ಲೇಖಕಿಯು ಚಿತ್ರಿಸಿದ್ದಾರೆ. ದಲಿತ, ಶೂದ್ರ ಸ್ತ್ರೀಯರು ಮೇಲ್ವರ್ಗದ ಪುರುಷರಿಂದಲೇ ಅಲ್ಲದೇ ತಮ್ಮ ವರ್ಗದ ಪುರುಷರಿಂದಲೂ ದೌರ್ಜನ್ಯಕ್ಕೆ ತುತ್ತಾಗಿ ಕಣ್ಣೀರಿನ ವ್ಯಥೆಯಲ್ಲಿ ಬದುಕಲಾರದೆ, ಸಾಯಲಾಗದೆ ತೊಳಲಾಡುವ ಸಂದಿಗ್ಧ ಸ್ಥಿತಿಯನ್ನು ಇಲ್ಲಿ ಕಾಣಬಹುದು.

ಮೇಲ್ವರ್ಗ ಕೆಳವರ್ಗ ಎಂಬ ಭೇದವಿಲ್ಲದೆ ಎಲ್ಲ ಸ್ತ್ರೀಯರು ಮಾನಸಿಕವಾಗಿ ದೈಹಿಕವಾಗಿ ಶೋಷಣೆಗೆ ಒಳಗಾಗುವುದನ್ನೂ ಇಲ್ಲಿ ನೋಡಬಹುದು. ಮೇಲ್ವರ್ಗದ ಸ್ತ್ರೀಯರು ದಲಿತ ಶೂದ್ರವರ್ಗದ ಸ್ತ್ರೀಯರಷ್ಟು ಅನ್ಯಾಯಕ್ಕೆ ದೌರ್ಜನ್ಯಕ್ಕೆ ಒಳಗಾಗುವುದಿಲ್ಲ. ಇಲ್ಲಿನ ಪುರುಷವರ್ಗವು ದೊಡ್ಡತನದ ಸೋಗಿನಲ್ಲಿ ಆಡಂಬರ ಐಷಾರಾಮಿ ಜೀವನ ನಡೆಸುವಾಗ ತಮ್ಮ ಕೈಹಿಡಿದ ಹಂಡತಿಯರಿಗೆ ದ್ರೋಹ ಮಾಡುತ್ತಿದ್ದೇವೆಂಬ ಪರಿವೇ ಇಲ್ಲದೇ ಕೈ ಹಿಡಿದವಳ ಮುಂದೆಯೇ ಅನೇಕ ಹೆಣ್ಣುಗಳೊಂದಿಗೆ ಸುಖಿಸುತ್ತಾರೆ. ಪ್ರತಿಭಟಿಸುವ ಎದೆಗಾರಿಕೆಯುಳ್ಳ ಮೇಲ್ವರ್ಗದ ಸ್ತ್ರೀಯರು ಪುರುಷರ ವಿರುದ್ಧ ಸಿಡಿದು ನಿಂತಾಗ ಸಾವಿಗೆ ದೂಡಲ್ಪಡುತ್ತಾರೆ. ಇನ್ನು ಕೆಲ ಜಾಣ ಸ್ತ್ರೀಯರು ಗಂಡಸರ ವರ್ತನೆಗಳ ಬಗ್ಗೆ ಹೇಸಿಕೆ

ಉಂಟಾದರೂ ತೋರಿಸಿಕೊಳ್ಳದೇ ತಣ್ಣಗಿನ ಪ್ರತಿಕ್ರಿಯೆ ನೀಡಿದರೂ ಪ್ರತಿಕಾರವಾಗಿ ಆಳು ಮಕ್ಕಳೊಂದಿಗೆ ಸಂಬಂಧ ಬೆಳೆಸಿ ತಮ್ಮ ಆಸೆಗಳನ್ನು ಪೂರೈಸಿಕೊಂಡು ಗರತಿಯರಂತೆ ಬಾಳ್ವೆ ನಡೆಸಿದ ನಿದರ್ಶನಗಳು ಇಲ್ಲಿವೆ.

"ದಲಿತ-ಬಂಡಾಯಗಳು ಕನ್ನಡ ಭಾಷಿಕ ಸಾಮರ್ಥ್ಯದ ಪರಿಧಿಯನ್ನು ಇನ್ನಿಲ್ಲದಂತೆ ಹಿಗ್ಗಿಸುತ್ತಿರುವ ಸಂದರ್ಭದಲ್ಲಿ ಕಾಣಿಸಿಕೊಳ್ಳುವ ಗೀತಾನಾಗಭೂಷಣ ಅವರು ದಲಿತ ಲೋಕದ ಮಹಿಳೆಯರ ಬದುಕನ್ನು ಅನಾವರಣಗೊಳಿಸಿದ್ದು ಕಡಿಮೆ ಸಾಧನೆ ಏನಲ್ಲ. ಹಾಗೆ ನೋಡಿದರೆ ಮಹಿಳೆಯರಲ್ಲಿ ದಲಿತ-ಬಲಿತ ಎಂಬ ದೊಡ್ಡ ಕಂದರವೇನಿಲ್ಲ. ವರ್ಣಾಶ್ರಮ ಪದ್ಧತಿಯು ಅನೂಚಾನವಾಗಿ ನಡೆದುಕೊಂಡು ಬಂದಿರುವ ಈ ದೇಶದಲ್ಲಿ ಒಟ್ಟು ಮಹಿಳೆಯರು 'ದಲಿತರೇ' ಹೌದು, ಹೀಗಾಗಿ ಗೀತಾರ ಕಾದಂಬರಿಯಲ್ಲಿನ ಜೀವನ ಚಿತ್ರಗಳು ಒಟ್ಟು ಮಹಿಳಾಪರ ಸಂವೇದನೆಯ ಒಂದಿಷ್ಟು ಮುಖಗಳನ್ನು ಬಿಚ್ಚಿ ಇಡುವಲ್ಲಿ ಸಶ್ರಮ ದುಡಿದಿವೆ"[7] ಎಂಬ ಮೀನಾಕ್ಷಿಬಾಳಿ ಅವರ ಅಭಿಪ್ರಾಯವನ್ನು ಒಪ್ಪಬಹುದು. ಗೀತಾನಾಗಭೂಷಣ ಅವರ ಈ 'ಧುಮ್ಮಸು' ಕಾದಂಬರಿಯು ಸ್ತ್ರೀ ಸಂವೇದನೆ, ಸ್ತ್ರೀಪರ ಕಾಳಜಿಗಳು ಹಾಗೂ ಸ್ತ್ರೀವಾದಿ ನೆಲೆಗಳನ್ನು ವಿಶ್ಲೇಷಿಸುವುದು ಈ ಅಧ್ಯಾಯದ ಮುಖ್ಯ ಉದ್ದೇಶವಾಗಿದೆ.

ಕೆಳವರ್ಗದ ದಿಟ್ಟ ಹೆಣ್ಣು ಮಗಳಾದ ಸೋನಿಯ ಜೀವನಗಾಥೆಯೇ 'ಧುಮ್ಮಸು' ಕಾದಂಬರಿಯಲ್ಲಿ ತುಂಬಿ ನಿಂತಿದೆ. ಸಮಾಜದ ರೀತಿ ನೀತಿಗಳಿಗೆ ಬೆನ್ನು ತಿರುಗಿಸಿ ನಿಲ್ಲುವ ತನಗಾಗಿ ಬದುಕುವ ದಿಟ್ಟ ಹೆಣ್ಣು, ಸೋನಿ, ಆಕೆಯ ಜೀವನದ ಸುಖ ದುಃಖವೇ 'ಧುಮ್ಮಸು' ಚಿಕ್ಕಂದಿನಲ್ಲಿಯೇ ತಾಯನ್ನು ಕಳೆದುಕೊಂಡು ತಂದೆಯ ಆರೈಕೆಯಲ್ಲಿ ಬೆಳೆದ ಸೋನಿಯನ್ನು ಮುದುಕಿ ಮುತ್ತಾವ್ವಾಯಿಯೇ ತಿದ್ದಿ ತೀಡುವ ಕೆಲಸ ಮಾಡುತ್ತಾಳೆ. ಗಂಡು ಹುಡುಗನಂತೆ ಬೆಳೆದ ಸೋನಿಯ ಜೀವನ. ಸುಖದಲ್ಲಿ ತೇಲಬೇಕೆನ್ನುವಷ್ಟರಲ್ಲಿ ದುರಂತಗಳು ಅಪ್ಪಳಿಸಿ ಬಾಳು ದುರಂತದಲ್ಲಿ ಮುಳುಗುತ್ತದೆ. ಆದರೂ ಅವುಗಳಿಗೆ ಎದೆಯೊಡ್ಡಿ ನಿಂತ ದಿಟ್ಟ ಹೆಣ್ಣು ಸಮಾಜದ ರೀತಿ ರಿವಾಜಿಗೆ ಹೆದರದೇ ಬದುಕಲು ಮುಂದಾಗುತ್ತಾಳೆ. ತನ್ನ ಮನಸ್ಸಿಗೆ ವಿರುದ್ಧವಾಗಿ ನಡೆಯದೇ ತನ್ನ ಬದುಕನ್ನು ತಾನೇ ರೂಪಿಸಿಕೊಳ್ಳುತ್ತಾಳೆ.

ಬುದ್ಧಿವಂತೆ ಚತುರೆಯಾದ ಸೋನಿಯು ತನ್ನ ಮೇಲೆ ಆಸೆಯಿಂದ ಬಂದ ಈಸೂರ ಗೌಡನಿಗೆ ಛೀಮಾರಿ ಹಾಕಿ, ಆತನ ತಂದೆಗೆ ಹೇಳಿರುವ ಮಾತುಗಳನ್ನು ಗಮನಿಸಲೇಬೇಕು. ಸೋನಿಯಲ್ಲಿದ್ದ ಈ ಧೈರ್ಯದಿಂದಾಗಿಯೇ ಗಂಡಸರು ಹೆದರಿ ದೂರವೇ ಉಳಿಯುತ್ತಾರೆ. "ಏಯ್ ಗೋಡ ಮುತ್ಯಾ .... ನಿನ್ ಮಗನಿಗೆ ಸಂಭಾಳಸ್ಗೊ........... ಪ್ಯಾಟಿ ಮ್ಯಾಲಿನ ಪೋರಿಗೋಳಿಗಿ ಕೆಣಕದ್ಹಾಂಗ ಇಲ್ಲಿ ಬಂದು

ನನಗೆ ಕೆಣಕದನಂದ್ರ ಇವನ ಬಾಯಾಗಿನ ಬತ್ತೀಸ ಹಲ್ಲ ಪೂರಾ ಉದರಿಸ್ತೀನಿನಾ. ಏನಂತ ತಿಳ್ಕೊಂಡೋ ನನಗ ಭಾಡೂ...... ನನಗ ಕುಬಸಾ ತಂದಾನಂದ ಇದೂ........ಮತ್ತ ನನಗೆ ಲಕ್ಕವ್ವನ ಗುಡಿಗಿ ಬಾ ಪ್ರೇಮ ಮಾಡಾಮು ಅಂತಾನ ಏಸ ಈಸೂರ್ಯಾ........ ಇದೇ ಕುಬಸಾ ನಿನ್ ತಂಗೀಗೆ ಕೊಟ್ಟು ಕರ್ಕೊಂಡು ಹೋಗು ಆಕಿಗೇ ಲಕ್ಕವ್ವನ ಗುಡೀಗಿ........ ಮಂದಿ ಹೆಂಗಸರಂದ್ರ ಪುಗಸಟ್ಟಿ ಬಿದ್ದಾರಾ ನಿನಗ? ಗೋಡನ ಮಗ ಆದ್ರ ನಿನ್ ಮನೀಗಿ ಆದಿ ನನಗೇನೋ ಚಪ್ಪಲಿ ನೀನೂ...... ಎನ್ನುತ್ತಲೇ ಕೈಯಲ್ಲಿಯ ರವಿಕೆ ಬಟ್ಟೆಯನ್ನು ಅವನ ಮಾರಿಯ ಮೇಲೆ ಎಸೆದಳು.[7] "ಇದು ಸೋನಿಯು ಗೌಡನನ್ನು ಪ್ರತಿಭಟಿಸಿ ಆಡಿರುವ ನುಡಿಗಳು. ಇಲ್ಲಿ ದಲಿತ ಹೆಣ್ಣು ತೋರಿರುವ ಧೈರ್ಯವನ್ನು ಮೆಚ್ಚಲೇಬೇಕು. ಹಿರಿಯ ಗೌಡನ ಮುಂದೆಯೇ ಮಗನಿಗೆ ಬೈದು ಆತನ ತಪ್ಪನ್ನು ತೋರಿಸಿ ಸಂಭಾಳಿಸಲು ಸಲಹೆ ಮಾಡಿರುವುದಲ್ಲದೇ ಹಲ್ಲು ಉದುರಿಸುವ ಎಚ್ಚರಿಕೆ ನೀಡಿದ್ದಾಳೆ. ಕೆಳವರ್ಗದ ಹೆಂಗಸರು ನಿಮ್ಮ ಅಕ್ಕ ತಂಗಿಯರಂತೆಯೇ ಎಂಬುದನ್ನು ಅವರಿಗೆ ಇಲ್ಲಿ ಮನಗಾಣಿಸಿದ್ದಾಳೆ. ಗೌಡನಾಗಿದ್ದರೂ ಆತ ಚಪ್ಪಲಿಗೆ ಸಮಾನವೆಂದು ದಿಟ್ಟತನದಿಂದ ನುಡಿದಿದ್ದಾಳೆ. ಇಷ್ಟು ಧೈರ್ಯವಂತ ದಲಿತ ಹೆಣ್ಣು ಇತರ ಯಾವ ಕಾದಂಬರಿಯಲ್ಲೂ ಚಿತ್ರಿತವಾಗಿಲ್ಲ. ಸೋನಿಯ ಈ ವರ್ತನೆಗೆ ಶಬ್ಬಾಶ್‌ಗಿರಿ ನೀಡುವವಳು ಮುದುಕಿ ಮುತ್ತಾವ್ವಾಯಿ.

ಕೋಳಿ ಮಾರಲು ಸಂತೆಗೆ ಹೋದಿದ್ದಾಗ ಗಿರಾಕಿಯೊಬ್ಬ ಸೋನಿಯನ್ನು ಕೆಟ್ಟದಾಗಿ ನೋಡಿ "ಈ ರಾತ್ರಿ ಬರ್ತಿಯೇನು ನಮ್ ಮನೀಗ? ಎಂದು ಕೇಳಿದಾಗ ಸೋನಿ ಆತನ ಕೆನ್ನೆಗೆ ಬಾರಿಸಿ ಆತನಾಡಿದ ಮಾತುಗಳಿಂದ ಕೋಪಗೊಂಡು ಬೈದು ಮರ್ಯಾದೆ ತೆಗೆಯುತ್ತಾಳೆ". "ಭ್ಯಾಡಕವು ನನ ಹಟ್ಯಾ.......... ನಾಲಿಗಿ ಬಿಗಿ ಹಿಡ್ದು ಮಾತಾಡೋ ಹಲಕಟ್. ಏನಂತ ತಿಳ್ಕೊಂಡಿದೋ ನನಗ, ನಿನ್ ಹೆಣಾ ಎತ್ಲಿ......... ನಿನ್ ನಾಲಿಗಿ ಸೀಳಿ ಸಾವಿರ ಹೋಳಾಗಲೀ..... ಹಳ್ಳಿ ಹೆಂಗಸ್ಸು ಕೋಳಿ ಮಾರ್ಲಿಕ್ಕ ಬಂದ್ರ ತಮ್ಮ ಮೈನೂ ಮರ್ತಾರಂತ ತಿಳ್ಕೋಡ್ರೇನೋ ಬೇಕೂಫ ನನ್ಮಕ್ಕೇ........ ಬರ್ರಿ ಒಬ್ಬೊಬ್ಬರು.......ನಿಮ್ ಕಾಲು ಮುರ್ದು ಕೈಯಾಗ ಕೊಟ್ಟು ಪೋಲಿಸ ಠಾಣ್ಯಾಕ ಎಳ್ಕೊಂಡೊಯ್ತೀನಿ, ಬರ್ರೋ......"[8] ಎಂದು ಆರ್ಭಟಿಸಿ ದುರ್ಗಿಯಂತೆ ನಿಲ್ಲುತ್ತಾಳೆ. ಸೋನಿಯ ಈ ಮಾತುಗಳಿಂದ ಹಳ್ಳಿಯ ಹೆಂಗಸರ ಬೈಗುಳದ ಪರಿಚಯವಾಗುವುದಲ್ಲದೆ ದಲಿತ ಹೆಣ್ಣು ಮಕ್ಕಳು ಎಚ್ಚೆತ್ತಿರುವ ಸ್ಥಿತಿಯನ್ನು ತಿಳಿಸುತ್ತದೆ. ಅವಿದ್ಯಾವಂತ ಮಂದಿಯಾದರೂ ಕಾನೂನುಗಳನ್ನು ತಿಳಿದಿರುವ ಬಗ್ಗೆ ಇಲ್ಲಿ ಪ್ರಸ್ತಾಪವಿದೆ. ಕಾನೂನು ತಮಗೆ ರಕ್ಷಣೆ ಒದಗಿಸುತ್ತದೆಂಬ ನಂಬಿಕೆಯೂ ಅವರಲ್ಲಿ ಮೂಡಿರುವಂತೆ ತೋರುತ್ತದೆ.

ತಾನು ಪ್ರೀತಿಸಿ ಮದುವೆಯಾಗಬೇಕೆಂದು ನಿಶ್ಚಯಿಸಿಕೊಂಡಿದ್ದ ಮಲ್ಲೇಶಿಯ ಸಾವಿನಿಂದ ಜರ್ಜರಿತಳಾದ ಸೋನಿಯು ತಾನು ಗರ್ಭಿಣಿ ಎಂದು ತಿಳಿದಾಗ ಬದುಕುವ ನಿರ್ಧಾರ ಮಾಡುತ್ತಾಳೆ ಹಾಗೂ ಮಲ್ಲೇಶಿಯೇ ತನ್ನ ಗರ್ಭದಲ್ಲಿ ಹುಟ್ಟಿ ಬರುತ್ತಾನೆಂದು ಗರ್ಭ ತೆಗೆಸದೇ ಸಾಕಿ ಬೆಳೆಸಲು

ನಿಶ್ಚಯಿಸುತ್ತಾಳೆ. ಅವಳನ್ನು ಮತ್ತು ಅವಳ ತಂದೆಯನ್ನು ಆ ಊರಿನಿಂದ ಬಹಿಷ್ಕರಿಸಿದರೂ ಸೋಣಿ ಕುಗ್ಗುವುದಿಲ್ಲ. ಸೀನಿಂಗನು ಈ ಅವಮಾನ ಸಹಿಸಲಾಗದೇ ನೇಣು ಬಿಗಿದುಕೊಂಡಾಗ ತಂದೆಯ ಸಾವಿಗೆ ಪಂಚರು ಕೊಟ್ಟ ತೀರ್ಪೇ ಕಾರಣವೆಂದು ಸಿಡಿದು ನಿಲುವುದಲ್ಲದೆ ಪೋಲಿಸರಿಗೆ ದೂರು ನೀಡಿ ಊರಿನ ಪಂಚರೆನಿಸಿಕೊಂಡ ದೊಡ್ಡ ಮಂದಿಯನ್ನು ಬಂಧಿಸುವಂತೆ ಮಾಡುತ್ತಾಳೆ. ಊರಿನ ಜನತೆಯು ಮೇಲ್ವರ್ಗದವರ ಆಜ್ಞೆಯಂತೆ ಈಕೆಗೆ ಅನ್ನ ನೀರು ನೀಡದೆ ಮಾತನಾಡದೆ ತಿರಸ್ಕರಿಸಿದ್ದಲ್ಲದೇ ಈಕೆಯ ಗುಡಿಸಲನ್ನೂ ಸುಟ್ಟು ಬೂದಿ ಮಾಡಿದಾಗ ಸೋಣಿ ಧೈರ್ಯಗೆಡುವುದಿಲ್ಲ. ಕಲ್ಬುರ್ಗಿಗೆ ಒಂದು ಮನೆ ಕಟ್ಟುವ ಕೆಲಸ ಹಿಡಿದು ಝೋಪಡಿಯೊಂದನ್ನು ಬಾಡಿಗೆಗೆ ಹಿಡಿದು, ಮಲ್ಲೇಶಿಯ ವಿಧವೆಯೆಂದೇ ಪರಿಚಲಿಸಿಕೊಂಡು ಒಂಟಿಯಾಗಿ ಬದುಕುತ್ತಾಳೆ. ಬಾಳಿನಲ್ಲಿ ಧುಮ್ಮಸಿನ ಬಿಗಿಯಾದ ಹೊಡೆತಗಳು ಬಿದ್ದು ಬಿದ್ದು ಬದುಕು ಗಟ್ಟಿಯಾದ ಅನುಭವ ಪಡೆಯುತ್ತಾಳೆ. ಮುದವೆಯಾಗದೇ ಗಂಡು ಮಗುವನ್ನು ಹೆತ್ತು ಸಾಕುವ ಈಕೆ ದಿಟ್ಟ ಮಹಿಳೆಯಾಗಿ ತೋರುತ್ತಾಳೆ. ಹಳ್ಳಿಯ ರೀತಿ ರಿವಾಜುಗಳಿಗೆ ಎದೆಯೊಡ್ಡದೇ ಸಿಡಿದು ನಿಂತ ತನ್ನ ಆಸೆಗಳನ್ನು ಸಾಕಾರಗೊಳಿಸಿಕೊಂಡ ಸೋಣಿ ಬುದ್ಧಿವಂತೆ, ಆಕೆಯಲ್ಲಿದ್ದ ಪ್ರತಿಭಟನಾ ಗುಣ, ವಿವೇಚನಾ ಶಕ್ತಿಗಳೇ ಆಕೆಯು ನಡೆಯಬೇಕಾದ ಹಾದಿಯನ್ನು ನಿರ್ದೇಶಿಸಿದೆ. ಗೀತಾ ನಾಗಭೂಷಣ ಅವರು ಸೋಣಿಯ ಪಾತ್ರವನ್ನು ವಿಶಿಷ್ಟವಾಗಿ ಚಿತ್ರಿಸಿದ್ದಾರೆ. ಅವರ ಕಥಾನಕಗಳಲ್ಲಿ ಈ ಹೆಣ್ಣಿನಷ್ಟು ಧೈರ್ಯಶಾಲಿಯೂ, ಬಂಡಾಯ ಪ್ರವೃತ್ತಿಯುಳ್ಳವರೂ ಮತ್ತೊಬ್ಬರಿಲ್ಲವೆಂದೇ ಹೇಳಬಹುದು.

ಹೀಗೆ ಗೀತಾ ನಾಗಭೂಷಣ ಅವರ ಬಹುಪಾಲು ಕಾದಂಬರಿಯಲ್ಲಿ ಸ್ತ್ರೀ ಕೇಂದ್ರಿತವಾಗಿದ್ದು, ಸ್ತ್ರೀಯರ ಬದುಕಿನ ಹಲವಾರು ಸಂವೇದನೆಗಳನ್ನು ಅವರು ಓದುಗರಿಗೆ ಕಟ್ಟಿಕೊಟ್ಟಿದ್ದಾರೆ. ಹಳ್ಳಿಯ ದಲಿತ ಹೆಣ್ಣು ಮಕ್ಕಳ ನೋವು ನಲಿವಿನ ಜೊತೆಗೆ ಝೋಪಡಿಗಳಲ್ಲಿ ವಾಸಿಸುವ ಹಾಗೂ ಪಟ್ಟಣದ ಕೊಳಗೇರಿಯಲ್ಲಿ ಬದುಕುವ ಸ್ತ್ರೀಯರ ಬವಣೆಗಳನ್ನು ಚಿತ್ರಿಸಿದ್ದಾರೆ. ಕೆಲವು ಸ್ತ್ರೀಯರು ತಮಗಾದ ಅನ್ಯಾಯ, ದೌರ್ಜನ್ಯಗಳಿಗೆ ಪ್ರತಿಕಾರ ತೀರಿಸಿಕೊಂಡರೆ ಮತ್ತೆ ಕೆಲವರು ಅದರಲ್ಲಿಯೇ ಸಾವನ್ನಪ್ಪುವ ಬಗೆಯನ್ನು ಲೇಖಕಿಯು ಚಿತ್ರಿಸಿದ್ದಾರೆ. ಲೇಖಕಿಯ ಒಲವು ಸದಾ ಸ್ತ್ರೀಪರವಾಗಿಯೇ ಇರುತ್ತದೆ. ಸ್ತ್ರೀವಾದಿ ನೆಲೆಗಳಲ್ಲಿ ನಿಂತು ಚಿಂತಿಸುವ ಲೇಖಕಿಯ ಸ್ತ್ರೀಪರವಾದ ಕಾಳಜಿಗಳನ್ನು ಮೆಚ್ಚಲೇಬೇಕು. ಸ್ತ್ರೀಯು ವಿವಿಧ ಹಂತಗಳಲ್ಲಿ ವಿವಿಧ ರೂಪಗಳಲ್ಲಿ ಶೋಷಣೆಗೀಡಾಗುತ್ತಿದ್ದಾಳೆ. ಶೋಷಿತ ಸ್ತ್ರೀಯ ಅಂತರಂಗದ ಮೌನಕ್ಕೆ ಲೇಖಕಿ ಮಾತಾಗುತ್ತಾರೆ. ಸ್ತ್ರೀಯರನ್ನು ಕಥಾ ಕೇಂದ್ರವಾಗಿಟ್ಟುಕೊಂಡು ಕಥಾ ಹಂದರವನ್ನು ಹೆಣೆಯುವ ಲೇಖಕಿ ಸ್ತ್ರೀಯರ ಮನಸ್ಸಿನ ಸೂಕ್ಷ್ಮತೆಯನ್ನು ಕಟ್ಟಿಕೊಡುವಲ್ಲಿ ಯಶಸ್ವಿಯಾಗಿದ್ದಾರೆ. ಲೇಖಕಿಗೆ ಎಲ್ಲ ಕಥೆಯಲ್ಲೂ ಸ್ತ್ರೀಯರನ್ನು ಬಂಡಾಯ ಗಾರ್ತಿಯರಾಗಿ ಚಿತ್ರಿಸಲು ಸಾಧ್ಯವಾಗಿಲ್ಲ. ದುರಂತಗಳ ಅರಿವು ಮೂಡಿಸಲು ಉದ್ದೇಶಪೂರ್ವಕವಾಗಿಯೂ ಲೇಖಕಿ ಸ್ತ್ರೀಯರನ್ನು ದುರಂತ ಕೂಪದಲ್ಲಿ ಮುಳುಗಿಸಿ ಚಿತ್ರಿಸಿದ್ದಾರೆ. ಇನ್ನು ಕೆಲವು ಬೆರಳಣಿಕೆಯಷ್ಟು ಕಾದಂಬರಿಗಳಲ್ಲಿ ಸ್ತ್ರೀಯರನ್ನು

ಅನ್ಯಾಯ ದೌರ್ಜನ್ಯ, ಶೋಷಣೆಗಳ ವಿರುದ್ಧ ಸಿಡಿದು ನಿಲ್ಲುವ ಬಂಡಾಯಗಾರ್ತಿಯರಾಗಿ ಚಿತ್ರಿಸಿದ್ದಾರೆ. ಲೇಖಕಿಯ ಒಲವು ದಲಿತ ಮತ್ತು ಕೊಳಗೇರಿಯ ಹೆಣ್ಣುಮಕ್ಕಳ ಬಗೆಗಿರುವುದು ಮೆಚ್ಚುಗೆಯ ಸಂಗತಿಯಾಗಿದೆ. ಸಮಾಜದಲ್ಲಿ ಹೆಣ್ಣಿನ ಮೇಲಾಗುತ್ತಿರುವ ಅತ್ಯಾಚಾರ, ದೌರ್ಜನ್ಯ ಹಾಗೂ ಶೋಷಣೆಯ ಪರಮಾವಧಿಯನ್ನು ಎಲ್ಲರ ಮನಮುಟ್ಟುವಂತೆ ಚಿತ್ರಿಸುವಲ್ಲಿ ಲೇಖಕಿ ಯಶಸ್ವಿಯಾಗಿದ್ದಾರೆ.

ಟಿಪ್ಪಣಿಗಳು :

೧. ಸಂ: ಡಾ. ಸರಸ್ವತಿ ಚಿಮ್ಮಲಗಿ, ಕಲ್ಬುರ್ಗಿಯ ಸ್ಪಂದನ, ಕನ್ನಡ ಸಾಹಿತ್ಯ ಅಕಾಡೆಮಿ ಬೆಂಗಳೂರು, ಮೊದಲ ಮುದ್ರಣ ೨೦೦೪, ಪುಟ ಸಂಖ್ಯೆ ೩೭

೨. ಗೀತಾ ನಾಗಭೂಷಣ, ಧುಮ್ಮಸು, ಮಹಿಳಾ ಸಾಹಿತ್ಯಿಕ ಪ್ರಕಾಶನ, ಹುಬ್ಬಳ್ಳಿ, ಮೊದಲ ಆವೃತ್ತಿ ೧೯೯೪, ಪುಟ ಸಂಖ್ಯೆ ೪೮

೩. ಅದೇ ಪುಟ ಸಂಖ್ಯೆ ೬೮

ಅಧ್ಯಾಯ-೫

'ಧುಮ್ಮಸು' ಕಾದಂಬರಿಯ ವೈಶಿಷ್ಟ್ಯಗಳು

ಅಧ್ಯಾಯ-೫

'ಧುಮ್ಮಸು' ಕಾದಂಬರಿಯ ವೈಶಿಷ್ಟ್ಯಗಳು

ಲೇಖಕಿ ಗೀತಾ ನಾಗಭೂಷಣ ಅವರು ಗ್ರಾಂಥಿಕ ಭಾಷೆ ಹಾಗೂ ಕಲ್ಬುರ್ಗಿಯ ಆಡುಭಾಷೆ ಎರಡರಲ್ಲಿಯೂ ಸಾಹಿತ್ಯ ಕೃಷಿಯನ್ನು ಮಾಡಿದ್ದಾರೆ. ಲೇಖಕಿ ಮೊದಲು ಗ್ರಾಂಥಿಕ ರೂಪದಲ್ಲಿಯೇ ಬರಹಕ್ಕೆ ತೊಡಗಿರುವಂತೆ ತೋರುತ್ತದೆ. ಜನಪದ ನಂಬಿಕೆಗಳು, ಆಚಾರ, ಸಂಪ್ರದಾಯಗಳು ವಿಶಿಷ್ಟವಾಗಿ ಚಿತ್ರಿಸಲ್ಪಟ್ಟಿವೆ.... ತಳಸಂಸ್ಕೃತಿಯ ಮೂಲಬೇರುಗಳನ್ನು ಭಾಷೆಯ ಮೂಲಕವೇ ಲೇಖಕಿ ಅನಾವರಣಗೊಳಿಸಿದ್ದಾರೆ. ಭಾಷೆಯ ಮೂಲಕ ದಲಿತ ಮತ್ತು ಕೆಳವರ್ಗದ ಜನರ ಬದುಕನ್ನು ಕಟ್ಟಿಕೊಟ್ಟಿದ್ದಾರೆ. ಕೆಳವರ್ಗದ ಜನರ ಜೀವನದ ರೀತಿನೀತಿಗಳು ಅವರ ಭಾಷೆಯಿಂದಲೇ ಅರಿವಾಗುತ್ತದೆ. ಆ ಜನರು ಜೀವನವನ್ನು ಬಗೆ, ಮಣ್ಣಿಗೆ ಹತ್ತಿರವಾದ ಬದುಕು, ಅವರು ವ್ಯವಹರಿಸುವ ರೀತಿ ಎಲ್ಲವೂ ಭಾಷೆಯಲ್ಲಿಯೇ ಅಭಿವ್ಯಕ್ತಗೊಂಡಿದೆ. 'ಧುಮ್ಮಸು' ಕಾದಂಬರಿಯಲ್ಲಿ ಲೇಖಕಿ ಪಾತ್ರ ಸೃಷ್ಟಿಯಲ್ಲಿ ಎಷ್ಟು ಲಕ್ಷ್ಯವಹಿಸಿದ್ದಾರೋ ಅಷ್ಟೇ ಗಮನವನ್ನು ಆಯಾ ಪಾತ್ರಗಳ ಮಾತುಗಳ ರಚನೆಯಲ್ಲಿಯೂ ನೀಡಿದ್ದಾರೆಂದು ಹೇಳಬಹುದು. ಭಾಷೆಯ ಬಳಕೆಯಲ್ಲಿ ಇದು ಉತ್ತಮ, ಇದು ನೀಚ ಎಂದು ಚಿಂತಿಸಲು ಸಾಧ್ಯವಿಲ್ಲ. ಅವರವರ ಬದುಕು ಮತ್ತು ಪರಿಸರ ಅವರ ಭಾಷೆಯನ್ನು ನಿರ್ಧರಿಸುತ್ತದೆ. ಕಳಗೇರಿ ಮತ್ತು ಕೊಳಗೇರಿ ಜನರ ಚಿತ್ರಣ ಮಾಡುವಾಗ ಶಿಷ್ಟಭಾಷೆ ಬಳಸಲು ಸಾಧ್ಯವಿಲ್ಲ. ಅಲ್ಲಿನ ಜನತೆಯ ಭಾಷೆಯ ಬಳಕೆಯೇ ಔಚಿತ್ಯಪೂರ್ಣ. ಅಂತಹ ಔಚಿತ್ಯವರಿತೇ. ಲೇಖಕಿ ಆಯಾ ಪಾತ್ರಗಳ ಮೂಲಕ ಆಯಾ ಪ್ರದೇಶದ ಸಂಸ್ಕೃತಿಯನ್ನು ಬಿಂಬಿಸುವ ಭಾಷಾ ಬಳಕೆಯನ್ನು ಮಾಡಿದ್ದಾರೆ. ಬೈಗುಳಗಳು ಪಾತ್ರಗಳ ಬಾಯಿಂದ ಸಹಜವಾಗಿ, ಲೀಲಾಜಾಲವಾಗಿ ಬಂದಿದ್ದು, ದಲಿತರ ಜೀವನದ ಬವಣೆಗಳನ್ನು ಹಾಗೂ ನೋವಿನ ಆಳವನ್ನು ಚಿತ್ರಿಸಲು ಸಾಧ್ಯವಾಗಿದೆ. ಮಡಿವಂತಿಕೆ ಎಂಬುದೇ ಇಲ್ಲಿಲ್ಲ. ಕೆಳಗೇರಿಯ ಜನರ ಭಾಷೆಯು ನಿತ್ಯಜೀವನದಲ್ಲಿ ಬೈಗುಳಗಳ ಸಮ್ಮಿಶ್ರಣದಿಂದಲೇ ಕೂಡಿರುತ್ತದೆ. ಇಲ್ಲಿ ಲೇಖಕಿ ತಮ್ಮ ಬರವಣಿಗೆಯಲ್ಲಿ ಯಥಾವತ್ತಾದ ಪ್ರಾದೇಶಿಕ ಆಡುನುಡಿಯನ್ನು ತಂದಿದ್ದಾರೆ. ಕೆಲವು ಶಬ್ದಗಳನ್ನು ವಿಮರ್ಶಕರು 'ಅಶ್ಲೀಲ' ಎಂದು ಮೂಗುಮುರಿದಿದ್ದಾರೆ. ಇದು ಸಹೃದಯತೆಯ ಲಕ್ಷಣವಲ್ಲ. ಹಸಿವು, ಕುಡಿತ, ಕಾಮ ಆ ಪ್ರದೇಶದ ಕೆಳವರ್ಗದ ಜನರಿಗೆ ಎಷ್ಟು ಸಹಜವೋ ಅಷ್ಟೇ ಸಹಜವಾದದ್ದು ಈ ರೀತಿಯ ಬಯಗುಳಗಳಿಂದ ಕೂಡಿದ ಭಾಷೆ. ಒಂದು ಪ್ರದೇಶದ ಜನರ ಸಂಸ್ಕೃತಿ, ಆಚಾರ, ವಿಚಾರಗಳ ವೈಶಿಷ್ಟ್ಯತೆಯನ್ನು ಒಪ್ಪುವಂತೆ ಅಲ್ಲಿನ ಭಾಷೆಯನ್ನೂ ನಾವು ಒಪ್ಪಲೇಬೇಕು. ಇದನ್ನು ಶೀಲ, ಅಶ್ಲೀಲ ಎಂದು ವರ್ಗೀಕರಿಸುವುದು ಸರಿಯಲ್ಲ.

೧. ಕಾದಂಬರಿಯಲ್ಲಿ ವರ್ಣನೆಗೆ ಬಳಸಿರುವ ಭಾಷೆ :

ಲೇಖಕಿ ಗೀತಾ ಅವರು 'ಧುಮ್ಮಸು' ಕಾದಂಬರಿಯ ಪ್ರಾರಂಭದಲ್ಲಿ ಪ್ರಕೃತಿಯ ವರ್ಣನೆಯನ್ನು ತರುತ್ತಾರೆ. ಇಲ್ಲಿ ಮುಂದಾಗುವ ಘಟನೆಗಳಿಗೆ ಸಂಬಂಧ ಕಲ್ಪಿಸುವಂತೆ ಭಾಷೆಯ ವಿವಿಧ ಪ್ರಯೋಗಗಳನ್ನು ಮಾಡಿದ್ದಾರೆ. ಒಂದು ಪರಿಸರವನ್ನೋ ಇಲ್ಲವೆ ಒಂದು ಘಟನೆಯನ್ನೋ ಅಥವಾ ಒಬ್ಬ ವ್ಯಕ್ತಿಯನ್ನೋ ವರ್ಣಿಸುವಾಗ ಬಳಸಿರುವ ಪದಪುಂಜಗಳು ಇವರ ಭಾಷಾ ಬಳಕೆಯ ಪ್ರೌಢಿಮೆಗೆ ಸಾಕ್ಷಿಯಾಗಿ ನಿಲ್ಲುತ್ತವೆ. ಪ್ರಕೃತಿ ವರ್ಣನೆಗಳಲ್ಲಿ ಇವರ ಸೂಕ್ಷ್ಮ ಸಂವೇದನೆ ಮತ್ತು ಬದುಕು ಪ್ರಕೃತಿಯೊಂದಿಗೆ ಬೆಸೆದುಕೊಂಡಿರುವ ವಿವಿಧ ಆಯಾಮಗಳ ಬಗ್ಗೆ ಅವರಿಗಿರುವ ಪ್ರಜ್ಞೆ ಗೋಚರವಾಗುತ್ತದೆ.

'ಧುಮ್ಮಸು' ಕಾದಂಬರಿಯಲ್ಲಿ ದುರ್ಗಿಹಳ್ಳಿಯ ಗುಡಿಸಲುಗಳ ಚಿತ್ರಣವನ್ನು ನೀಡುವಾಗ ಬರುವ ವರ್ಣನೆಯು ಲೇಖಕಿ ಗುಡಿಸಲುಗೇರಿಯ ಜನರ ಬಗ್ಗೆ ಹೊಂದಿರುವ ಕಾಳಜಿಯನ್ನು ಸ್ಪಷ್ಟಪಡಿಸುತ್ತದೆ. "ದುರ್ಗಿ ಹಳ್ಳಿಯ ಗುಡಿಸಲುಗಳೆಲ್ಲ ಕಪ್ಪಿನಲ್ಲಿ ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿದ್ದವು. ಅವುಗಳ ಮೈಯ ಸೀಳುಗಳಿಂದ ಹರಿದು ಬರುವ ಸೀಮೆಯೆಣ್ಣೆಯ ತಗಡಿನ ಚಿಮಣಿಗಳ ರೋಗಗ್ರಸ್ತ ಬೆಳಕು ಮಾತ್ರ ಅಲ್ಲಿಯ ಜನವಸತಿಗೆ ಸಾಕ್ಷಿಯಾಗಿತ್ತು."[೧] ಬಡಜನತೆಯ ಸ್ಥಿತಿಗತಿಯ ಚಿತ್ರಣವನ್ನು ಕೂಡ ಈ ವರ್ಣನೆ ಕಟ್ಟಿಕೊಡುತ್ತದೆ. ಲೇಖಕಿಯ ವರ್ಣನೆಗಳು ಸಾಂದರ್ಭಿಕವಾದ ಧ್ವನಿಪೂರ್ಣತೆಯನ್ನು ಹೊಂದಿರುತ್ತವೆ. ವರ್ಣನೆಗಳು ಶುಷ್ಕವಾಗಿ ಬರುವುದಿಲ್ಲ. ಬದಲಾಗಿ ಜನಜೀವನದ ಬೇರುಗಳಿಗೆ ಹೊಂದಿಕೊಂಡಂತೆಯೇ ಬರುತ್ತವೆ. ಇದಕ್ಕೆ ನಿದರ್ಶನವಾಗಿ ಅನೇಕ ಕಥೆಗಳಲ್ಲಿ ಬರುವ ವರ್ಣನಾ ಭಾಗಗಳನ್ನು ನೋಡಬಹುದು. 'ದಾಳ' ಕಥೆಯಲ್ಲಿ "ಆಗಸದ ಕತ್ತಲೆಯ ಕೌದಿಗೆ ಬಾಯಿ ಹಾಕಿ ತೂತು ಕೊರೆಯುವ ತಮ್ಮ ಹುನ್ನಾರವನ್ನು ಚಿಕ್ಕಿಗಳು ಚಾಲೂ ಇಟ್ಟವು. ಮನುಷ್ಯರ ಬದುಕಿನ ಆಗು ಹೋಗುಗಳ ಪರಿವಿಲ್ಲದೆ, ಅವರ ನೋವು ನಲಿವುಗಳಿಗೆ ಸೊಪ್ಪುಹಾಕದೆ, ಅವರ ಹಿಗ್ಗು ಜಗ್ಗುಗಳಿಗೆ ಕ್ಯಾರೆ ಅನ್ನದೆ ಸಮಯ ತನ್ನಷ್ಟಕ್ಕೆ ತಾನು ತನ್ನದೇ ಎಂದಿನ ಗತಿಯಲ್ಲಿ ಮುಂದೆ ಸರಿಯುತ್ತಲೇ ಇತ್ತು"[೨]. ಕಾಲವು ಎಲ್ಲವನ್ನೂ ತನ್ನಲ್ಲಿ ಅಡಗಿಸಿಕೊಳ್ಳುತ್ತಾ ಮುಂದುವರಿಯುವ ಬಗೆ ಹಾಗೂ ಬಡವರ ಜೀವನದ ಅಭದ್ರತೆಯ ಬಗ್ಗೆ ಇಲ್ಲಿ ಲೇಖಕಿ ವಿವರಿಸಿದ್ದಾರೆ. ಲೇಖಕಿ ವರ್ಣನೆಗೆ ಬಳಸಿರುವ ಭಾಷೆಯು ಜೀವಂತ ಪರಿಸರದ ಎಲ್ಲ ನಮೂನೆಗಳನ್ನು ತಿಳಿಸುವಲ್ಲಿ ಸಫಲವಾಗಿದೆ. ಇದೇ ರೀತಿಯಲ್ಲಿ ಚಿತ್ರಣಗೊಂಡಿರುವ ಸಮಯದ ವರ್ಣನೆಯನ್ನು 'ಹುಲಿಗ್ಯಾ' ಕಥೆಯಲ್ಲಿಯೂ ಕಾಣಬಹುದಾಗಿದೆ. "ಬಂಡಿಗಾಲಿ ಉಳ್ಳಿದ್ಹಂಗ ಸಮಯ ಗಾಲಿ ಉಳ್ಳುತ್ತಿತ್ತು. ಆಕಾಸಂಬೋ ಅರಮನಿ ಮುಂದ ಸೂರ್ಯ, ಚಂದ್ರಾಮ ಸರದಿ ಪರಕಾರ ಗಸ್ತು ತಿರುಗುತ್ತಿದ್ದರು.

ಚಿಕ್ಕಿಗೊಳು ಪಟ್ಟಂತ ಹುಟ್ಟಿ ಪಟ್ಟಂತ ಸಾಯ್ತಿದ್ದುವು. ಸಾಯಿಲಾರ್ದೆ ಬದುಕಿದ್ದೋವು ಆ ಕತ್ತಲದಾಗ ಬೆಳಕು ಕಾಲಿಕೊಳ್ಳುತ್ತ ಮೈಹೊಳ್ಯಾಡಿಸುತ್ತಿದ್ದವು."[೩] ಈ ರೀತಿಯ ವರ್ಣನೆಯ ಮೂಲಕವೇ ಕೆಳವರ್ಗದ ಜನರ ಬದುಕು ಬದಲಾವಣೆಗಳಿಲ್ಲದೆ ಶೋಷಣೆಯ ಪರಿಧಿಯಲ್ಲಿ ನಡೆಯುತ್ತಿತ್ತೆಂದು ತಿಳಿಸಿದ್ದಾರೆ. ಸಮಯವು ಉರುಳಿ ಹುಟ್ಟು ಸಾವುಗಳು ಬಂದು ಹೋದರೂ ಶೋಷಣೆಗೆ ಕೊನೆ ಬರಲಿಲ್ಲ ಎಂಬ ಧ್ವನಿ ಪೂರ್ಣತೆಯನ್ನು ಈ ಚಿತ್ರಣದಲ್ಲಿ ಕಾಣಬಹುದು.

೨. ಸರಳ, ಸುಲಲಿತ, ಪ್ರೌಢಗದ್ಯ :

ಗೀತಾ ಅವರು ತಮ್ಮ 'ಧುಮ್ಮಸು' ಕಾದಂಬರಿಯಲ್ಲಿ ಸರಳವಾಗಿಯೇ ನಿರೂಪಿತಗೊಂಡಿವೆ. ಇವರು ಆಕರ್ಷಕವಾದ ರೀತಿಯಲ್ಲಿ ಕಥೆಯನ್ನು ಸುಲಲಿತವಾಗಿಯೇ ಹೇಳಿದ್ದಾರೆ. ಇವರ ಬರವಣಿಗೆಯಲ್ಲಿ ಪ್ರೌಢ ಶೈಲಿಯ ಗದ್ಯಗಳನ್ನು ಕಾಣಬಹುದು. ಅನೇಕ ವಿಚಾರಗಳನ್ನು ಕೆಲವೇ ಸಾಲುಗಳಲ್ಲಿ ಪರಿಣಾಮಕಾರಿಯಾಗಿಯೇ ಕಟ್ಟಿಕೊಡುವ ಇವರ ನಿರೂಪಣಾ ಶೈಲಿ ಸರಳ, ಸುಂದರವೆಂದು ಹೇಳಬಹುದು. ಅನ್ಯಭಾಷಾ ಪದಗಳು ಬಂದಾಗಲೂ ಭಾಷೆಗೆ ಕ್ಲಿಷ್ಟತೆಯೇನೂ ಪ್ರಾಪ್ತವಾಗಿಲ್ಲ. ಇವರ ಇತ್ತೀಚಿನ ಕೃತಿಗಳ ನಿರೂಪಣಾ ಶೈಲಿ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದ್ದು, ಗದ್ಯ ಶೈಲಿಯ ಉತ್ಕೃಷ್ಟ ರಚನೆಗಳೆನಿಸಿವೆ. ಲೇಖಕಿ ಕಾದಂಬರಿಯಲ್ಲಿ ತಂದಿರುವ ಗದ್ಯ ಶೈಲಿಯ ಪ್ರೌಢಿಮೆಯನ್ನು ಕೆಲವು ನಿದರ್ಶನಗಳಿಂದ ತಿಳಿಯಬಹುದಾಗಿದೆ.

'ಧುಮ್ಮಸು' ಕಾದಂಬರಿಯಲ್ಲಿ ಮೋಟಾರು ಚಾಲಕನಿಗೆ ಹೆಂಡವನ್ನು ನೀಡುವ ತಳವಾರನ ಮಾತುಗಳು ಆತನ ವ್ಯಾಪಾರ ವೈಖರಿಯನ್ನು ತೋರಿಸುತ್ತವೆ. ಈ ಸನ್ನಿವೇಶ ಲೇಖಕಿಯ ಸೂಕ್ಷ್ಮಪ್ರಜ್ಞೆಗೆ ಸಾಕ್ಷಿಯಾಗಿ ನಿಲ್ಲುತ್ತದೆ. "ಏನು ಧ್ಯಾನಸಲಕ್ಹತ್ತೀರಿ ಸಾಬ್ರೇ...... ಕುಡಿರೆಲ್ಲ .... ಫರಮಾಯಿಸಿ ಮೂಲ ಅದಾ .... ಕಲ್ಲ ಸಕ್ಕರಿ, ಯಾಲಕ್ಕಿ ಹಾಕಿ ಪೆಶೆಲ ಆಗಿ ಗೊಜ್ಜಿ ಕಟ್ಟಿಸಿದ್ದದರಿ.........ಒಂದೇ ಗಿಲಾಸಿನ್ಯಾಗ ತೇಲಿಗಿ ಧೀರ ಅಂತ ನಿಶಾ ಏರ್ತದ ಇದರವ್ವನಾ ಒಯ್ದು........"[೩] ಲೇಖಕಿ ಹೆಂಡ ಮಾರುವ ವ್ಯಾಪಾರಿಗಳ ಸ್ವಭಾವವನ್ನು ಇಲ್ಲಿ ಚಿತ್ರಿಸಿದ್ದಾರೆ. ಇದೇ ಕಾದಂಬರಿಯಲ್ಲಿ ಲೇಖಕಿ ಮೇಲ್ವರ್ಗ ಮತ್ತು ಕೆಳವರ್ಗ ಎರಡೂ ಕಡೆಯಲ್ಲೂ ಜನರು ಹೆಂಡ, ಹೆಣ್ಣು ಹಾದರಕ್ಕೆ ಹಾತೊರೆಯುವುದನ್ನು ಹಾಗೂ ಇವರಿಬ್ಬರ ನಡುವಿನ ವ್ಯತ್ಯಾಸಗಳನ್ನು ತಿಳಿಸಲು ತಂದಿರುವ ಗದ್ಯವು ಪ್ರೌಢ ಶೈಲಿಗೆ ಮತ್ತೊಂದು ನಿದರ್ಶನವೆನ್ನಬಹುದು. "ಸರಿರಾತ್ರಿಯವರೆಗೂ ಪಾರ್ಟಿ ಮಾಡಿ ಅಲ್ಲೇ ಕರೆಸಿದ ಜೋಗಿಣಿ, ಚಿಮುಣಾ, ಸಾನಿಯರೊಂಗಿಗೆ ಮೈಗೆ ಮೈ ತಳಕುಹಾಕಿಕೊಂಡು ಬನದೊಳಗೆ ಎಲ್ಲೆಂದರಲ್ಲಿ ಬಿದ್ದು ಉಬ್ಬುಸಪಡುತ್ತ ಹೊರಳಾಡುವ ಈ 'ದೊಡ್ಡವರ' ಸಣ್ಣತನ ಗೊತ್ತಿದ್ದೂ ಕೆಳಗೇರಿಯ ಗುಡಿಸಲು ವಾಸಿಗಳು ಗಪ್‌ಚಿಪ್. ಆದರೆ ಕೆಳಗೇರಿಯ ಹಲವು ಹದಿನೆಂಟು ಕೆಳಜಾತಿಯ ಮಂದಿ ಮಾತ್ರ ತಿನ್ನೋದು, ಕುಡಿಯೋದು, ಹಾದರ ಕಳವು ಎಲ್ಲವನ್ನು

ಖುಲ್ಲಾಮ್ ಖುಲ್ಲಾ ಮಾಡುವ ಎದೆಗಾರಿಕೆಯುಳ್ಳವರು. ಎಲ್ಲದಕ್ಕೂ ಹಿಂದೆ ಮುಂದೆ ನೋಡುತ್ತಾ ಅಂಜಿ ಅಂಜಿ ದಿನಕ್ಕೆ ಹತ್ತು ಸಲ ಸಾಯುವುದು ಇವಳಿಗೆ ಗೊತ್ತಿಲ್ಲ."[೪] "ಲೇಖಕಿಯು ಇಲ್ಲಿ ನೀಡಿರುವ ವಿವರಗಳಿಂದ ಮೇಲ್ವರ್ಗ ಕೆಳವರ್ಗದ ಜನರ ಸ್ವಭಾವದಲ್ಲಿರುವ ಸಾದೃಶ್ಯ ವೈದೃಶ್ಯಗಳನ್ನು ತಿಳಿಯಬಹುದಾಗಿದೆ.

೩. ಆಡುಮಾತಿನ ಬೈಗುಳಗಳ ಮಾದರಿ :

ಕಲ್ಬುರ್ಗಿ ಪ್ರದೇಶದ ಆಡುಭಾಷೆಯಲ್ಲಿ ಸಹಜವಾಗಿಯೇ ಬೈಗುಳಗಳು ಪ್ರಯೋಗಗೊಳ್ಳುತ್ತವೆ. ಕೊಳಗೇರಿ ಮತ್ತು ಹಳ್ಳಿಯ ಕೆಳಗೇರಿಯ ಜನರ ಜೀವನವನ್ನು ಚಿತ್ರಿಸುವಾಗ ಅವರ ಭಾಷೆಯನ್ನು ಬಿಟ್ಟು ಶಿಷ್ಟ ಭಾಷೆಯನ್ನು ಬಳಸಿದ್ದರೆ ಅದು ಕೃತಕತೆಗೆ ದಾರಿಯಾಗುತ್ತಿತ್ತು. ಆಯಾ ಜನರ ಭಾಷೆಯನ್ನೇ ಲೇಖಕಿ ಕೃತಿಗಳಲ್ಲಿ ಬಳಸಿರುವುದು ಔಚಿತ್ಯ ಪೂರ್ಣವಾಗಿದ್ದು, ಅವರ ಸ್ಥಿತಿಗತಿಗಳ ಚಿತ್ರಣಕ್ಕೆ ಪೂರಕವಾಗಿದೆ. ಇವರ ಕಾದಂಬರಿಯಲ್ಲಿ ಪ್ರಯೋಗಗೊಂಡಿರುವ ಬೈಗುಳಗಳನ್ನು ಅನೇಕ ನಿದರ್ಶನಗಳಿಂದ ಗಮನಿಸಬಹುದು.

'ಧುಮ್ಮಸು' ಕಾದಂಬರಿಯಲ್ಲಿ ಲೇಖಕಿ ವಿಭಿನ್ನವಾದ ಬೈಗುಳಗಳನ್ನು ತಂದಿದ್ದಾರೆ. ಮುದುಕಿ ಮತ್ತು ಹರೆಯದ ಯುವತಿಯ ನಡುವಿನ ಸಂಭಾಷಣೆಯಲ್ಲಿ ಬಂದಿರುವ ಬೈಗುಳಗಳು ಹೀಗಿವೆ.

"ಈ ಮುದುಕಿ ಕಣ್ಣಾಗ ಮಣ್ಣು ಹಾಕ್ಲೀ....... ಏನರೆ ಮಾಡದ್ರ ಸಾಕು ಇಕಿಗೆ ಹೇಳ್ಬೇಕು, ಇದರ ನಾಲಿಗಿ ಸೀಳಬೀಳ್ಲಿ......" ಎಂದು ಹರೆಯದ ಯುವತಿ ಸಿಡುಕುತ್ತಾಳೆ. ಇದನ್ನು ಕೇಳಿಸಿಕೊಂಡ ಮುದುಕಿ "ಹಂಗ್ಯಾಕ ಕವಕ್ಕಂತ ಬೆದಿಗೆ ಬಂದ ಕೋಳಿಹಂಗ ಸಬಕ್ಕನೆ ಸಿಡಿತೆ ಮಿಂಡ್ರಿ. ಏನೋ ತೊಳಿಲಿಕ್ಹತ್ತಿದ್ದೆಂತ ಕೇಳದ್ರ ಏನಾಯ್ತು ನಿನಗ.......... ಬಲ್ಲಿ ಸೀನಿಂಗ ಮಾಡಸ್ತೀನಿ ನಿನಗ...... ಬಿಲಾಲಿಯಿದ್ಯಾಕಲೀಲಕ್ಹತ್ತಿದ್ದೇನೆ........"[೫] ಎಂದು ಬೈಯುತ್ತಾಳೆ. ಇವರಿಬ್ಬರ ನಡುವಿರುವ ಸಲುಗೆಯನ್ನು, ಪ್ರೀತಿಯನ್ನು ಈ ಸಂಭಾಷಣೆ ತೋರಿಸುತ್ತದೆ. ಕೆಳವರ್ಗದ ಜನರು ಆಡುವ ಭಾಷೆಯಲ್ಲಿ ಸಹಜವಾಗಿಯೇ ಬೈಗುಳಗಳು ಬೆರೆತು ಬರುತ್ತವೆಂಬುದನ್ನು ಇಲ್ಲಿ ತಿಳಿಯಬಹುದು. ಇದೇ ಕಾದಂಬರಿಯಲ್ಲಿ ಮುದುಕಿ ಮುತ್ತವ್ವಾಯಿ ಸೋನಿಯ ವಿಷಯವನ್ನೇ ನಗೆಪಾಟಲು ಮಾಡಿಕೊಂಡಿದ್ದ ಹೆಂಗಸರಿಗೆ ಬೈಯುವುದನ್ನು ನೋಡಬಹುದು. "ಏನು ಮಾತಂತ ಆಡ್ತೀರೇ ಸೂಳ್ಯಾರೇ.......... ಮದಿಗಟ್ಯಾಗಿತ್ತು ಅವರ್ದು. ಏನೋ ಹರೇದ ಪಾರುಗೋಳು ಹ್ಯಾಂಗಿದ್ರೂ ಮದಿ ಆಗಿ ಗಂಡ ಹೆಣ್ತಿ ಆಗವ್ರಿದ್ದೀವಲಾ ಅಂತ ಯಾವಗರೆ ಹೆಜ್ಜೆ ತಪ್ಪಿ ನಡದಿರಬೇಕು. ಅದಕ್ಕೇನಾಯ್ತೀಗ? ಈ ಹಳ್ಯಾಗ ಹೆಂತೆಂತಾ ಗುಂಡುಳ್ಳ ಬಾಲೆರೇ ಗಂಡಗ ಬಿಟ್ಟು ಮಿಂಡಗ ಇಟಿಗೊಂಡು ಬಸರಾಗಿ ಹಡ್ದು ಸಂಸಾರ ಮಾಡಾದು ನನಗೇನು ಗೊತ್ತಿಲ್ಲಂತ ಮಾಡೀರೇನು? ನಿಮ್ಮೆಲ್ಲೋರ್ದೂ ಹೂರಣ ನನ ಬಲ್ಲಿ ಅದಾ ....

ಸುಮ್ಮನಾರ್ರೀ, ಹೆಣಮಕ್ಕಳ ಬಾಳ್ಯಾ ಅಂದ್ರ ಎಲ್ಲೋರ್ದೂ ಒಂದೇ ಎಲ್ಲೋರ ಮನಿದ್ವಾಸಿನೂ ತೂತೇ ಯಾರ ಮನ್ಯಾಗ ಹಾದರ ಇಲ್ಲಂತ ಹೇಳ್ತೀರಿ ನೀವು? ಒಬ್ಬರ ಕದ್ದು ಮುಚ್ಚಿ ಮಾಡ್ಡರ ಇನ್ನೊಬ್ರದು ಖುಲ್ಲಾಮ ಖುಲ್ಲಾ ಗುಲ್ಲಾಗ್ತದ. ಆಟೇಫರಾಕ, ನೀವೆಲ್ಲೋರು ಏನು ಅಚ್ಚ ಪತಿವರತೇರು ಇದ್ದಿರೇನ್ರೇ ಗರತಿ ಗಂಗಮ್ಮನ ಹಾಂಗ? ಸುಮ್ನ ಬಾಯಿ ಮುಚಗೊಂಡು ನಿಮ್ ಕೆಲ್ಸಾ ಮಾಡ್ರೀ .... ಬಂದು ಬಿಟ್ರು ಇಲ್ಲಿ ಹರ್‍ಯಾದಾಗ ಹಾದರ ಮಾಡಿ ಮುಪ್ಪಿನಾಗ ಆಚಾರ ಮಾಡಾಕ .... ಹೋಗ್ರಿ.......... ಹೋಗ್ರಿ" ಈ ಮಾತುಗಳಿಂದ ದಲಿತ ಸ್ತ್ರೀಯರ ಬದುಕಿನ ವ್ಯಥೆಯನ್ನು ಅರಿಯಬಹುದು. ಇಲ್ಲಿ ಬಳಸಿರುವ ಬೈಗುಳಗಳು ಮುದುಕಿಯ ಅನುಭವದೊಂದಿಗೆ ಬಂದಿವೆ. ಅನೇಕ ವರ್ಷಗಳಿಂದ ತಮ್ಮವರ ಸ್ಥಿತಿಗೆ ಮರುಗುತ್ತಲೇ ಬಂದಿರುವ ಈ ಮುದುಕಿಯ ಮಾತುಗಳು ವಾಸ್ತವ ಸತ್ಯ ಸಂಗತಿಗಳಾಗಿವೆ. ತಮ್ಮ ಅನಾಚಾರ ಮರೆತು ಬೇರೆಯವರ ಬಗ್ಗೆ ಮಾತನಾಡುವ ಮಂದಿಗೆ ನಯವಾದ ಬೈಗುಳಗಳನ್ನಾಡಿಯೇ ಮುದುಕಿ ಎಲ್ಲರ ಬಾಯಿ ಮುಚ್ಚಿಸಿ ಬಿಡುತ್ತಾಳೆ. ಇದೇ ಸಂದರ್ಭದಲ್ಲಿ ಬಂದಿರುವ ಬೈಗುಳದ ಮತ್ತೊಂದು ಸಂಭಾಷಣೆಯನ್ನು ನೋಡಬಹುದು. ದುರಂತಗಳಿಗೆ ಒಳಗಾದ ಸೋನಿಯು ತಂದೆಯ ಸಾವಿಗೆ ಕಾರಣವಾದ ಊರಿನ ಪಂಚರನ್ನು ಪ್ರತಿಭಟಿಸಿ ನಿಂತಾಗ ಅಲ್ಲಿ ಬಳಕೆಯಾಗಿರುವ ಬೈಗುಳಗಳು ಹೀಗಿವೆ. "ಬಾಯಿ ಮುಚ್ಕೊಂಡಿರಲೇ ಭೋಸಡಿ, ನಾಲ್ಗಿ ಕತ್ತರ್ಸಿ ಬಿಟ್ಟೇನು......." ಎನ್ನುವ ಪೋಲಿಸ ಪಾಟೀಲನಿಗೆ ಸೋನಿಯು "ಥೂ ನಿನ್ ಜೀಲ್ಯಾ....... ಆಳುಗೋಳಿಂದ ನನಗೆ ಒತ್ತಿ ಹಿಡ್ಸಿ ಹೊಡೀತೇನೋ........... ನನ್ ಕೈ ಬಿಡ್ಸಿ ಹೊಡಿಯೋ ಮಗನೇ. ಆವಾಗ ನಿನಗ ಭಾದ್ದೂರ ಗಂಡಸ ಅಂತೀನಿ. ಥೂ ನಿನ್ನ......... ನಿನ್ನ ಗಂಡಸ್ತನಕ್ಕೆ ಬೆಂಕಿ ಹಾಕಾ.........."[೬] ಎಂದು ಉಗುಳುತ್ತಾಳೆ. ಲೇಖಕಿ ಆಡುಭಾಷೆಯಲ್ಲಿ ಬಳಕೆಯಾಗುವ ಬೈಗುಳಗಳ ಯಥಾವತ್ ಚಿತ್ರಣವನ್ನು ಇಲ್ಲಿ ನೀಡಿದ್ದಾರೆ.

ಟಿಪ್ಪಣಿಗಳು :

೧. ಗೀತಾ ನಾಗಭೂಷಣ, ಧುಮ್ಮಸು, ಮಹಿಳಾ ಸಾಹಿತ್ಯಿಕ ಪ್ರಕಾಶನ, ಹುಬ್ಬಳ್ಳಿ, ಮೊದಲ ಆವೃತ್ತಿ-೧೯೯೪, ಪುಟ ಸಂಖ್ಯೆ ೬
೨. ಗೀತಾ ನಾಗಭೂಷಣ, ಕ್ಯಾದಿಗಿ ಬನದಾಗ ಕತೆಯಾಗಿ ನಿಂತವರು, ಸಿ.ವಿಜಿ. ಪಬ್ಲಿಕೇಷನ್, ಬೆಂಗಳೂರು, ಮೊದಲ ಮುದ್ರಣ – ೨೦೦೬, ಪುಟ ಸಂಖ್ಯೆ ೧೭
೩. ಅದೇ ಪುಟ ಸಂಖ್ಯೆ ೨೬
೪. ಗೀತಾ ನಾಗಭೂಷಣ, ಧುಮ್ಮಸು, ಮಹಿಳಾ ಸಾಹಿತ್ಯಿಕ ಪ್ರಕಾಶನ ಹುಬ್ಬಳ್ಳಿ, ಮೊದಲ ಆವೃತ್ತಿ -೧೯೯೪, ಪುಟ ಸಂಖ್ಯೆ ೬೫
೫. ಅದೇ ಪುಟ ಸಂಖ್ಯೆ ೧೬೯

ಅಧ್ಯಾಯ-೬

ಸಮಾರೋಪ

ಅಧ್ಯಾಯ-೬

ಸಮಾರೋಪ

ಕನ್ನಡ ಕಥನ ಸಾಹಿತ್ಯಕ್ಕೆ ಗೀತಾ ನಾಗಭೂಷಣ ಅವರ ಕೊಡುಗೆ ಅನನ್ಯವಾದುದು. ಅವರ ಬರವಣಿಗೆಗಳು ಕನ್ನಡ ಸಾಹಿತ್ಯದ ವಿಸ್ತಾರವನ್ನು ಹೆಚ್ಚಿಸಿದೆ. ಸಾಹಿತ್ಯದಲ್ಲಿ ಇದುವರೆಗೆ ದಾಖಲಾಗದೇ ಹೋಗಿರುವ, ಸಮಾಜದ ಅಂಚಿನಲ್ಲಿರುವ, ದಮನಕ್ಕೆ ಒಳಗಾದವರ ಬದುಕನ್ನು ಅವರು ತಮ್ಮ ಕೃತಿಗಳಲ್ಲಿ ತೆರೆದಿಟ್ಟಿದ್ದಾರೆ. ಝೋಪಡಪಟ್ಟಿ ಜನರ ಬದುಕಿನ ಸಂಕೀರ್ಣ ಅನುಭವಗಳು ಗೀತಾ ಅವರ ಲೇಖನಿಯಲ್ಲಿ ಸೃಜನಶೀಲ ಅಭಿವ್ಯಕ್ತಿಯಾಗಿ ಪ್ರಕಟಗೊಂಡಿವೆ. ಈ ಸಾಹಿತ್ಯದ ಅನುಭವ ಕಟ್ಟಿಕೊಡುವ ಸೈದ್ಧಾಂತಿಕ ತಾತ್ವಿಕತೆ ದಲಿತ ಚಳವಳಿಗೆ ಮಾರ್ಗದರ್ಶಕವಾಗಬಲ್ಲುದೇ ಎಂಬುದು ಇನ್ನೂ ಹೆಚ್ಚಿನ ಚರ್ಚೆಗೊಳಗಾಗಬೇಕಾದ ವಿಷಯವಾಗಿದೆ.

ಕನ್ನಡದ ಕಥನ ಸಾಹಿತ್ಯವು ಈಗಾಗಲೇ ಸೃಷ್ಟಿಸಿರುವ ಪಾತ್ರಗಳಿಗಿಂತಲೂ ಭಿನ್ನವಾದ ಮಾದರಿಗಳನ್ನು ತಮ್ಮ ಸಾಹಿತ್ಯ ಕೃತಿಗಳಲ್ಲಿ ನೀಡಿರುವ ಗೀತಾ ಅವರ ಒಟ್ಟು ಬರವಣಿಗೆ ಚಾರಿತ್ರಿಕವಾಗಿ ಮತ್ತು ಸಾಹಿತ್ಯಿಕವಾಗಿ ಮಹತ್ವದ್ದು. ಕನ್ನಡ ಕಲಿಕೆಯೇ ದುರ್ಭರವಾಗಿದ್ದ ನಿಜಾಮರ ಆಳ್ವಿಕೆಯ ಪ್ರಾಂತ್ಯದಿಂದ ಬಂದ ಲೇಖಕಿ ಇವರಾಗಿದ್ದಾರೆ. ಅಕ್ಷರ ಜ್ಞಾನವಿರದ, ಪ್ರತಿದಿನದ ಕೂಳನ್ನು ದುಡಿದೇ ತಿನ್ನಬೇಕಾದ ಕುಟುಂಬಗಳು, ಅವರನ್ನು ಆವರಿಸಿರುವ ಮೂಢನಂಬಿಕೆ ಮತ್ತು ಅವರ ಅಜ್ಞಾನವನ್ನು ಲಾಭ ಮಾಡಿಕೊಂಡು ಅವರನ್ನು ಶೋಷಿಸುವ ವರ್ಗ, ಜಾತಿಗಳು ಒಟ್ಟಾರೆಯಾಗಿ ಶ್ರೇಣಿಕೃತ ಸಮಾಜದಲ್ಲಿ ಅತ್ಯಂತ ಅಂಚಿನಲ್ಲಿ ನೂಕಲ್ಪಟ್ಟ ಜನಸಮುದಾಯದ ಬದುಕನ್ನು, ತಮ್ಮದೇ ಭಾಷೆಯಲ್ಲಿ, ಸೃಜನಶೀಲ ನೆಲೆಯಲ್ಲಿ ಗೀತಾ ಅವರು ಅಭಿವ್ಯಕ್ತಿಸಿರುವುದು ಅವರಿಗೆ ಸಾಹಿತ್ಯಲೋಕದಲ್ಲಿ ಒಂದು ವಿಶಿಷ್ಟ ಸ್ಥಾನವನ್ನು ದೊರಕಿಸಿಕೊಟ್ಟಿದೆ. ಡಾ॥ ಎಚ್.ಎಸ್. ರಾಘವೇಂದ್ರರಾವ್ ಅವರು ಹೇಳುವಂತೆ, "ಅವರ ಬಳಿ ಇದ್ದ 'ಕಚ್ಚಾಮಾಲು' ಮೀಸಲು ಮುರಿಯದ ಅನುಭವ ಪ್ರಪಂಚವಾಗಿತ್ತು. ಅದು ಎಷ್ಟು ಮಾತ್ರವೂ ಬಳಕೆಯಾಗದ, ಬಳಸಿ ಸವೆಯದ ಐಂದ್ರಿಕ ವಿವರಗಳು ಮತ್ತು ಭಾಷಿಕ ಅನನ್ಯತೆಗಳನ್ನು ಪಡೆದುಕೊಂಡಿತ್ತು.

ಗೀತಾ ನಾಗಭೂಷಣ ಅವರ ಕೃತಿಗಳು ಪ್ರಕಟಪಡಿಸುವ ವೈಚಾರಿಕತೆಯ ಹಿಂದೆ ಹಲವು ಪ್ರಭಾವಗಳನ್ನು ಗುರುತಿಸಬಹುದಾಗಿದೆ. ಅಂಬೇಡ್ಕರ್ ಒತ್ತಿ ಹೇಳುವ ದಲಿತರ ಸ್ವಾಭಿಮಾನದ ಅಗತ್ಯವನ್ನು ಇವರ ಎಲ್ಲ ಕೃತಿಗಳ ಹಿಂದೆ ಗುರುತಿಸಬಹುದಾಗಿದೆ. ಹಾಗೆಯೇ ಜಾತಿ ಸಂಘರ್ಷದ ಚರ್ಚೆ ಬಂದಾಗಲೆಲ್ಲ ಬಸವನ ಕಾಲದ ತಾತ್ವಿಕತೆಯ ಕಡೆಗೆ ಸರಿಯುತ್ತಾರೆ. ಇವೆಲ್ಲದರ ಜೊತೆಗೆ ಫ್ಯೂಡಲ್

ಮೌಲ್ಯಗಳನ್ನು ವಿಶ್ಲೇಷಿಸುವ ಸಂದರ್ಭದಲ್ಲಿ ಅದರಲ್ಲಿನ ಲೈಂಗಿಕ ರಾಜಕೀಯವನ್ನು ಗುರುತಿಸಿ ಅಭಿವ್ಯಕ್ತಿಸಬಲ್ಲ ಪ್ರಖರತೆ ಇವರ ಲೇಖನಿಗಿದೆ. ಆದ್ದರಿಂದಲೇ ಇವರ ಬರವಣಿಗೆಗಳು ದಲಿತ ಮಹಿಳಾ ಮೀಮಾಂಸೆಯನ್ನು ಕಟ್ಟಿಕೊಡುವ ದಿಕ್ಕಿನತ್ತ ಸಾಗುತ್ತವೆ. ಬಸವ, ಅಂಬೇಡ್ಕರ್‌ವರ ತಾತ್ವಿಕ ದರ್ಶನಗಳಲ್ಲಿ ಕಾಣಸಿಗದ ಹಲವಾರು ಸ್ತ್ರೀವಾದಿ ಚಿಂತನೆಯ ಹೊಳಹುಗಳು ಇವರ ಬರವಣಿಗೆಯಲ್ಲಿ ನಮಗೆ ದಕ್ಕುತ್ತವೆ.

ಪ್ರಾಚೀನ ಕಾಲದಿಂದಲೂ ಕನ್ನಡ ನಾಡಿನಲ್ಲಿ ಮಹಿಳೆಯರು ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಕಾರ್ಯಕ್ಷೇತ್ರಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಉತ್ತಮ ಸಾಧನೆಯನ್ನು ಮಾಡಿದ್ದಾರೆ. ಮಹಿಳಾ ವಿದ್ವಾಂಸರು, ಕವಯಿತ್ರಿಯರು, ಸೃಜನಶೀಲ ಸಾಹಿತಿಗಳು, ಸಂಶೋಧಕರು, ವಿಮರ್ಶಕರು, ಕಲಾವಿದೆಯರು, ಸಮಾಜಕ್ಕೆ ಅಪಾರವಾದ ಕೊಡುಗೆಯನ್ನು ಕೊಟ್ಟಿದ್ದಾರೆ. ಪ್ರಸ್ತುತ ಸಮಾಜದಲ್ಲಿ ಎಲ್ಲ ಕ್ಷೇತ್ರಗಳಲ್ಲಿಯೂ ಮಹಿಳೆಯರು ಮೇಲ್ಗೈ ಸಾಧಿಸಿ ಅಪಾರವಾದ ಕೀರ್ತಿಗಳಿಸುತ್ತಿರುವುದು ಅಭಿನಂದನೀಯ ವಿಚಾರವೇ ಸರಿ. ಮಹಿಳೆಗೆ ವಿದ್ಯಾಭ್ಯಾಸ ಹಾಗೂ ಅಭಿವ್ಯಕ್ತಿಯ ಸ್ವಾತಂತ್ರ್ಯ ತುಂಬ ನಿಧಾನವಾಗಿ ದೊರೆತರೂ ಆಕೆ ತೀವ್ರಗತಿಯಲ್ಲಿ ಎಲ್ಲ ಕ್ಷೇತ್ರಗಳಲ್ಲಿ ಪ್ರವೇಶಿಸಿ ಉನ್ನತ ಮಟ್ಟಕ್ಕೆ ಏರುತ್ತಿದ್ದಾಳೆ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹೊಸ ಅಧ್ಯಾಯವೊಂದು ಸೇರ್ಪಡೆಯಾಗಿದೆ. ಅದೇ ಸ್ತ್ರೀ ಸಂವೇದನಾ ಸಾಹಿತ್ಯ ಮಹಿಳೆ ಪ್ರಾಚೀನ ಕಾಲದಿಂದಲೂ ಸಾಹಿತ್ಯ ರಚನೆಗೆ ತೊಡಗಿದ್ದಾಳೆ. ರೂಢಿ, ಸಂಪ್ರದಾಯ, ಪುರುಷ ನಿರ್ಮಿತ ಕಟ್ಟುಕಟ್ಟಲೆಗಳ ಚೌಕಟ್ಟಿನಲ್ಲಿಯೇ ಸ್ತ್ರೀ ಸಾಹಿತ್ಯವನ್ನು ರಚಿಸುತ್ತಿದ್ದಳು. ಇವೆಲ್ಲವನ್ನು ಮೆಟ್ಟಿನಿಂತು ಹೊಸದೊಂದು ದೃಷ್ಟಿಯನ್ನು ಜಗತ್ತಿಗೆ ಪರಿಚಯಿಸಿದವಳು ಹನ್ನೆರಡನೆಯ ಶತಮಾನದಲ್ಲಿ ಬಂದ ಶಿವಶರಣೆ ಅಕ್ಕಮಹಾದೇವಿ ಈಕೆಯ ಅನಂತರದಲ್ಲಿ ಬಂದ ಶಿವಶರಣೆಯರು ಅದೇ ಹಾದಿಯಲ್ಲಿ ಸಾಗಿದ್ದಾರೆ. ನವೋದಯ ಕಾಲದಲ್ಲಿ ಬಂದ ಲೇಖಕಿಯರು ಮಹಿಳೆಯರ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿದರು.

ಬಂಡಾಯ ಸಾಹಿತ್ಯ ಸಂದರ್ಭದಲ್ಲಿ ಬರುವ ಗೀತಾ ನಾಗಭೂಷಣ ಅವರು ಕೆಳವರ್ಗದ, ದಲಿತಕೇರಿಗಳ ಮತ್ತು ಕೊಳಗೇರಿಗಳ ಸ್ತ್ರೀಯರ ಬದುಕನ್ನು ಸಾಹಿತ್ಯದ ಪರಿಧಿಗೆ ತಂದು ಚಾರಿತ್ರಿಕ ದಾಖಲೆಯನ್ನು ಸೃಷ್ಟಿಸಿದ್ದಾರೆಂದು ಹೇಳಬಹುದು. ಹೈದರಾಬಾದ್ ಕರ್ನಾಟಕ ಪ್ರಾಂತ್ಯದಲ್ಲಿನ ಜನಜೀವನ ಮತ್ತು ಸಂಸ್ಕೃತಿಯನ್ನು ಸಮಷ್ಠಿ ಪ್ರಜ್ಞೆಯಲ್ಲಿ ಚಿತ್ರಿಸಿದ್ದಾರೆ. ಮಾನವೀಯ ನೆಲೆಗಳ ಹುಡುಕಾಟಕ್ಕೆ ತೊಡಗಿರುವ ಲೇಖಕಿ ಸ್ತ್ರೀಯರು ಅನುಭವಿಸುತ್ತಿರುವ ಕಷ್ಟಸರಮಾಲೆಗಳ ಚಿತ್ರಣವನ್ನು ಕಟ್ಟಿಕೊಡುತ್ತಾರೆ. ಹಳ್ಳಿಯ ಕೆಳಗೇರಿ ಮತ್ತು ಪಟ್ಟಣದ ಕೊಳಗೇರಿಗಳ ಝೋಪಡಿಗಳಲ್ಲಿ ವಾಸಿಸುವ ಜನರ ಬದುಕನ್ನು ಮುಖ್ಯವಾಗಿರಿಸಿಕೊಂಡು ಅಲ್ಲಿ ಸ್ತ್ರೀಯರ ಬವಣೆಗಳನ್ನು ಅವರ ನೊಂದ ಬದುಕಿನ ವಿವಿಧ ಮುಗ್ಗಲುಗಳನ್ನು, ತಮ್ಮ ಕಾದಂಬರಿಯಲ್ಲಿ ಚಿತ್ರಸಲು ಮುಂದಾಗಿದ್ದಾರೆ. ಸಾಮಾಜಿಕ ಸಮಸ್ಯೆ,

ಸಂಘರ್ಷಗಳನ್ನು ಬರಹದಲ್ಲಿ ಅನಾವರಣಗೊಳಿಸಿ, ಮಾನವೀಯತೆಯ ಹುಡುಕಾಟವನ್ನು ಮಾಡಿ, ಸಮಾಜ ಸುಧಾರಣೆಯ ಮಾರ್ಗವನ್ನು ಸಮಸ್ಯೆಗಳಿಗೆ ಬೇಕಾದ ಪರಿಹಾರವನ್ನು ತೆಳುಧೋರಣೆಯಲ್ಲಿಯೇ ಪ್ರತಿಪಾದಿಸಿದ್ದಾರೆ. ವಿವಿಧ ಪರಿಸರಗಳಲ್ಲಿ ಬದುಕುವ ಎಲ್ಲ ವರ್ಗಗಳ ಅಮಾಯಕ ಸ್ತ್ರೀಯರ 'ಲೈಂಗಿಕ ಶೋಷಣೆ' ಯೇ ಇವರ ಬರಹದ ಮುಖ್ಯ ವಸ್ತುವೆನಸಿದರೂ ಇದಕ್ಕೆ ಪೂರಕವಾಗಿ ಗೊಡ್ಡು ಕಂದಾಚಾರ, ಮೂಢನಂಬಿಕೆಗಳಂಥ ಪಿಡುಗು ಮತ್ತು ವ್ಯವಸ್ಥೆಯ ಕೌರ್ಯವನ್ನು ಇವರು ತಮ್ಮ ಕಾದಂಬರಿಯಲ್ಲಿ ತಂದಿದ್ದಾರೆ.

ಕಾರಂತರ ಕಾದಂಬರಿಗಳಲ್ಲಿ ದುಡಿಮೆ ಹೆಣ್ಣಿಗೆ ಒಂದು ಮೌಲ್ಯವಾಗಿ ಬಂದರೆ ಗೀತಾರವರ ಕಾದಂಬರಿಗಳಲ್ಲಿ ದುಡಿಮೆ ಒಂದು ಅನಿವಾರ್ಯ ಸೂತ್ರವಾಗಿ, ಬದುಕಿನ ಅಗತ್ಯವಾಗಿ ಮೂಡಿಬರುತ್ತದೆ. ಹೆಣ್ಣಿನ ಶಕ್ತಿಯಿರುವುದೇ ಆರ್ಥಿಕ ಪರಾವಲಂಬನೆ ಇಲ್ಲದ ದೈಹಿಕ ದುಡಿಮೆಯ ಬೆಂಬಲದಲ್ಲಿ ಎನ್ನುವ ಮಾತು ಈ ಗುಂಪಿನ ಮಹಿಳೆಯರಲ್ಲಿ ಸತ್ಯವಾದರೂ ಅದು ಅವರ ಆಯ್ಕೆಯ ಸಂಗತಿಯಲ್ಲ. ಈ ಜನ ವಿವಾಹವನ್ನು ಎಂದೂ ದುಡಿಮೆಗೆ ಪರ್ಯಾಯ ಎಂದು ಭಾವಿಸಿರದ ಕಾರಣ, ವಿವಾಹವು ಮುರಿದು ಬಿದ್ದಾಗಲೂ ಅವರು ತಮ್ಮದೇ ಬೇರೆ ಆಯ್ಕೆಗಳಲ್ಲಿ ತೊಡಗಿಕೊಳ್ಳುತ್ತಾರೆ. ಈ ಅಂಶಗಳಿಂದಾಗಿ ಮಧ್ಯಮವರ್ಗದ ಮಹಿಳೆಯರಿಗಿಂತ ಈ ಹೆಂಗಸರು ಗಟ್ಟಿಗರು ಎಂಬುದನ್ನು ಒಪ್ಪಿಕೊಳ್ಳಬಹುದು. ಆದರೂ ಕೆಲವೊಮ್ಮೆ ಅವರ ಈ ಗಟ್ಟಿತನವನ್ನು ವೈಭವಿಸುವವರು ಅವರು ತುಳಿತಕ್ಕೊಳಗಾಗಿರುವ ಶೋಷಿತ ನೆಲೆಗಳನ್ನು ಗೌಣವಾಗಿಸುವುದುಂಟು. ಗೀತಾ ನಾಗಭೂಷಣ ಅವರ ಕಾದಂಬರಿಯಲ್ಲಿ ಈ ಎರಡೂ ಮಗ್ಗುಲುಗಳಿಗೂ ಸೂಕ್ಷ್ಮವಾದ ಪ್ರತಿಸ್ಪಂದನವಿದೆ. ಗೀತಾ ಅವರ ಕಾದಂಬರಿಯಲ್ಲಿ ಚಿತ್ರಿತವಾಗಿರುವ ಗಟ್ಟಿಗಿತ್ತಿ ಪಾತ್ರಗಳು ಕೂಡ ಪುರುಷರ ಕಾಮುಕತೆ, ಕ್ರೌರ್ಯ, ಕುತಂತ್ರಗಳಿಗೆ ಬಲಿಯಾಗಲೇಬೇಕಾಗುತ್ತದೆ.

ಗೀತಾರವರು ತಮ್ಮ ಕಾದಂಬರಿಯಲ್ಲಿ ಅನಾವರಣಗೊಳಿಸುವ ಅನುಭವದ ಲೋಕ ಹೊಚ್ಚ ಹೊಸದು; ಅನನ್ಯವಾದದು. ಅವರು ಚಿತ್ರಿಸಿರುವ ಹಲವಾರು ಮಹಿಳಾ ಮಾದರಿಗಳು ಈವರೆಗೆ ಕನ್ನಡ ಸಾಹಿತ್ಯದಲ್ಲಿ ಚಿತ್ರಿತವಾಗದಿರುವಂತಹವು. ಕೆಳಜಾತಿಯ ಹೆಣ್ಣುಮಕ್ಕಳ ಅನುಭವ ಲೋಕ ಹಲವು ರಂಗಿನಲ್ಲಿ ಚಿತ್ರಿತವಾಗಿದ್ದು ಕನ್ನಡ ಸಾಹಿತ್ಯದ ಬಹುಮುಖತೆಗೆ ತನ್ನದೇ ಕಾಣಿಕೆಯನ್ನು ನೀಡಿದೆ.

"ಮಾಸ್ತಿಯವರಿಂದ ಮೊದಲಾಗಿ ಮೊಗಳ್ಳಿಯವರೆಗೆ ಕನ್ನಡ ಕಥಾಲೋಕದಲ್ಲಿ ಗ್ರಾಮೀಣ ಕರ್ನಾಟಕವು ಮೈದಳೆದಿದೆ. ಅವುಗಳನ್ನು ದಾಖಲೆ ಮಾಡಿರುವ ಪ್ರಜ್ಞಾ ಕೇಂದ್ರಗಳು ಬೇರೆ ಬೇರೆಯೇ

ಆಗಿವೆ. ಆದರೆ ಮಹಿಳೆಯೊಬ್ಬರ ಬರವಣಿಗೆಯಲ್ಲಿ ಹಳ್ಳಿಗಳು ಮತ್ತು ನಗರದ ಒಡಲಿನಲ್ಲಿ ತಮ್ಮ ಚಹರೆ ಪಟ್ಟಿಗಳನ್ನು ಕಳೆದುಕೊಂಡಿರುವ ಹಳ್ಳಿಗಳ ಜೀವನದ ಚಲನಶೀಲ ನೆಲೆಗಳು ಈ ಪ್ರಮಾಣದಲ್ಲಿ ಬಂದಿರುವುದು ಇದೇ ಮೊದಲು" ಎನ್ನುವ ಪ್ರೊ॥ ರಾಘವೇಂದ್ರರಾವ್‌ರವರ ಮಾತುಗಳನ್ನು ಒಪ್ಪಿಕೊಳ್ಳುತ್ತಲೇ ಈ ಮಹಿಳೆಯ ಪ್ರಜ್ಞಾಕೇಂದ್ರ ಅಂಗ ಸೂಕ್ಷ್ಮತೆಯನ್ನು ನಿರ್ದಿಷ್ಟವಾಗಿ ಗುರುತಿಸಬಹುದಾಗಿದೆ. ಕೆಳವರ್ಗದವರು ಮತ್ತು ಕೆಳ ಜಾತಿಯವರ ಮೈಮನಸ್ಸುಗಳೆಲ್ಲ ಅಧೀನತೆಯನ್ನು ಒಪ್ಪಿಕೊಂಡು ಬಿಟ್ಟಿರುವುದರಿಂದ ಇಲ್ಲಿ ಅಂಗದ ಶ್ರೇಷ್ಠತೆಯ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಮೇಲ್ಜಾತಿಗೆ ಸೇರಿದ ಹೆಣ್ಣು ಅಧಿಕಾರದ ಭಾಗವಾಗಿರುವುದರಿಂದ ಕೆಳ ಜಾತಿಯ ಗಂಡಿನ ಸಂಬಂಧದಲ್ಲಿ ಮೇಲ್ ಸ್ತರದಲ್ಲಿಯೇ ಕೆಲಸ ನಿರ್ವಹಿಸುತ್ತಾಳೆ.

ಬಸವಣ್ಣನವರು ತಮ್ಮ ಕಾಲದಲ್ಲಿ ಅಂತರ್ಜಾತಿಯ ವಿವಾಹವನ್ನು ನಡೆಸಿದ್ದ ಘಟನೆ ಒಂದು ಪ್ರತೀಕವಾಗಿ, ತಾತ್ವಿಕ ಚಿಂತನೆಯ ಹೊಳಹಾಗಿ ಕನ್ನಡ ಸಾಹಿತ್ಯದಲ್ಲಿ ಮತ್ತೆ ಮತ್ತೆ ಪುನರ್ ವ್ಯಾಖ್ಯಾನಗೊಳ್ಳುತ್ತಿದೆ. ಗೀತಾ ನಾಗಭೂಷಣರವರೂ ಕೂಡ ಬಸವನ ಉದಾಹರಣೆಗೆ ತಮ್ಮ ಪಾತ್ರಗಳ ಮೂಲಕ ಜೀವ ಕೊಡುತ್ತಾ ದಲಿತ ಸಮಾಜದಲ್ಲಿನ ಸಂಚಲನವನ್ನು ದಾಖಲಿಸಲು ಮುಂದಾಗಿದ್ದಾರೆ. ಭೂಮಿಯ ಒಡೆತನ ಹೊಂದಿರುವ ಮೇಲ್ ಜಾತಿಯ ಮಂದಿ ಭೂಮಿಯಲ್ಲದ ಕೆಳ ಜಾತಿ, ವರ್ಗದವರನ್ನು ಶೋಷಿಸುವುದು ರೂಢಿ. ಆದರೆ ಹೆಣ್ಣನ್ನು ಭೂಮಿಯೆಂಬಂತೆ ಭಾವಿಸಿ ಅದರ ಒಡೆತನವನ್ನು ಭೂಮಿಯ ಒಡೆತನದಂತೆ ಹಂಚಿಕೊಂಡು, ಅವಳನ್ನು ಎಲ್ಲ ಜಾತಿಯ ಪುರುಷರೂ ಶೋಷಿಸುವ ಅಂಗ ರಾಜಕೀಯವನ್ನು ಗೀತಾರವರು ತಮ್ಮ ಹಲವಾರು ಕಾದಂಬರಿಗಳಲ್ಲಿ ಚರ್ಚಿಸುತ್ತಾರೆ. ಹೀಗಾಗಿ ಪುರುಷ ರಾಜಕಾರಣವನ್ನು ಅತ್ಯಂತ ಧೈರ್ಯವಾಗಿ ಮತ್ತು ಮುಕ್ತವಾಗಿ ಚರ್ಚಿಸುವ ಗೀತಾ ಅವರ ವೈಚಾರಿಕ ಸ್ಪಷ್ಟತೆ ಅದನ್ನು ಕಲಾತ್ಮಕವಾಗಿರುವಾಗ ಇನ್ನೂ ಹೆಚ್ಚು ಎಚ್ಚರವಹಿಸಿದ್ದರೆ ಅವರ ಯಶಸ್ಸು ಇಮ್ಮಡಿಗೊಳ್ಳಬಹುದಾಗಿತ್ತು. ಇವರ ಒಟ್ಟು ಬರವಣಿಗೆಯನ್ನು ಒಟ್ಟಾಗಿ ಓದಿದಾಗ ಕಂಡು ಬರುವ ಫಾರ್ಮುಲಾ ಮಾದರಿಯ ವರ್ಣನೆಗಳು, ಸಿದ್ಧ ಮಾದರಿಗಳು, ಕೆಲವೊಮ್ಮೆ ಪದಪುಂಜಗಳೂ ಕೂಡ ಏಕತಾನತೆಯಿಂದಾಗಿ ವರದಿಯೆನಿಸಿಕೊಂಡುಬಿಡುತ್ತದೆ. ಕಳೆದ ನಾಲ್ಕು ದಶಕಗಳಲ್ಲಿ ಜಾತಿ ವ್ಯವಸ್ಥೆಯ ಶ್ರೇಣಿಕರಣದಲ್ಲಿ ಅಗಾಧ ಸಂಚಲನವುಂಟಾಗಿದೆ. ಈ ಪ್ರಕ್ರಿಯೆಯಲ್ಲಿ ಕೆಲವು ಬ್ರಾಹ್ಮಣೇತರ ಮೇಲುಜಾತಿಗಳೂ ಹಣ ಮತ್ತು ಅಧಿಕಾರ ಪಡೆದು ಸಶಕ್ತವಾಗಿ ಕೆಳಜಾತಿ ವರ್ಗಗಳ ಶೋಷಣೆಯಲ್ಲಿ ಕ್ರಿಯಾಶೀಲವಾಗಿ ತೊಡಗಿಕೊಂಡಿವೆ. ಜಾತಿ ಸಮಸ್ಯೆಯ ಇಂತಹ ಬಹುಮುಖತೆ ಮತ್ತು ಸಂಕೀರ್ಣತೆಯ ಗ್ರಹಿಕೆ ಮತ್ತು ಅಭಿವ್ಯಕ್ತಿಯ ಕೊರತೆ ಇವರ ಕೃತಿಗಳಲ್ಲಿ ಎದ್ದು

ಕಾಣುತ್ತದೆ. ಲೈಂಗಿಕ ವರ್ಣನೆಗಳು ಕೆಲವೊಮ್ಮೆ ಸಮಸ್ಯೆಯ ಗಂಭೀರತೆಯನ್ನು ಕಡಿಮೆ ಮಾಡಿ ಬಿಡುತ್ತವೇನೋ ಎಂಬ ಆತಂಕ ಹುಟ್ಟಿಸುತ್ತದೆ.

“ಗೀತಾ ಅವರ ಕೃತಿಗಳು ಲೈಂಗಿಕ ದಬ್ಬಾಳಿಕೆಯೊಂದಿಗೆ ಸ್ತ್ರೀ ಶೋಷಣೆಯ ಉಳಿದೆಲ್ಲ ಮೈಗಳಿಗೆ ಚಾಚಿಕೊಂಡಿದ್ದರೆ ನಿಜಕ್ಕೂ ಗಂಭೀರ ಚಿಂತನೆಗೆ ಒಳಗಾಗುವ ಸಾಧ್ಯತೆ ಇತ್ತು. ಕಥೆ ಹೇಳುವ ಕಾಯಕಕ್ಕೆ ಒಂದಷ್ಟು ವ್ಯವಧಾನ ಒದಗಿರುತ್ತಿದ್ದರೆ, ಒಂದು ಜೀವಂತ ಸಮಾಜದ ಒಳ ಹೊರಗನ್ನು ಬಗೆದು, ಮಾನವ ಸ್ವಭಾವದ ನೈಜತೆಯೊಂದಿಗೆ ಅನುಸಂಧಾನಗೈಯ್ಯಲು ಸಾಧ್ಯವಾಗಿರುತ್ತಿದ್ದರೆ, ಅವರ ಕಾದಂಬರಿಗಳಲ್ಲಿ ಪುನರಾವರ್ತನೆಯಾದ ಹಸಿ ಹಸಿ ಚಿತ್ರಣಗಳನ್ನು ತಪ್ಪಿಸಬಹುದಾಗಿತ್ತು. ಪೂರ್ವಗ್ರಹ ಪೀಡಿತ ನಿರ್ಧಾರಗಳಿಗೆ ಆತುಕೊಳ್ಳದೆ ಲೋಕಾನುಭವದ ವೈವಿಧ್ಯಪೂರ್ಣ ಹರಹನ್ನು ದುಡಿಸಿಕೊಳ್ಳಬಹುದಿತ್ತು.” ಎಂದು ಮೀನಾಕ್ಷಿ ಬಾಳಿಯವರು ಗುರುತಿಸಿರುವ ಅಂಶಗಳು ಗೀತಾ ನಾಗಭೂಷಣರವರ ಬರೆಹಗಳ ಕೊರತೆಯನ್ನು ಸೂಚಿಸಬಲ್ಲವು ಎಂಬ ಮಾತುಗಳನ್ನು ಒಪ್ಪುತ್ತಲೇ, ಅದು ಮಹಿಳಾ ಬರೆಹಗಳ ರೂಪುರೇಷೆಗಳ ಚರ್ಚೆಗೆ ಹೆಚ್ಚು ಕಸುವು ತುಂಬುತ್ತದೆ” ಎಂದು ಹೇಳಬಹುದು. ಆದರೂ ಈ ಎಲ್ಲ ಮಿತಿಗಳ ನಡುವೆಯೂ ಕನ್ನಡದಲ್ಲಿ ಸ್ತ್ರೀವಾದಿ ಸಾಹಿತ್ಯ ಪರಂಪರೆಗೆ ಗೀತಾರವರ ಬರಹಗಳು ಮಹತ್ವದ ಕಾಣಿಕೆಗಳಾಗಿವೆ.

ಗೀತಾ ನಾಗಭೂಷಣ ಅವರ ‘ಧುಮ್ಮಸು’ ಕಾದಂಬರಿಯನ್ನು ಮುಖ್ಯವಾಗಿಟ್ಟುಕೊಂಡು ರೂಪುಗೊಂಡಿರುವ ಈ ಸಂಪ್ರಬಂಧದಲ್ಲಿ ಗೀತಾ ಅವರ ಕಾದಂಬರಿಯಲ್ಲಿ ಪ್ರಕಟಗೊಂಡಿರುವ ಸಾಮಾಜಿಕ ಸಮಸ್ಯೆಗಳು, ಮಾನವೀಯ ನೆಲೆಗಳು ಹಾಗೂ ಸಾಹಿತ್ಯ ಮೌಲ್ಯಗಳು ಪ್ರಮುಖವಾಗಿ ವಿಮರ್ಶೆಗೆ ಒಳಪಟ್ಟಿದೆ. ಈ ಸಂಪ್ರಬಂಧದಲ್ಲಿ ೬ ಅಧ್ಯಾಯಗಳಿವೆ. ಮೊದಲ ಅಧ್ಯಾಯ ಸಂಪ್ರಬಂಧದ ವಿಸ್ತಾರ ಎಲ್ಲೆಗಳನ್ನು ತಿಳಿಸುತ್ತದೆ. ಮುಂದಿನ ಅಧ್ಯಾಯಗಳು ಒಳಗೊಂಡಿರುವ ಪ್ರಮುಖ ವಿಷಯದ ಬಗ್ಗೆಯೂ ಇದು ಬೆಳಕುಚೆಲ್ಲುತ್ತದೆ. ಎರಡನೇಯ ಅಧ್ಯಾಯದಲ್ಲಿ ಲೇಖಕಿ ಗೀತಾರ ಜೀವನ ಮತ್ತು ಸಾಹಿತ್ಯಕ ಕೊಡುಗೆಯನ್ನು ಕುರಿತ ವಿವರಗಳಿವೆ. ಲೇಖಕಿ ಬಂಡಾಯದ ಬರಹಕ್ಕೆ ತೊಡಗಲು ಅವರು ಬೆಳೆದ ಪರಿಸರ, ಕಂಡ ನೋವುಗಳೇ ಮುಖ್ಯ ಕಾರಣ. ಆದ್ದರಿಂದ ಆ ಎಲ್ಲ ವಿವರಗಳನ್ನು ನೀಡುವುದು ಇಲ್ಲಿ ಸೂಕ್ತವೆಂದು ತಿಳಿದು ಬದುಕಿನ ಹೋರಾಟದ ಹಿನ್ನೆಲೆಯಲ್ಲಿ ರೂಪುಗೊಂಡ ಅವರ ವ್ಯಕ್ತಿತ್ವವನ್ನು ಇಲ್ಲಿ ವಿಶ್ಲೇಷಣೆಗೆ ಒಳಪಡಿಸಿದ್ದೇನೆ. ಈ ಸಂಪ್ರಬಂಧದ ಮೂರನೆಯ ಅಧ್ಯಾಯದಲ್ಲಿ ‘ಧುಮ್ಮಸು’ ಕಾದಂಬರಿಯ ವಸ್ತು, ಸನ್ನಿವೇಶ ನಿರ್ಮಾಣ, ಭಾಷೆ, ಶೈಲಿ, ತಂತ್ರ, ಪಾತ್ರ ಚಿತ್ರಣ, ಆಶಯಗಳು ದೋರಣೆಗಳನ್ನು ವಿಮರ್ಶಿಸುವ ಮೂಲಕ ಕಾದಂಬರಿಯ ಸಮಗ್ರ ಪರಿಚಯವನ್ನು ~~ಈ ಅಧ್ಯಾಯದಲ್ಲಿ~~ ಮಾಡಲಾಗಿದೆ. ಈ ಸಂಪ್ರಬಂಧದ ನಾಲ್ಕು ಮತ್ತು ಐದು ಅಧ್ಯಾಯಗಳು ಪ್ರಮುಖವಾದವುಗಳಾಗಿವೆ.

ಈ ಅಧ್ಯಾಯವು ಸೈದ್ಧಾಂತಿಕ ಹಿನ್ನೆಲೆಯಲ್ಲಿ ಚರ್ಚೆಗೆ ಒಳಪಟ್ಟಿದೆ. ಕೆಳವರ್ಗದ, ದಲಿತರ, ಕೊಳಗೇರಿಗಳ ಸ್ತ್ರೀಯರ ಬದುಕಿನ ಸಮಗ್ರ ಚಿತ್ರಣವನ್ನು ಇಲ್ಲಿ ಕೊಡಲಾಗಿದ್ದು ಅವರು ಶೋಷಣೆಗೆ ತುತ್ತಾಗಿರುವ ವಿಭಿನ್ನ ನೆಲೆಗಳನ್ನು ಹಾಗೂ ಅವರು ತೋರಿರುವ ವಿವಿಧ ರೂಪದ ಪ್ರತಿಭಟನೆಗಳನ್ನು ಈ ಅಧ್ಯಾಯದಲ್ಲಿ ವಿಮರ್ಶಿಸಲಾಗಿದೆ. ಗೀತಾ ಅವರು ಹಳ್ಳಿಯ ಕೇರಿಗಳಲ್ಲಿ ವಾಸಿಸುತ್ತಾ, ಮೇಲ್ವರ್ಗದವರ ಮನೆಗಳಲ್ಲಿ ಆಳುಗಳಾಗಿ, ಜೀತಗಾರರಾಗಿ ಬದುಕು ಸವೆಸಿದ ಮಂದಿಯ ಹಲವು ಬಗೆಯ ಶೋಷಣೆಯನ್ನು ಕೃತಿಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ಈ ಕಾದಂಬರಿಯಲ್ಲಿ ಅನಾವರಣಗೊಂಡಿರುವ ದಲಿತರ ಬದುಕು, ಜೀವನದ ಅಭದ್ರತೆಗಳು, ಶೋಷಣೆ ಮುಂತಾದವುಗಳನ್ನು ವಿಮರ್ಶಿಸಿ ದಲಿತರು ಎಚ್ಚೆತ್ತಿರುವ ಪ್ರತಿಭಟಿಸಿ ಜೀವನ ರೂಪಿಸಿಕೊಂಡಿರುವ ವಿವಿಧ ನೆಲೆಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಕೆಳವರ್ಗದ ಜನರು, ದಲಿತರು, ಅಮಾಯಕ ಸ್ತ್ರೀಯರು ಶೋಷಣೆಗೆ ತುತ್ತಾದರೂ ಆ ಸ್ಥಿತಿಯಿಂದ ಎಚ್ಚೆತ್ತು ಪ್ರತೀಕಾರಕ್ಕೆ ಮುಂದಾಗಿರುವ ಬಗೆಯನ್ನು ಹಾಗೂ ಎಲ್ಲ ಪರಿಸ್ಥಿತಿಗಳನ್ನು ಎದುರಿಸಿ ನಿಂತು ತಮ್ಮ ಅಸ್ತಿತ್ವ ಕಂಡುಕೊಂಡಿರುವ ರೀತಿಯನ್ನು ಇಲ್ಲಿ ಚರ್ಚೆಗೆ ಒಳಪಡಿಸಲಾಗಿದೆ. ಗೀತಾ ಅವರ ಬರಹಕ್ಕೆ ಬಹುಮುಖ್ಯವಾಗಿ ದೊರೆತಿರುವ ವಸ್ತು, ಸಂಗತಿಗಳು ಮಾನವ ವಿರೋಧಿ ಪದ್ಧತಿ, ಸಾಮಾಜಿಕ ಸಮಸ್ಯೆ ಮತ್ತು ಗೊಡ್ಡು ಕಂದಾಚಾರಗಳು, ಇವುಗಳನ್ನು ಲೇಖಕಿ ಕಟ್ಟಿಕೊಟ್ಟಿರುವ ಸನ್ನಿವೇಶ, ಸಂದರ್ಭಗಳ ಹಿನ್ನೆಲೆಯಲ್ಲಿ ವಿವಿಧ ನೆಲೆಗಳಲ್ಲಿ ವಿಮರ್ಶಿಸಲಾಗಿದೆ. ಗೀತಾ ಅವರು ತಮ್ಮ ಕೃತಿಗಳಲ್ಲಿ ಪ್ರಯೋಗಿಸಿರುವ ಹೈದರಾಬಾದ್ ಕರ್ನಾಟಕದ ಆಡುಬಾಷೆಯನ್ನು ಕುರಿತು ಸಂಶೋಧನೆ ಮಾಡುವ ಅಗತ್ಯವೂ ಇದೆ. ಈ ಎಲ್ಲ ವಿಚಾರಗಳು ಸಣ್ಣ ಸಂಪ್ರಬಂಧದಲ್ಲಿ ಸಂಕ್ಷಿಪ್ತವಾಗಿ ಅಧ್ಯಯನಕ್ಕೆ ಒಳಪಟ್ಟಿವೆ. ಆದ್ದರಿಂದ ಮುಂದಿನ ಸಂಶೋಧಕರು ಈ ವಿಚಾರಗಳ ಕಡೆಗೆ ಗಮನಹರಿಸಿ ಸಮಗ್ರ ಅಧ್ಯಯನಕ್ಕೆ ತೊಡಗಬಹುದಾಗಿದೆ.

ಅನುಬಂಧ

ವೈಯಕ್ತಿಕ ಪರಿಚಯ

ನಾಡೋಜ ಡಾ. ಗೀತಾ ನಾಗಭೂಷಣ
ಅವರ ಪರಿಚಯ

ಹೆಸರು	:	ಡಾ. ಗೀತಾ ನಾಗಭೂಷಣ
ವಿಳಾಸ		"ಕಾವ್ಯಶ್ರೀ" ೧೮, ಸ್ವಸ್ತಿಕ ನಗರ ಸೇಡಂ ರಸ್ತೆ, ರಿಂಗ್ ರೋಡ್ (ಬಿಲಗುಂದಿ ತೋಟ) ಗುಲಬರ್ಗಾ-೫೮೫೧೦೫.
ದೂರವಾಣಿ	:	-
ಮೊಬೈಲ್ ಸಂಖ್ಯೆ	:	೯೮೮೦೨೪೯೮೦೮
ತಾಯಿ-ತಂದೆ	:	ಶರಣಮ್ಮ -ಶಾಂತಪ್ಪ ಸಾವಳಗಿ
ಜಾತಿ	:	ತಳವಾರ (ಗಂಗಾಮತ)
ಹುಟ್ಟೂರು		ಗುಲಬರ್ಗಾ ಜಿಲ್ಲೆಯ 'ಸಾವಳಗಿ' ಗ್ರಾಮ
ಹುಟ್ಟಿದ ದಿನಾಂಕ	:	೨೫ ಮಾರ್ಚ ೧೯೪೨
ವಿದ್ಯಾಭ್ಯಾಸ	:	ಎಂ.ಎ., ಬಿ.ಈಡಿ.
ವೃತ್ತಿ	:	ನಿವೃತ್ತ ಪ್ರಾಚಾರ್ಯರು
ಕೃತಿಗಳು (ಪ್ರಕಟಿತ)	:	ಪ್ರತ್ಯೇಕ ಪಟ್ಟಿ ಲಗತ್ತಿಸಿದೆ.
ಬೇರೆ ಭಾಷೆಗೆ ಅನುವಾದ	:	"ಹಸಿಮಾಂಸ ಮತ್ತು ಹದ್ದುಗಳು" ಕಾದಂಬರಿ ಮರಾಠಿ ಭಾಷೆಗೆ ಅನುವಾದವಾಗಿದೆ, ಹಲವಾರು ಕತೆಗಳು ತೆಲಗು, ತಮಿಳು, ಹಿಂದಿ ಭಾಷೆಗಳಿಗೆ ತರ್ಜುಮೆಗೊಂಡಿವೆ.
ಆಕಾಶವಾಣಿ	:	ಸುಮಾರು ೧೬ ಕಥೆಗಳು ಮತ್ತು ೧೫ ನಾಟಕಗಳು, ಆಕಾಶವಾಣಿ ಗುಲಬರ್ಗಾ, ಧಾರವಾಡ, ಮೈಸೂರು, ಬೆಂಗಳೂರು ಕೇಂದ್ರಗಳಾದ ಪ್ರಸಾರವಾಗಿವೆ.
ದೂರದರ್ಶನ	:	೧. ಜೋಗಿಣಿ ನಾಟಕ, ೨. ಅವ್ವ ನಾಟಕ, ೩. ಸತ್ತ ಹೆಣ್ಣಿನ ಸುತ್ತ ನಾಟಕ, ೪. ಜೀವನ ಚಕ್ರ ಧಾರವಾಹಿಯಾಗಿ ಮತ್ತು ನೀಲಗಂಗಾ ಧಾರಾವಾಹಿಗಳಾಗಿ ಪ್ರಸಾರವಾಗಿವೆ.

ಚಲನಚಿತ್ರ : ೧) "ಹಸಿಮಾಂಸ ಮತ್ತು ಹದ್ದುಗಳು" ಕಾದಂಬರಿಯು 'ಹೆಣ್ಣಿನ ಕೂಗು' ಎಂಬ ಹೆಸರಿನಿಂದ ಸಿನೀಮಾ ಆಗಿ ಜನರ ಮತ್ತು ವಿಮರ್ಶಕರ ಮೆಚ್ಚುಗೆ ಪಡೆದಿದೆ.

೨) 'ಬದಲಾಗುವ ಬಣ್ಣಗಳು' 'ಅವಾಂತರ' ಕಾದಂಬರಿಗಳು ಸಿನೀಮಾಕ್ಕಾಗಿ ಹಕ್ಕುಗಳನ್ನು ಪಡೆದುಕೊಂಡಿವೆ.

ಪಠ್ಯ ಪುಸ್ತಕ : ೧) 'ಕಲ್ಲರಳಿ ಹೂವಾಗಿ' ಕತೆ ೧೯೮೦-೧೯೯೨ ರ ವರೆಗೆ ೮ನೇ ತರಗತಿಗೆ ಪಠ್ಯವಾಗಿದೆ.

೨) 'ಅವ್ವ ಮತ್ತು ಇತರ ಕತೆಗಳು' ಕಥಾ ಸಂಕಲವನ್ನು ೧೯೯೫ ನೇ ಸಾಲಿನ, ಗುಲಬರ್ಗಾ ವಿಶ್ವವಿದ್ಯಾಲಯದ ಬಿ.ಕಾಂ. ಕೋರ್ಸಿಗೆ ಪಠ್ಯವಾಗಿಸಿದೆ.

೩) 'ಧುಮ್ಮಸು' ಕಾದಂಬರಿ ಕರ್ನಾಟಕ ವಿಶ್ವ ವಿದ್ಯಾಲಯ ಧಾರವಾಡದ ಬಿ.ಕಾಂ. ಕೋರ್ಸಿಗೆ ಪಠ್ಯವಾಗಿ ಇಡಲಾಗಿದೆ. (೧೯೯೬(

೪) 'ಬದುಕು' ಕಾದಂಬರಿಯು ೨೦೦೨ ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಎಂ.ಎ. ಅಂತಿಮಕ್ಕೆ ಪಠ್ಯವಾಗಿದೆ.

೫) 'ಗಿರವಿ' ಕತೆ ಹಾಸನ ಕಾಲೇಜಿನ ಬಿ.ಎ. ತರಗತಿಯ ಪಠ್ಯದಲ್ಲಿ ಸೇರ್ಪಡೆಯಾಗಿದೆ.

೬) 'ಚಿತ್ತಿ ಮತ್ತು ರಿಕ್ಷಾ' ಕತೆ ಮಂಗಳೂರು ವಿಶ್ವವಿದ್ಯಾಲಯದ ಬಿ.ಎ. ಕೋರ್ಸಿನ ಪಠ್ಯದಲ್ಲಿ ಸೇರ್ಪಡೆಯಾಗಿದೆ.

ಸದಸ್ಯತ್ವ : ೧) ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯತ್ವ, ೧೯೯೧-೯೫

೨) 'ಡಾ. ಶಿವರಾಮ ಕಾರಂತ ಪ್ರಶಸ್ತಿ' ಆಯ್ಕೆ ಸಮಿತಿಯ ಸದಸ್ಯತ್ವ (೧೯೯೨).

೩) ಕನ್ನಡ ಪುಸ್ತಕ ಪ್ರಾಧಿಕಾರದ ಸದಸ್ಯತ್ವ ೧೯೯೩-೯೫

೪) ಗುಲಬರ್ಗಾ ವಿಶ್ವವಿದ್ಯಾಲಯದ ಸಿನೆಟ್ ಸದಸ್ಯತ್ವ,(೧೯೮೦-೮೫)

೫) ೨೦೦೦-೨೦೦೧ ನೇ ಸಾಲಿನ ಚಲನಚಿತ್ರ ಪ್ರಶಸ್ತಿ ಆಯ್ಕೆ ಸಮಿತಿಯ ಸದಸ್ಯತ್ವ.

೬) ರಾಜ್ಯದ ಉತ್ತಮ ಶಿಕ್ಷಕ ಆಯ್ಕೆ ಸಮಿತಿಯ ಸದಸ್ಯತ್ವ ೨೦೦೫, ೨೦೦೬, ೨೦೦೭, ೨೦೦೮.

ಅಧ್ಯಕ್ಷತೆ	:	೧) 'ದಾನ ಚಿಂತಾಮಣಿ' ಪ್ರಶಸ್ತಿಯ ಆಯ್ಕೆ ಸಮಿತಿಯ ಅಧ್ಯಕ್ಷತೆ ೨೦೦೧ ೨) ಗುಲಬರ್ಗಾ ಜಿಲ್ಲಾ ಐದನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ೨೦೦೦ ೩) ಶರಣ ಸಾಹಿತ್ಯ ಪರಿಷತ್ತು ಬೆಂಗಳೂರಿನ ಕದಳಿ ಸಮಾವೇಶದ ಸರ್ವಾಧ್ಯಕ್ಷರಾಗಿದ್ದು, ೨೦೦೫ ರಲ್ಲಿ.
ಅಕಾಡೆಮಿಯ ಅಧ್ಯಕ್ಷತೆ	:	ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ಸರಕಾರದಿಂದ ನೇಮಕಾತಿ (೨೦೦೫-೨೦೦೮)
ಸಾಹಿತ್ಯ ಸಮ್ಮೇಳನದ ಅಧ್ಯಕ್ಷೆ,		೭೬ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಳಾಗಿ ಆಯ್ಕೆ 'ಫೆಬ್ರುವರಿ ೧೯, ೨೦, ೨೧ ರಿಂದ ಗದಗ ನಲ್ಲಿ ನಡೆದ ಅಖಿಲ ಭಾರತ ಸಾಹಿತ್ಯ ಸಮ್ಮೇಳನ ೨೦೧೦ ರಲ್ಲಿ.
ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ	:	'ಬದುಕು' ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರತಿಷ್ಠಿತ ಪ್ರಶಸ್ತಿ. ೨೦೦೪ ರಲ್ಲಿ. (ದೆಹಲಿಯಲ್ಲಿ ಪ್ರಶಸ್ತಿ ಪ್ರದಾನ)
ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ	:	ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ. ೧೯೯೨ ರಲ್ಲಿ
ಕರ್ನಾಟಕ ರಾಜ್ಯ ಪ್ರಶಸ್ತಿ	:	೧) ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ೧೯೯೮. ೨) ಕರ್ನಾಟಕ ಸರಕಾರದ ಅತ್ಯುನ್ನತ ಪ್ರತಿಷ್ಠಿತ ಪ್ರಶಸ್ತಿಯಾದ "ದಾನ ಚಿಂತಾಮಣಿ" ಪ್ರಶಸ್ತಿ ೨೦೦೨ ರಲ್ಲಿ ೩) ಬಿ. ಸರೋಜಾದೇವಿ ಸಾಹಿತ್ಯ ಪ್ರಶಸ್ತಿ ೨೦೦೫.
ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಶಸ್ತಿಗಳು	:	೧) 'ಆಘಾತ' ಕಾದಂಬರಿಗೆ ಕನ್ನಡ ಸಾಹಿತ್ಯ ಪರಿಷತ್ತಿನ 'ಮಲ್ಲಿಕಾ' ಪ್ರಶಸ್ತಿ ೧೯೮೩ ೨) 'ದಂಗೆ' ಕಾದಂಬರಿಗೆ ಕನ್ನಡ ಸಾಹಿತ್ಯ ಪರಿಷತ್ತಿನ 'ರಾಜಾರಾಮ್' ದತ್ತಿ ಪ್ರಶಸ್ತಿ'.

ಸಂಘ ಸಂಸ್ಥೆಯ ಪ್ರಶಸ್ತಿಗಳು : ೧) ಕರ್ನಾಟಕ ಲೇಖಕಿಯರ ಸಂಘದ 'ಅನುಪಮ' ಪ್ರಶಸ್ತಿ ಬೆಂಗಳೂರು-೨೦೦೫

೨) 'ಆರ್ಯಭಟ ಪ್ರಶಸ್ತಿ' ಬೆಂಗಳೂರು-೨೦೦೫

೩) 'ವರ್ಷದ ಉತ್ತಮ ಲೇಖಕಿ ಪ್ರಕಾಶಕರ ಮತ್ತು ಲೇಖಕರ ಸಂಘ ಬೆಂಗಳೂರು -೨೦೦೫

೪) "ಆಳ್ವಾಸ್ ನುಡಿಸಿರಿ ಪ್ರಶಸ್ತಿ" ಮೂಡು ಬಿದರೆ-೨೦೦೬

೫) ರತ್ನಮ್ಮ ಸಾಹಿತ್ಯ ಪ್ರಶಸ್ತಿ ಮಂಡ್ಯ-೨೦೦೬

೬) 'ಗೊರೂರು ಪ್ರಶಸ್ತಿ' ಬೆಂಗಳೂರು -೨೦೦೫

೭) ಸಾಹಿತ್ಯ ಪ್ರಶಸ್ತಿ ಧರ್ಮಸ್ಥಳ-೨೦೦೬.

೮) ಪ್ರೊ. ಆಲಗುರ ಪ್ರಶಸ್ತಿ, ಗುಲಬರ್ಗಾ-೨೦೦೯

೯) 'ನೋವು' ಕಾದಂಬರಿಗೆ ಮಾರ್ದನಿ ಪತ್ರಿಕೆಯ ಕಾದಂಬರಿ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ

೧೦) ಗುಲಬರ್ಗಾ ವಿಭಾಗ ಮಟ್ಟದ "ಉತ್ತಮ ಉಪನ್ಯಾಸಕಿ" ಪ್ರಶಸ್ತಿ.

೧೧) 'ಧುಮ್ಮಸು" ಕಾದಂಬರಿಗೆ ಉಮಾಪತಿ ಜುಕ್ಕಿ ಪ್ರತಿಷ್ಠಾನ ಸಿರವಾರದ ಪ್ರಶಸ್ತಿ -೧೯೯೫

೧೨) ಗುಲಬರ್ಗಾದ ಎಸ್.ಆರ್. ಪಾಟೀಲ್ ಪ್ರತಿಷ್ಠಾನದ 'ಗೌರವ ಪ್ರಶಸ್ತಿ' ೧೯೯೮

೧೩) ಗುಲಬರ್ಗಾ 'ಮಹಾಂತ ಜ್ಯೋತಿ' ಪ್ರತಿಷ್ಠಾನದ 'ಕಾಯಕ ರತ್ನ' ಪ್ರಶಸ್ತಿ ೨೦೦೧.

'ಬದುಕು' ಕಾದಂಬರಿಗೆ ಬಂದ ಪ್ರಶಸ್ತಿಗಳು : ೧) ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

೨) ಮಾಣಿಕ ಬಾಯಿ ಪಾಟೀಲ್ ಪ್ರತಿಷ್ಠಾನದ ಪ್ರಶಸ್ತಿ-೨೦೦೧

೩) ಅತ್ತಿಮಬ್ಬೆ ಸಾಹಿತ್ಯ ಪ್ರಶಸ್ತಿ-೨೦೦೧

೪) ಬೆಂಗಳೂರಿನ ಸರ್.ಎಂ. ವಿಶ್ವೇಶ್ವರಯ್ಯ ದಶಮಾನೋತ್ಸವ ಸಾಹಿತ್ಯ ಪ್ರಶಸ್ತಿ-೨೦೦೧ ಗುಲಬರ್ಗಾ ವಿಶ್ವವಿದ್ಯಾಲಯದಿಂದ ರಾಜ್ಯೋತ್ಸವ ಪ್ರಶಸ್ತಿ-೨೦೦೨.

ನೆರೆ ರಾಜ್ಯದ ಪ್ರಶಸ್ತಿ	ಭಾರತೀಯ ಭಾಷಾ ಪರಿಷದ್ ಕೋಲ್ಕತ್ತಾದ "ರಚನಾ ಸಮಗ್ರ ಪ್ರಶಸ್ತಿ ೨೦೧೧-೧೨" ಲಭಿಸಿದೆ, ಪ್ರಶಸ್ತಿ ಪ್ರದಾನ ಕೋಲ್ಕತ್ತಾದಲ್ಲಿ ೩೧.೦೩.೨೦೧೨ ರಂದು, ಈ ಪ್ರಶಸ್ತಿ ಪಡೆದ ಕನ್ನಡದ ಪ್ರಥಮ ಮಹಿಳಾಸಾಹಿತಿ.
ಒಟ್ಟು ಸಾಹಿತ್ಯದ ಮೇಲೆ ವಿಚಾರ ಸಂಕಿರಣ	೧) ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಆಗಸ್ಟ-೨೦೦೪ ೨) ಲೋಹಿಯಾ ಪ್ರಕಾಶನ ಬಳ್ಳಾರಿಯಿಂದ ಮಾರ್ಚ-೨೦೦೫.
ಅಭಿನಂದನಾ ಸಮಾರಂಭ	'ಬದುಕು ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದ ನಿಮಿತ್ತ ಮತ್ತು 'ಬದುಕು' ಕೃತಿಯ ಎರಡನೆಯ ಮುದ್ರಣದ ಬಿಡುಗಡೆ ಸಮಾರಂಭದಲ್ಲಿ ಲೋಹಿಯಾ ಪ್ರಕಾಶನ ಬಳ್ಳಾರಿಯಿಂದ ಮಾರ್ಚ-೨೦೦೫
ಸಾಧಿಸಿದ ಪ್ರಥಮಗಳು	೧) ಕನ್ನಡ ವಿಶ್ವವಿದ್ಯಾಲಯ ಹಂಪಿಯಿಂದ ನಾಡೋಜ ಪ್ರಶಸ್ತಿ ಪಡೆದ ಪ್ರಥಮ ಮಹಿಳಾ ಸಾಹಿತಿ. ೨) ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಪ್ರಶಸ್ತಿ ಪಡೆದ (ಬದುಕು ಕಾದಂಬರಿಗೆ) ಪ್ರಥಮ ಮಹಿಳಾ ಸಾಹಿತಿ. ೩) ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷಳಾಗಿ ಸರಕಾರದಿಂದ ನಾಮಕರಣಗೊಂಡ ಪ್ರಥಮ ಮಹಿಳಾ ಸಾಹಿತಿ. ೪) ಹೊರ ರಾಜ್ಯವಾದ ಕೋಲ್ಕತ್ತಾದ ಭಾರತೀಯ ಭಾಷಾ ಪರಿಷದ್ ಕೋಲ್ಕತ್ತಾದ "ರಚನಾ ಸಮಗ್ರ ಪ್ರಶಸ್ತಿ ೨೦೧೧-೧೨ ಪಡೆದ ಕನ್ನಡದ ಪ್ರಥಮ ಮಹಿಳಾ ಸಾಹಿತಿ.

ಸನ್ಮಾನ ಮತ್ತು ಸಮಾರಂಭಗಳು :

೧) ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಗುಲಬರ್ಗಾದಿಂದ ಮೂರು ಬಾರಿ ಸನ್ಮಾನ. ೧) ೧೯೮೩, ೨) ೨೦೦೧, ೩) ೨೦೦೨ ರಲ್ಲಿ

೨) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಸನ್ಮಾನ ೨೦೦೨ ರಲ್ಲಿ ೨೦೦೩, ೨೦೦೪ ರಲ್ಲಿ

೩) ಕನ್ನಡ ಪುಸ್ತಕ ಪ್ರಾಧಿಕಾರದ ಕನ್ನಡ ಜಾಗೃತಿ ಸಮಾವೇಶದಲ್ಲಿ ಸನ್ಮಾನ.

೪) ವಿವಿಧ ಸಂಘ ಸಂಸ್ಥೆಯಿಂದ ಮತ್ತು ಸಮಾರಂಭಗಳಲ್ಲಿ ಸನ್ಮಾನಿಸಲಾಗಿದೆ.

೫) ಸ್ವಾತಂತ್ರ್ಯ ಸುವರ್ಣ ಮಹೋತ್ಸವದ ನಿಮಿತ್ತ ದೆಹಲಿಯಲ್ಲಿ ನಡೆದ 'ಜಾಥಾ' ದಲ್ಲಿ ಕರ್ನಾಟಕದ ಸಾಹಿತಿಯಾಗಿ ಪಾಲ್ಗೊಳ್ಳುವಿಕೆ ೧೯೯೭ ಆಗಸ್ಟ್.

೬) ಎನ್.ವಿ. ಕಾಲೇಜು ಗುಲಬರ್ಗಾದಿಂದ ಸನ್ಮಾನ ೨೦೦೫.

೭) ಅಂಬೇಡ್ಕರ ಡಿಗ್ರಿ ಕಾಲೇಜಿನಿಂದ ೨೦೦೫

೮) ಫೈನ್ ಆರ್ಟ್ ಡಿಗ್ರಿ ಕಾಲೇಜು ಗುಲಬರ್ಗಾದಿಂದ ಸನ್ಮಾನ ೨೦೦೫

೯) ಅಂಬಿಗರ ಚೌಡಯ್ಯ ವೇದಿಕೆ ಗುಲಬರ್ಗಾದಿಂದ ಸನ್ಮಾನ ೨೦೦೫.

೧೦) ಗುಲಬರ್ಗಾ ವಿಶ್ವವಿದ್ಯಾಲಯದಿಂದ ಸನ್ಮಾನ ೨೦೦೫.

೧೧) ಇನ್ನೂ ಅನೇಕ ಸಂಘ, ಸಂಸ್ಥೆಗಳಿಂದ ಸನ್ಮಾನಗಳಾಗಿವೆ.

ಪ್ರಕಟಿತ ಪುಸ್ತಕಗಳು

ಡಾ. ಗೀತಾ ನಾಗಭೂಷಣ
ಅವರ ಪ್ರಕಟಿತ ಪುಸ್ತಕಗಳು

೧.	ತಾವರೆಯ ಹೂವು	೧೯೬೮	ಕಾದಂಬರಿ
೨.	ಚಂದನದ ಚಿಗುರು	೧೯೬೯	ಕಾದಂಬರಿ
೩.	ಮಹಾಮನೆ	೧೯೭೦	ಕಾದಂಬರಿ
೪.	ಮರಳಿನ ಮನೆ	೧೯೭೧	ಕಾದಂಬರಿ
೫.	ಸಪ್ತವರ್ಣದ ಸ್ವಪ್ನ	೧೯೭೩	ಕಾದಂಬರಿ
೬.	ಮಾಪುರ ತಾಯಿಯ ಮಕ್ಕಳು	೧೯೭೮	ಕಾದಂಬರಿ
೭.	ಹಸಿಮಾಂಸ ಮತ್ತು ಹದ್ದುಗಳು	೧೯೭೮-೧೯೯೮	ಕಾದಂಬರಿ
೮.	ಆಘಾತ	೧೯೮೦	ಕಾದಂಬರಿ
೯.	ಅವಾಂತರ	೧೯೮೨	ಕಾದಂಬರಿ
೧೦.	ಚಿಕ್ಕಿಯ ಹರೆಯದ ದಿನಗಳು	೧೯೮೩	ಕಾದಂಬರಿ
೧೧.	ಬದಲಾಗುವ ಬಣ್ಣಗಳು	೧೯೮೪	ಕಾದಂಬರಿ
೧೨.	ನೀಲಗಂಗಾ	೧೯೮೬	ಕಾದಂಬರಿ
೧೩.	ಪ್ರೀತಿಸಿದ್ದು ನಿನ್ನನ್ನೇ	೧೯೮೬	ಕಾದಂಬರಿ
೧೪.	ಮೋಹಾ	೧೯೮೬	ಕಾದಂಬರಿ
೧೫.	ನಿನ್ನ ತೋಳುಗಳಲ್ಲಿ	೧೯೮೭	ಕಾದಂಬರಿ
೧೬.	ನಿನ್ನೊಲವು ನನಗಿರಲಿ	೧೯೮೭	ಕಾದಂಬರಿ
೧೭.	ಸವತಿ ಶ್ರೀಗಂಧ	೧೯೮೮	ಕಾದಂಬರಿ
೧೮.	ನನ್ನ ನಿನ್ನ ನಡುವೆ	೧೯೯೨	ಕಾದಂಬರಿ
೧೯.	ಚೈತ್ರದ ಹಾಡು	೧೯೯೩	ಕಾದಂಬರಿ
೨೦.	ಧುಮ್ಮಸು	೧೯೯೪	ಕಾದಂಬರಿ
೨೧.	ಏರಿಳಿತಗಳು	೧೯೯೫	ಕಾದಂಬರಿ
೨೨.	ಆಸರೆಗಳು	೧೯೯೬	ಕಾದಂಬರಿ

೨೩.	ನನ್ನ ಒಲವು ನಿನ್ನ ಚೆಲವು	೧೯೯೭	ಕಾದಂಬರಿ
೨೪.	ದಂಗೆ	೧೯೯೭	ಕಾದಂಬರಿ
೨೫.	ಅಭಿಮಾನ	೧೯೯೮	ಕಾದಂಬರಿ
೨೬.	ಬದುಕು	೨೦೦೧	ಕಾದಂಬರಿ
೨೭.	ಕಾಗೆ ಮುಟ್ಟಿತು	೨೦೦೨	ಕಾದಂಬರಿ
೨೮.	ದುರಗ ಮುರಗಿಯರ ಸಂಸ್ಕೃತಿ (ಉಪಸಂಸ್ಕೃತಿಮಾಲೆ ಸಾಹಿತ್ಯ ಅಕಾಡೆಮಿ ಪ್ರಕಟ)	೧೯೯೭	ಸಂಶೋಧನೆ
೨೯.	ಹೇಮಣ್ಣ (ಮುತ್ತಿನಹಾರ ಮಾಲಿಕೆ ಕರ್ನಾಟಕ ಸಾಹಿತ್ಯ ಅಕಾಡೆಮಿ)	೧೯೯೮	ಸಂಪಾದನೆ
೩೦.	ಜ್ವಲಂತ	೧೯೮೯	ಕಥಾ ಸಂಕಲನ
೩೧.	ಅವ್ವ ಮತ್ತು ಇತರ ಕಥೆಗಳು	೧೯೯೩	ಕಥಾ ಸಂಕಲನ
೩೨.	ಬಾಕಿ	೨೦೧೨	ಕಾದಂಬರಿ
೩೩.	ಕಪ್ಪು ನೆಲ-ಕೆಂಪು ಹೂವು	೨೦೧೩	ಕಾದಂಬರಿ
೩೪.	ಗುಳೆ	೨೦೧೩	ಕಾದಂಬರಿ
೩೫.	ಕಿಚ್ಚಿಲ್ಲದ ಬೇಗೆಯಲ್ಲಿ ಬೆಂದೆನವ್ವಾ	೨೦೧೨	ಕಥಾ ಸಂಕಲನ

ಪರಾಮರ್ಶನ ಗ್ರಂಥಗಳು

ಪರಾಮರ್ಶನ ಗ್ರಂಥಗಳು

ಕ್ರ. ಸಂ.	ಗ್ರಂಥದ ಹೆಸರು	ಲೇಖಕರ ಹೆಸರು	ಪ್ರಕಾಶನದ ವರ್ಷ
೧.	ಮಹಿಳೆ ಸಮಾಜ ಮತ್ತು ಸಂಸ್ಕೃತಿ	ಇಂದಿರಾ ಆರ್.	೨೦೦೨
೨.	ಸ್ತ್ರೀವಾದಿ ಪರಿಕಲ್ಪನೆ	ನಾವಡಗಾಯತ್ರಿ	೧೯೯೫
೩.	ಸಂಶೋಧನಾ ವಿಧಾನಗಳು	ನಿರುಪಮಾ	೨೦೦೨
೪.	ಕನ್ನಡ ಕಾದಂಬರಿಯ ಮೊದಲ ಹೆಜ್ಜೆಗಳು	ವಿವೇಕ್ ರೈ	೧೯೯೦
೫.	ಕನ್ನಡ ಕಾದಂಬರಿ ನಡೆದು ಬಂದ ದಾರಿ	ಶಾಂತಿನಾಥ ದೇಸಾಯಿ	೧೯೮೬
೬.	ಕಾದಂಬರಿ ಮತ್ತು ಸಾಮಾನ್ಯ ಮನುಷ್ಯ	ಶೇಷಗಿರಿರಾವ್ ಎಲ್.ಎಸ್.	೧೯೯೦
೭.	ಮಹಿಳೆ ನಡೆದು ಬಂದ ದಾರಿ	ಶಿಂತ್ರಿಸರೋಜಿನಿ	೧೯೭೭
೮.	ಗೀತಾನಾಗಭೂಷಣ, ಕಲಬುರ್ಗಿಯ ಸ್ಪಂದನ	ಸರಸ್ವತಿ ಚಿಮ್ಮಲಗಿ (ಸಂ)	೨೦೦೪
೯.	ವಿಚಯ-ಕನ್ನಡ ಸಾಹಿತ್ಯದ ಒಂದು ಸ್ತ್ರೀವಾದಿ ಅಧ್ಯಯನ	ಸುಮಿತ್ರಾಬಾಯಿ ಬಿ.ಎನ್.	೧೯೯೫
೧೦.	ಧುಮ್ಮಸು	ಗೀತಾನಾಗಭೂಷಣ	೧೯೯೪
೧೧.	ಗೀತಾನಾಗಭೂಷಣ	ಡಾ|| ಎನ್. ಗಾಯತ್ರಿ	೨೦೦೯
೧೨.	ಗೀತಾ ನಾಗಭೂಷಣ ಅವರ ಕಥಾನಕಗಳ ವಿಮರ್ಶಾತ್ಮಕ ಅಧ್ಯಯನ	ಡಾ. ಎಸ್. ಶಶಿರೇಖಾ	೨೦೦೯
೧೩.	ಮಹಿಳಾ ಅಧ್ಯಯನ	ಉಷಾ ಎಂ. (ಸಂ)	೨೦೦೪
೧೪.	ಆಧುನಿಕ ಭಾರತೀಯ ಸಾಹಿತ್ಯ ಮತ್ತು ಇತರ ಲೇಖನಗಳು	ಕೃಷ್ಣಮೂರ್ತಿ ಎಂ.ಜಿ.	೧೯೭೦
೧೫.	ಕನ್ನಡ ಸಾಹಿತ್ಯ ಸಂದರ್ಭ	ಶಿವರುದ್ರಪ್ಪ ಜಿ.ಎಸ್.	೧೯೯೦